ರನ್ನನ ರಸಘಟ್ಟಿ

ಎಂಬ

ರನ್ನನ ಗದಾಯುದ್ಧ ಕಾವ್ಯ ಸಂಗ್ರಹದ
ಹೊಸಗನ್ನಡ ಗದ್ಯಾನುವಾದ

"ಶ್ರೀ ಕವಿರತ್ನ"

ಹಿಂದ್ ಕಿತಾಬ್ಸ್ ಲಿಮಿಟೆಡ್
ಬೊಂಬಾಯಿ : ಬೆಂಗಳೂರು

For favour of an early review

With best compliments from

HIND KITABS LIMITED

261-263, HORNBY ROAD, BOMBAY

BANGALORE BRANCH

11, ಜವಾಹರಲಾಲ್ ಸ್ಟ್ರೀಟ್, ಶೇಷಾದ್ರಿಪುರಂ

ಬೆಂಗಳೂರು ೩

ರನ್ನನ ರಸಘಟ್ಟಿ

ಎಂಬ

ರನ್ನನ ಗದಾಯುದ್ಧ ಕಾವ್ಯ ಸಂಗ್ರಹದ
ಹೊಸಗನ್ನಡ ಗದ್ಯಾನುವಾದ

ಜಿ. ಪಿ. ರಾಜರತ್ನಂ

Rannana Rasagatti
by
G. P. Rajaratnam.

ಹಿಂದ್ ಕಿತಾಬ್ಸ್ ಲಿಮಿಟೆಡ್
ಬೊಂಬಾಯಿ : ಬೆಂಗಳೂರು

Hind Kitabs Ltd.
Bombay. Bangalore.
price: Rs: 1-4-0

ಮೊದಲನೆಯ ಮುದ್ರಣ
೧, ಆಗಸ್ಟ್, ೧೯೪೮

ಬೆಲೆ
ಒಂದು ರೂಪಾಯಿ ನಾಲ್ಕಾಣೆ

ಬೆಂಗಳೂರಿನ ಬಿ. ಬಿ. ಡಿ. ಪವರ್ ಪ್ರೆಸ್ಸಿನಲ್ಲಿ
ಯು. ನರಸಿಂಹ ಮಲ್ಯರಿಂದ ಮುದ್ರಿತವಾಯಿತು

ಹಿಂದ್ ಕಿತಾಬ್ಸ್ ಲಿಮಿಟೆಡ್ (ಬೊಂಬಾಯಿ)
೧೧, ಜವಾಹರಲಾಲ್ ರಸ್ತೆ, ಶೇಷಾದ್ರಿಪುರ, ಬೆಂಗಳೂರು ೩
ಇವರಿಂದ ಪ್ರಕಟವಾಯಿತು.

ಅರಿಕೆ

'ರನ್ನನ ರಸಘಟ್ಟಿ' ಇದು 'ಗದಾಯುದ್ಧ'ವೆಂಬ ಹಳಗನ್ನಡ ಚಂಪೂಕಾವ್ಯದ ಕಥಾಸಂಗ್ರಹವನ್ನು ಹೊಸಗನ್ನಡ ಅನುವಾದದಲ್ಲಿ ತಂದಿರುವ ಪುಸ್ತಕ. ಇದರ ಮೂಲವಾದ **'ಗದಾಯುದ್ಧ'** ಎಂಬುದಕ್ಕೆ **'ಸಾಹಸಭೀಮ ವಿಜಯ'** ಎಂದೂ ಹೆಸರು. ಇದು ಭೀಮನ ಸಾಹಸಗಳನ್ನು, ಎಂದರೆ ಮುಖ್ಯವಾಗಿ ಅವನು ದುರ್ಯೋಧನನ ತೊಡೆಯೊಡೆದುದನ್ನೂ ಅವನ ಕೀರೀಟವನ್ನು ಒದ್ದುದನ್ನೂ ಅದಕ್ಕೆ ಪೂರ್ವಾಪರವೆನ್ನಿಸಿದ ಕಥಾಭಾಗಗಳನ್ನೂ ನಿರೂಪಿಸುವ ಗ್ರಂಥ.

ಈ 'ಗದಾಯುದ್ಧ'ವನ್ನು ಬರೆದವನ ಹೆಸರು **ರನ್ನ,** ಅಥವಾ ರತ್ನ. ಈತನು ಹುಟ್ಟಿದ ವರ್ಷ—ಕ್ರಿ.ಶ. ೯೪೯. ಈತನು ಹುಟ್ಟಿದ ಊರು—ಈಗ ಉತ್ತರ ಕರ್ನಾಟಕದ ಜಮುಖಂಡಿಯ ಬಳಿಯ ಮುಧೋಳ್; ಆಗ ಅದಕ್ಕೆ 'ಮುದುವೊಳಲು' ಎಂದು ಹೆಸರಿತ್ತು. ಈತನಿಗೂ ಈತನ ತಾಯಿತಂದೆಗೂ ಜೈನಧರ್ಮದಲ್ಲಿ ಶ್ರದ್ಧೆ. ಈತನ ತಂದೆ ವೃತ್ತಿಯಲ್ಲಿ ಬಳೆಗಾರ. ರನ್ನನ ಅಣ್ಣಂದಿರು ಮೂವರೂ ತಂದೆಯ ವೃತ್ತಿಯನ್ನೇ ಅನುಸರಿಸಿದರು. ಆದರೆ ಕಿರಿಯವನಾದ ರನ್ನನು ಮಾತ್ರ, ತನ್ನ ಪುಣ್ಯಕರ್ಮದ ಪರಿಪಾಕದಿಂದ, ಸರಸ್ವತಿಯನ್ನು ಆರಾಧಿಸಿ ಪಾಂಡಿತ್ಯವನ್ನು ಪಡೆದನು, ಕವಿತಾಶಕ್ತಿಯನ್ನು ಸಂಪಾದಿಸಿದನು, ಕವಿಚಕ್ರವರ್ತಿ ಎಂದು ಮನ್ನಣೆಪಡೆದನು.

ಈ ರನ್ನನು **ಪರಶುರಾಮ ಚರಿತ, ಚಕ್ರೇಶ್ವರ ಚರಿತ, ಅಜಿತ ತೀರ್ಥಂಕರ ಪುರಾಣ ತಿಲಕ** ಮತ್ತು **ಸಾಹಸಭೀಮ ವಿಜಯ** ಎಂಬ ನಾಲ್ಕು ಕೃತಿಗಳನ್ನು ಇದೇ ಕ್ರಮದಲ್ಲಿ ರಚಿಸಿದನು. ಇವುಗಳಲ್ಲಿ ಮೊದಲಿನ ಎರಡು ಸಿಕ್ಕಿಲ್ಲ, ನಷ್ಟವಾಗಿವೆ; ಆದರೆ ಚಕ್ರೇಶ್ವರ ಚರಿತವನ್ನು ಸುಮಾರು ಕ್ರಿ. ಶ. ೯೮೧–೮೨ರ ವೇಳೆಗೆ ಮುಗಿಸಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಕಡೆಯ ಎರಡೂ ದೊರಕಿವೆ. ಅವುಗಳಲ್ಲಿ 'ಅಜಿತಪುರಾಣ'ದ ರಚನಾಕಾಲ ಕ್ರಿ. ಶ. ೯೯೩ ಎಂಬುದು ನಿರ್ಣೀತವಾಗಿದೆ. 'ಗದಾಯುದ್ಧ'ವು 'ಅಜಿತಪುರಾಣ'ದ ಅನಂತರ

ಬರೆದುದಾಗಿರಬೇಕೆಂದು ಎಲ್ಲರೂ ಒಪ್ಪಿರುವರಾದರೂ ಎಷ್ಟು ವರುಷ ಗಳ ಅನಂತರ ಎಂಬುದು ನಿಖರವಾಗಿಲ್ಲ. ಅಂತೂ 'ಗದಾಯುದ್ಧ' ವನ್ನು ಹತ್ತುಹನ್ನೊಂದನೆಯ ಶತಮಾನಗಳ ಸಂಧಿಕಾಲದ ಹತ್ತಿರ ನಿಲ್ಲಿಸಬಹುದು.

ರನ್ನನು ಈ ತನ್ನ ಕಡೆಯ ಕೃತಿಯನ್ನು 'ಸಾಹಸಭೀಮ ವಿಜಯ' ವೆಂದು ಕರೆದಿದ್ದರೂ, ಇದು 'ಗದಾಯುದ್ಧ'ವೆಂದು ಆತನ ಕಾಲದಲ್ಲಿಯೇ ಹೆಸರುಗೊಂಡಿದ್ದರೂ ಇದರ ಕಥೆ ಕೇವಲ ಭೀಮನ ವಿಜಯಕ್ಕೆ ಮಾತ್ರ ಅಂಟಿಕೊಂಡದ್ದಲ್ಲ, ಬರಿಯ ಗದಾಯುದ್ಧವಷ್ಟನ್ನೇ ಕುರಿತದ್ದಲ್ಲ. ರನ್ನನೇ ಹೇಳುವಂತೆ "ಒಳಪೊಕ್ಕು ನೋಡೆ, ಭಾರತದ ಒಳಗಣ ಕಥೆಯೆಲ್ಲಂ ಈ ಗದಾಯುದ್ಧದೊಳ್ ಅಂತು ಒಳಕೊಂಡತ್ತು—ಎನೆ, ಸಿಂಹಾವಲೋಕನ ಕ್ರಮದಿಂದ" ಸಮಸ್ತ ಭಾರತವನ್ನು ಇದರಲ್ಲಿ ಸಂಗ್ರಹಿಸಿದ್ದಾನೆ.

ರನ್ನನು ಈ 'ಗದಾಯುದ್ಧ'ದಲ್ಲಿ ಹೀಗೆ ಭಾರತದೊಳಗಣ ಕಥೆ ಯೆಲ್ಲವನ್ನೂ ಸಂಗ್ರಹಿಸುವುದಕ್ಕೆ ಮೊದಲೇ ಸುಮಾರು ಐವತ್ತು ವರುಷ ಗಳಿಗೂ ಮಿಕ್ಕು ಹಿಂದೆ, **ಪಂಪ** ಎಂಬ ಇನ್ನೊಬ್ಬ ದೊಡ್ಡ ಕವಿ—ಆತನೂ ರನ್ನನಂತೆಯೇ ಜೈನಮತಸ್ಥ—ಒಂದು ಭಾರತವನ್ನು 'ಕಥೆಯ ಮೆಯ್ ಕಿಡಲೀಯದೆ' ಕನ್ನಡದಲ್ಲಿ ಬರೆದಿದ್ದನು. ಇದನ್ನು ಆತನು 'ಸಮಸ್ತ ಭಾರತ'ವೆಂದು ವರ್ಣಿಸಿ, ತನಗೆ ಪೋಷಕನಾಗಿದ್ದ ಅರಿಕೇಸರಿ ಎಂಬ ರಾಜನನ್ನು ಭಾರತದ ಅರ್ಜುನನಿಗೆ ಹೋಲಿಸಿ, ತನ್ನ ಭಾರತಕಥೆಗೆ ಅರ್ಜುನನನ್ನೇ ನಾಯಕನನ್ನಾಗಿ ಮಾಡಿ, ತನ್ನ ಕೃತಿಯನ್ನು **'ವಿಕ್ರಮಾರ್ಜುನ ವಿಜಯ'** ಎಂದು ಕರೆದನು. ಈ ಕಾವ್ಯ ಸೃಷ್ಟಿಯಾಗುವ ಕಾಲಕ್ಕೆ ಆಗ ತಾನೆ ಹುಟ್ಟಿ ಕಣ್ಣುಬಿಡುತ್ತಿದ್ದ ರನ್ನನು ತನ್ನ ಪರಿಣತ ವಯಸ್ಸಿನಲ್ಲಿ ಪಂಪನ ಪ್ರಭಾವಕ್ಕೆ ಸಿಕ್ಕಿ, ಆತನಂತೆಯೇ ತಾನೂ ಒಂದು ಸಮಸ್ತಭಾರತವನ್ನು ಬರೆಯಲು ತೊಡಗಿದನು; ತನ್ನ ಪೋಷಕ ನಾಗಿದ್ದ ಚಾಳುಕ್ಯರ ಸತ್ಯಾಶ್ರಯನನ್ನು ಭಾರತದ ಭೀಮನಿಗೆ ಹೋಲಿಸಿ, ತನ್ನ ಭಾರತದ ಕಥೆಗೆ ಭೀಮನನ್ನೇ ನಾಯಕನನ್ನಾಗಿ ಮಾಡಿಕೊಂಡು ತನ್ನ ಕೃತಿಯನ್ನು **'ಸಾಹಸಭೀಮ ವಿಜಯ'** ಎಂದು ಕರೆದನು. ಅಷ್ಟು ಮಾತ್ರವಲ್ಲ, ಗದಾಯುದ್ಧದ ಪ್ರಕರಣವನ್ನು ವರ್ಣಿಸುವ ಪಂಪಭಾರತದ

ಹದಿಮೂರನೆಯ ಆಶ್ವಾಸದಲ್ಲಿ ತಾನು ಸ್ವಲ್ಪ ಕಡ ತೆಗೆದುಕೊಂಡು, ತುಂಬ ಜಾಣತನದಿಂದ ವ್ಯಾಪಾರಮಾಡಿ, ತಾನು ತಂದ ಬಂಡವಾಳವನ್ನು ಇತೋಽಪ್ಯತಿಶಯವಾಗಿ ಅಭಿವೃದ್ಧಿಗೊಳಿಸಿದನು. ಹೀಗೆ, ಈ 'ಗದಾಯುದ್ಧ'ದ ಕಥೆ ಹಳೆಯದೇ ಆದರೂ, ಪಂಪನಂತೆಯೇ ಈತನಾದರೂ 'ಕತೆಯ ಮೆಯ್ ಕಿಡಲೀಯದೆ' ಹೇಳಿದ್ದರೂ, ಈತನ 'ಕಾವ್ಯರೇಖೆ', ಈತನು ಹಿಡಿದ ಹೊಸ ಹಾದಿ, ಈತನ 'ಸಿಂಹಾವಲೋಕನಕ್ರಮ' ಸಂಪೂರ್ಣವಾಗಿ ಈತನದೇ ; ಇದು 'ಉಪಮಾತೀತ'ವಾದುದೇ.

ಇಂತಹ ಒಂದು ಪ್ರಾಚೀನ ಉದ್‌ಗ್ರಂಥವನ್ನು ಸಮಿಾಪಿಸಲು ಈ ಹೊತ್ತಿನವರಿಗೆ ಮೊದಲ ಅಡ್ಡಿಯೆಂದರೆ ಅದರ ಭಾಷೆ. ಈ ಮೊದಲ ಅಡ್ಡಿಯನ್ನು ಆದಷ್ಟು ಕಡಿಮೆಮಾಡುವುದು ಈ ಪುಸ್ತಕದ ಮುಖ್ಯ ಉದ್ದೇಶ. ಮೂಲದಲ್ಲಿನ ಹಳಗನ್ನಡ ಪದ್ಯಗಳಿಗೂ ಗದ್ಯಭಾಗಗಳಿಗೂ ಅನುಸಾರವಾದ ಹೊಸಗನ್ನಡ ಅನುವಾದವನ್ನು ಇಲ್ಲಿ ಕೊಟ್ಟಿದೆ. ಅಲ್ಲಿಗೂ ಅರ್ಥವು ಕಷ್ಟವಾಗಿ ನಿಂತ ಹಲವಾರು ಪದಗಳಿಗೆ ಅರ್ಥ ವಿವರಣೆಯನ್ನು ಪುಸ್ತಕದ ಕೊನೆಯಲ್ಲಿ ಸೇರಿಸಿದೆ. ಈ ಅನುವಾದವನ್ನು ಓದಿ ಏನಾದರೂ ಮೂಲದ ಬಗೆಗೆ ಕುತೂಹಲವುಂಟಾದರೆ, ಅದನ್ನು ಕೊಂಚಮಟ್ಟಿಗೆ ತೀರಿಸುವುದಕ್ಕಾಗಿ 'ಗದಾಯುದ್ಧ'ದ ಹೆಚ್ಚು ಪ್ರಸಿದ್ಧವಾದ ಕೆಲವು ಖಂಡಗಳನ್ನೂ ಪುಸ್ತಕದ ಕೊನೆಗೆ ಕೊಟ್ಟಿದೆ.

ಈ ಹೊಸ ಗದ್ಯರೂಪದಲ್ಲಿ **ಭಾಷೆ** ಸ್ವಲ್ಪಮಟ್ಟಿಗೆ ಸುಲಭವಾಯಿತೆಂದ ಮಾತ್ರಕ್ಕೆ ರನ್ನಕವಿಯ **ಬಂಧ**ವಾಗಲಿ **ಭಾವ**ವಾಗಲಿ ಸುಲಭವಾಗಿ ಸಿಕ್ಕುವುದೆಂದು ನಿರೀಕ್ಷಿಸಿದರೆ ನಿರಾಶೆಯಾದೀತು. ಹಳಗನ್ನಡ ಗೊತ್ತಿಲ್ಲದವರು ಕೂಡ ರನ್ನನ ಮನೆಯ ಹೊಸಿಲನ್ನು ದಾಟಿ ನಿಲ್ಲುವಷ್ಟು ಸಹಾಯ ಈ ಅನುವಾದದಿಂದ ಆಗುತ್ತದೆಯೆಂದು ನನ್ನ ನಂಬಿಕೆ. ಇನ್ನು ಮನೆಯೊಳಗೆ ಸಲುಗೆ ಬೆಳೆಸುವುದು ಅವರವರ ಅನುಸರಣೆಯ ಆಳತೆಯನ್ನು ಅವಲಂಬಿಸಿಕೊಂಡಿದೆ.

* * * * *

'ಗದಾಯುದ್ಧ'ದ ಈ ಗದ್ಯಾನುವಾದವನ್ನು ಪ್ರಕಟಿಸುವಾಗ, **ದಿವಂಗತ ಎಂ. ಎನ್. ಕಾಮತ್** ಇವರ ಹೆಸರನ್ನು ಜ್ಞಾಪಿಸಿಕೊಳ್ಳ

ದಿದ್ದರೆ ಅಪಚಾರವಾಗುತ್ತದೆ. 'ಗದಾಯುದ್ಧದ ಕತೆ'ಯನ್ನು ಈ ಮೊದಲೇ ಅನೇಕ ವರ್ಷಗಳ ಕೆಳಗೆಯೇ ಕಾಮತರು ಪ್ರಕಟಿಸಿದ್ದರು. ಆದರೆ ಈಚೆಗೆ ಆ ಪುಸ್ತಕ ದೊರಕುತ್ತಿಲ್ಲ. ಅಲ್ಲದೆ, ಆ ಪುಸ್ತಕದ ಉದ್ದೇಶ ಇದರ ಉದ್ದೇಶಕ್ಕಿಂತ ಭಿನ್ನವಾದದ್ದು. ಎಂದರೆ, **ಈ ಪುಸ್ತಕ ಮೂಲದ ಅಕ್ಷರವನ್ನು ಹಿಡಿದು ಮಾಡಿದ ಅನುವಾದ;** ಅವರ ಪುಸ್ತಕ **ರನ್ನನ ಧೋರಣೆಗೆ ಮನ್ನಣೆ ಕೊಟ್ಟು ಹೇಳಿದ ಮುದ್ದಾದ ಕಥೆ.**

ಈ ಪುಸ್ತಕಕ್ಕೆ ನಾನು ಇಟ್ಟಿರುವ '**ರನ್ನನ ರಸಘಟ್ಟಿ**' ಎಂಬ ಹೆಸರಾದರೂ ಹಿರಿಯರೊಬ್ಬರಿಂದ ಕಡತಂದದ್ದೇ.

> "**ಗದಾಯುದ್ಧವು** ಒಂದು '**ರಸಘಟ್ಟಿ**'. ಆದರೆ ಅದರಲ್ಲಿ ಚರಿತ್ರೆ ಯೆಂಬ ಕಸವು ಸಿಕ್ಕಿಕೊಂಡಿದೆ. ಅದನ್ನು ಶೋಧಿಸಿ ತೆಗೆದುಹಾಕಿಬಿಟ್ಟರೆ ಉಳಿದ ಕಾವ್ಯವು ಎಂಥ ರಸಾಯನವಾಗುವುದೆಂಬುದನ್ನು 'ಗದಾಯುದ್ಧ ನಾಟಕ'ದಲ್ಲಿ ನೋಡಬಹುದು."

ಎಂಬ ಈ ಮಾತನ್ನು ಸುಮಾರು ಇಪ್ಪತ್ತುವರ್ಷಗಳ ಹಿಂದೆ ನಾನು ಕೇಳಿದ್ದು, ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ. ಅಧ್ಯಾಪಕರಾಗಿದ್ದ **ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳು** 'ಗದಾಯುದ್ಧ'ವನ್ನು ಕಲಿಸುತ್ತಿದ್ದಾಗ. ಈಚೆಗೆ 'ಗದಾಯುದ್ಧನಾಟಕ'ವನ್ನು ನಾನು ನನ್ನ ವಿದ್ಯಾರ್ಥಿಗಳಿಗೆ ಕಲಿಸಬೇಕಾಗಿ ಬಂದಾಗ, ಅವರು ಮೂಲ ಗದಾಯುದ್ಧದ ಹತ್ತಿರ ಹೋಗಲು ಹೆದರುತ್ತಿದ್ದುದನ್ನು ಕಂಡಾಗ, ಭಾಷೆಯ ಮಟ್ಟಿಗಾದರೂ ಅದನ್ನು ಇಷ್ಟಪಡುವವರ ಹತ್ತಿರಕ್ಕೆ ತಂದುಕೊಟ್ಟರೆ ಆದೀತು ಎಂದು ಅದನ್ನು ಸಂಗ್ರಹಿಸಿ, ಹೊಸಗನ್ನಡದಲ್ಲಿ ಅದನ್ನು ಅನುವಾದ ಮಾಡಿದೆ. ನಾಮಕರಣದ ವೇಳೆ ಬಂದಾಗ, ನನಗೆ 'ಗದಾಯುದ್ಧ'ವನ್ನು ಪಾಠಹೇಳಿದ ಗುರುಗಳು ಕಲಿಸಿದ್ದು ನೆನಪಾಗಿ, ಅದರೊಳಗಿನ ಚರಿತ್ರಾಂಶವನ್ನು ದೂರವಿರಿಸಿದ ಕಾರಣದಿಂದ, ಗದಾಯುದ್ಧಸಂಗ್ರಹದ ಈ ಗದ್ಯರೂಪವನ್ನು '**ರನ್ನನ ರಸಘಟ್ಟಿ**' ಎಂದೇ ಕರೆದಿದ್ದೇನೆ.

ಸಹೃದಯರಿಗೆ ಇದು ಸವಿಯಾಗಲಿ.

೧—೮—೧೯೪೮
ಬೆಂಗಳೂರು

ಜಿ. ಪಿ. ರಾಜರತ್ನಂ

ವಿವರ

ಮುಂದಿನ ಓದಿಗೆ

೧. **ರನ್ನಕವಿ ಪ್ರಶಸ್ತಿ** : ವಿಶ್ವವಿದ್ಯಾನಿಲಯ ಸಂಘ, ಮೈಸೂರು. ೧೯೨೮.

೨. ಗೋವಿಂದ ಪೈ ಅವರ **ಮೂರು ಉಪನ್ಯಾಸಗಳು** : ಕನ್ನಡ ರಿಸರ್ಚ್ ಆಫೀಸ್, ಧಾರವಾಡ, ೧೯೪೦. (ಇದರಲ್ಲಿ 'ರನ್ನನ ಪರಶುರಾಮ ಚರಿತ ಚಕ್ರೇಶ್ವರ ಚರಿತಗಳನ್ನು ಗದಾಯುದ್ಧದ ರಚನಾಕಾಲವನ್ನು ಕುರಿತು' ಎಂಬ ಮೊದಲನೆಯ ಉಪನ್ಯಾಸ.)

೩. ದ. ರಾ. ಬೇಂದ್ರೆ ಅವರ **ಸಾಹಿತ್ಯ-ಸಂಶೋಧನ** : ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೦. (ಇದರಲ್ಲಿ 'ರನ್ನಕವಿ ಪ್ರಶಸ್ತಿ' ಮತ್ತು 'ಗದಾಯುದ್ಧದಲ್ಲಿ ಪ್ರಧಾನ ರಸವಾವುದು?' ಎಂಬ ಎರಡು ಲೇಖನ.)

೪. ಎನ್. ಅನಂತರಂಗಾಚಾರ್ ಅವರ **ಕವಿ ರನ್ನ**: ಮೈಸೂರು. ೧೯೪೬.

೫. ರಂ. ಶ್ರೀ. ಮುಗಳಿ ಅವರ **ರನ್ನನ ಕೃತಿರತ್ನ**: ಕರ್ನಾಟಕ ತರುಣಸಂಘ, ರಾಯಚೂರು. ೧೯೪೬.

ರನ್ನನ ರಸಘಟ್ಟಿ

ಪ್ರವೇಶ

(1) ಕೃತಿ—ಪ್ರಸಿದ್ಧವಾದ ಗದಾಯುದ್ಧ; ಕೃತಿಗೆ ಈಶ್ವರ—ಚಕ್ರವರ್ತಿ
ಯಾದ ಸಾಹಸಭೀಮ; ಅಲಂಕೃತಿಯಾದ ಕೃತಿಯನ್ನು ವಿರಚಿಸಿದವನು
ಕವಿರತ್ನ—ಎಂದ ಮೇಲೆ ಏನು ವರ್ಣಿಸಬೇಕು!

(2) ಮೊದಲಿನಲ್ಲಿ ಬದ್ಧವಿರೋಧದಿಂದ ಬದುಕಿದ ಕುಂತೀಪುತ್ರರಲ್ಲಿ
ಭೀಮನು; ಪ್ರಸಿದ್ಧರಾದ ಗಾಂಧಾರಿಯ ಪುತ್ರರಲ್ಲಿ ಮೊದಲಿಗ ದುರ್ಯೋ
ಧನ; ಧರ್ಮಯುದ್ಧದಲ್ಲಿ ಹಾಗೆ ಆತನನ್ನು ಇಕ್ಕಿ ಕೊಂದನಾದುದರಿಂದ
ಭೀಮನು ಜಯೋದ್ದಾಮನು—ಎಂಬುದನ್ನು ಹೇಳುವ ಹಾಗೆ ಇದು
ವನ್ನು ಯುದ್ಧವೆನ್ನಿಸುವಂತೆ ಗದಾಯುದ್ಧವನ್ನು ಹೇಳಿದನು.

(3) ಒಳಹೊಕ್ಕು ನೋಡಿದರೆ, ಭಾರತದ ಒಳಗಣ ಕಥೆಯೆಲ್ಲವೂ ಈ
ಗದಾಯುದ್ಧದಲ್ಲಿ ಒಳಕೊಂಡಿತ್ತು—ಎನ್ನುವಂತೆ ಸಿಂಹಾವಲೋಕನ
ಕ್ರಮದಿಂದ ಕವಿರನ್ನನು ತಿಳಿಸಿದನು.

(4) ‘ಕವಿಗಳಲ್ಲಿ ಆ ಪುರಾತನ ಕವಿಪುಂಗವರು ಒಳ್ಳೆಯವರು. ಈಗ
ತ್ಕವಿಗಳು ಇಲ್ಲ’ ಎನ್ನಬೇಡ. ಅವರು ಹೋದರೆ ಅವರ ಕಾವ್ಯವಿನ್ನು
ದೆ. ಗುಣದೋಷವನ್ನು ಒರೆಯಿಟ್ಟು ಪರೀಕ್ಷಿಸಿ ನೋಡಿದರೆ ತಾನೇ
ಳಿಯುವುದಿಲ್ಲವೆ! ಪುರಾತನ ನೂತನ ಕಾವ್ಯರೀತಿಯನ್ನು ಪಂಡಿತರು
ದು ನೋಡುತ್ತೀರು.

ಭೀಮನ ಭೀಮಪ್ರತಿಜ್ಞೆ

ಕುರುರಾಜನ ಸೈನ್ಯದ ಸಾಲೆಂಬ ಹತ್ತಿಗೆ ವಾಯು, ಕೌರವ್ಯರೆಂಬ ಮದದಾನೆಗಳಿಗೆ ಸಿಂಹ, ದುಶ್ಶಾಸನನ ರಕ್ತದಿಂದ ಕೆಂಪಾದ ಮುಖವುಳ್ಳವನು, ದುರ್ಯೋಧನನ ತೊಡೆಗಳೆಂಬ ಪರ್ವತಗಳಿಗೆ ವಜ್ರ, ಕುರುರಾಜನ ರತ್ನಕಿರೀಟವೆಂಬ ಎತ್ತರವಾದ ಶಿಖರಕ್ಕೆ ಕಾಲನ್ನು ಕದನದಲ್ಲಿ ಘಟ್ಟಿಸಿದವನು—ಎಂದೆಂಬುದಾಗಿ ರಣಯಶಃಶ್ರೀರಾಮನಾದ ಭೀಮನನ್ನು ಅಭಿವರ್ಣಿಸುತ್ತೇನೆ.

ಹಿಡಿಂಬ ಜಟಾಸುರ ಜರಾಸಂಧ ಇವರ ಸಂಧಿಗಳನ್ನು ಇರಿದು, ಬಕನನ್ನು ಸಂಹರಿಸಿದವನು, ಕೀಚಕನನ್ನು ಮಥಿಸಿದವನು, ಆನೆಗಳಂತಿದ್ದ ಶತ್ರುಗಳ ಗುಂಪನ್ನು ನಾಶಮಾಡಿದ ಸಿಂಹಬಲನು, ದುಷ್ಟನಾದ ದುಶ್ಶಾಸನನ ಕೃಷ್ಣರಕ್ತಜಲದಿಂದ ಕೂಡಿದವನು, ಕುರುಗಳಿಗಾಗಿ ಹುಟ್ಟಿದ ಪ್ರಳಯದ ಬೆಂಕಿ, ಸುಯೋಧನನ ಊರು ಕಿರೀಟಗಳನ್ನು ಒಡೆಯುವ ಪ್ರತಿಜ್ಞಾಕ್ಷರಗಳ ಸಾಲನ್ನು ಇಟ್ಟ ವಿಶಾಲವಾದ ನಿಶ್ಚಲಶಿಲಾಸ್ತಂಭ—ಎನ್ನಿಸಿದ ಹಿಡಿಂಬಾಂತಕನು ಕುರುಕ್ಷೇತ್ರದಲ್ಲಿ ಪ್ರಳಯಕಾಲದ ಉಗ್ರಾಂತಕನ ಹಾಗೆ ಭಯಂಕರಾಕಾರವನ್ನು ಒಳಕೊಂಡಿದ್ದನು.

ಆ ಪ್ರಸ್ತಾವದಲ್ಲಿ ದೃಷ್ಟಾದೃಷ್ಟಪರಂಪರೆ ಎಂಬ ವೃದ್ಧಕಂಚುಕಿಯೂ ಬುದ್ಧಿಮತಿ ಎಂಬ ಮೇಳದ ಕೆಳದಿಯೂ ಜೊತೆಯಲ್ಲಿರಲು; ದೇವಾಸುರರ ಯುದ್ಧಕ್ಕೆ ಕರಗವನ್ನು ಹೊತ್ತಳೆಂಬಂತೆ ಅನವರತವಾದ ಕಣ್ಣೀರಿನ ಧಾರೆಯ ಪ್ರವಾಹದಿಂದ ಸುತ್ತಲ್ಪಟ್ಟ ಪಲ್ಲವನೇತ್ರೆಯೂ ಸಹಿಸಲಾಗದ ಪರಿಭವವೆಂಬ ಬೆಂಕಿಯಿಂದ ಬೆಂದು ಸುಟ್ಟ ದೇಹವುಳ್ಳವಳೂ ಆಗಿ; ಯಜ್ಞವೇದಿಯಲ್ಲಿ ಆಗಿಬಂದವಳೂ ಯಜ್ಞದಲ್ಲಿ ಹುಟ್ಟಿದವಳೂ ದ್ರುಪದರಾಜನ ಉಪವನಕ್ಕೆ ಜಯಪತಾಕೆಯೂ ಎನ್ನಿಸಿದ ಪಾಂಚಾಲರಾಜತನೂಜೆ ಪವಮಾನತನೂಜನಲ್ಲಿಗೆ ಬಂದು—

"ನಿನ್ನ ಪುಣ್ಯದಿಂದ ಸುಯೋಧನನು ಒಬ್ಬನು ಹೊರತಾಗಿ ಕೌರವರು ನಾಶವಾದರು. ಗಂಗೆಯ ಮಗನೂ ಧೃತರಾಷ್ಟ್ರನೂ ಇದ್ದು ಹೇಳಿದರೆ, ನಮ್ಮ ಅರಸನಾದ ಧರ್ಮರಾಯನು ಪುನಃ ಅನುಕೂಲ

ವಾಗುವನು ಎಂದು ನನಗೆ ಕಳವಳವಾಗಿದೆ. ನಿನ್ನ ಸಂಶಯವನ್ನು ಕಳೆ, ಕೌರವಾಂತಕನೆ. . . ದುಷ್ಟನಾದ ದುಶ್ಶಾಸನನ ವಕ್ಷಃಸ್ಥಲದಿಂದ ಚಿಮ್ಮಿದ ಕೃಷ್ಣರಕ್ತಜಲದಿಂದ ಕೋಪವೆಂಬ ಬೆಂಕಿಯನ್ನು ಆರಿಸದೆ ಇನ್ನೂ ಸಡಿಲವಾದ ಕೋಪವನ್ನು ಹೊಂದಿರುವವನಂತೆ ಹಾಗೆ ಇರುವೆಯಲ್ಲಾ. . . . ಅಹಿತರೊಡನೆ ಹೊಂದಿಕೊಳ್ಳುವುದೆ! ಸಂಧಿಮಾಡಿ, ಯಮನ ಮಗನು ಹೇಳಿದರೆ, ನಿಮಗೆ ವನವಾಸವೇ ಶರಣು; ನನಗೂ ಆಗ ಅಗ್ನಿಮುಖದಲ್ಲಿ ಹುಟ್ಟಿದುದರಿಂದ ಅಗ್ನಿಮುಖವೇ ಶರಣು." ಎಂದು ನೊಂದು ನುಡಿಯಲು—

ಮರುನ್ನಂದನನು ಸ್ವಲ್ಪವಾಗಿ ನಗುವ ಮುಖದಾವರೆಯುಳ್ಳವನಾಗಿ ತನ್ನಲ್ಲಿ ತಾನೇ "ಕುರುರಾಜನ ಅನುಜನ ಭೀಕರವಾದ ಕೈಯಿಂದ ಬಿಚ್ಚಿಬಿದ್ದ ನೀಲವಾದ ಕಬರಿಯ ಭಾರವನ್ನು ಹಿಡಿದು ಪರಿಭವಿಸಿದರೆ, ಕೃಷ್ಣೆಗೆ ಕೋಪವೂ ಮನಸ್ತಾಪವೂ ಅತಿಯಾಗಿ ಆಗದೆ ಇರುತ್ತದೆಯೆ!" ಎಂದು ಗಮನಿಸಿ—

"ಧಾತ್ರಿಯನ್ನೂ ಈ ಹುತಾಶನ ಪುತ್ರಿಯನ್ನೂ ದ್ಯೂತದಲ್ಲಿ ಸುಮ್ಮನೆ ಸೋಲಲಿಲ್ಲ. ಯಮಪುತ್ರನು ಅಂದೇ ರಿಪುಗೆ ಕ್ಷತ್ರಿಯ ತೇಜಸ್ಸನ್ನೂ ಸೋತವನಾಗಲೇಬೇಡವೆ!" ಎಂದು ಅನಿಲಸುತನು ತನ್ನ ಅಣ್ಣನಿಗೆ ಮುನಿದು—

"ಪರವಶದಲ್ಲಿದ್ದರೋ, ಅಥವಾ ಪರಾರ್ಜಿತಪ್ರಾಣರು ಆದರೋ! ಇಲ್ಲದಿದ್ದರೆ ದ್ರೌಪದಿಯನ್ನು ಪರಿಭವಿಸುವಾಗ ವಾಯುಸುತನಿಗೂ ಪಾರ್ಥನಿಗೂ ನೋಡುತ್ತಾ ಇರಲಾಗುವುದೆ!" ಎಂದು ತನಗೂ ಅರ್ಜುನನಿಗೂ ಒಟ್ಟಿಗೆ ಮುನಿದು—

"ನರನೂ ನಾನೂ ವಿನಯವನ್ನೇ ಬಗೆದು, ವಿಕ್ರಮವನ್ನು ಬಗೆಯಲಿಲ್ಲವಲ್ಲಾ. ಆ ದಿನ ಅಣ್ಣನ ಹಿತವಾದ ಸತ್ಯವಚನವೆಂಬ ಮಂತ್ರಾಕ್ಷರದಿಂದ ನನಗೂ ಸಮ್ಮೋಹನವಾದುದಾಯಿತು!" ಎಂದು ಪಶ್ಚಾತ್ತಾಪಪಟ್ಟು—

ಕುರುಕುಲಕ್ಕೆ ವಿಲಯದ ಜ್ವಾಲೆಯೂ ಸುಯೋಧನನಿಗೆ ಪ್ರಳಯಕಾಳಿಯೂ ಆದ ಪಾಂಚಾಲಿಯ ವದನವನ್ನು ನೋಡಿ—"ಕಟ್ಟಿಟ್ಟ

ತಲೆಯ ಕೂದಲಿನ ರಾಶಿ ಕೆದರಿಬಿದ್ದಿರಲು, ನಿನ್ನ ಮುಖದಿಂದ ಕಣ್ಣೀರು ಸುರಿಯುತ್ತಿರಲು, ನಳಿನಾನನೆಯಾದ ನೀನು ಇರಲು, ಕುರುಕುಲಾಂತಕ ನಾದ ಕಲಿಭೀಮನು ಸಡಿಲವಾದ ಕೋಪವುಳ್ಳವನೇ! . . . . ಸತ್ಯ ಪ್ರತಿಜ್ಞನೆನ್ನುವಂತೆ, ಕುರುಪತಿಯ ಊರು ಕಿರೀಟಭಂಗವನ್ನು ಪಡೆದು ಜಗತ್ಸ್ತುತ್ಯ ಕೃತಕೃತ್ಯನೆನ್ನಿಸದೆ, ಭೀಮನು ಸತ್ಯಾಶ್ರಯನೆಂಬ ಹೆಸರಿಗೆ ಹೆಗಲು ಕೊಡುವನೇ! . . . ನೀನು ಅಗ್ನಿಪುತ್ರಿಯಾದವಳು; ನಾನು ವಾಯುವಿನ ಮಗನೇ; ಶತ್ರುರಾಜರಲ್ಲಿ ಸ್ವಲ್ಪವಾದರೂ ಸಂಧಿಯಾಗು ವುದು ತಾನೆ ಹೇಗೆ? ಗಾಳಿಯೂ ಬೆಂಕಿಯೂ ಸೇರಿ ಹಗೆಯನ್ನು ಉರಿ ಸದೆ ಇರುತ್ತದೆಯೆ? . . . ಕೃಷ್ಣೇ, ಪರಾಭವವೆಂಬ ಬೆಂಕಿಯ ಹೊಗೆ ಯಂತೆ ಕಪ್ಪಾಗಿ, ಕುರುಕುಲದ ಜೀವವನ್ನು ಆಕರ್ಷಣ ಮಾಡುವುದರಲ್ಲಿ ಪರಿಣತವಾದ ಇದು ಕಾಲಹಸ್ತವಲ್ಲದೆ, ಪರಮೇಶ್ವರಿ, ಕೇಶಹಸ್ತವಾಗು ತ್ತದೆಯೆ? . . . ಕುರುನಂದನರನ್ನು ಕೊಂದೆ; ಕುರುಪಿಳ್ಳೆಯ ತಮ್ಮನ ನೆತ್ತರನ್ನು ಕುಡಿದೆ; ಪ್ರತಿಜ್ಞೆಮಾಡಿದ ಎರಡನ್ನು ತೀರಿಸಿದೆ; ಇರುವುವು ಎರಡನ್ನು, ಅವನ್ನೂ ತೀರಿಸಿ, ಹಗೆಯನ್ನು ತೀರಿಸದಿರುವೆನೆ? . . . ತೊಡೆ ಗಳನ್ನು ಮುರಿಯುತ್ತೇನೆ; ಕೌರವರಾಜನ ಮಕುಟವನ್ನು ಒದೆಯು ತ್ತೇನೆ; ವೇಣೀಸಂಹಾರ ಮಾಡುತ್ತೇನೆ; ಆದರಿಂದ ನನ್ನ ಸೋತೆನೆಂಬ ಮನಸ್ಸು ಭಾರವಿಲ್ಲದ್ದಾಗುವುದು . . . 'ಕುರುಕುಲದ ರಕ್ತದಿಂದ ಪಾದ ಗಳು ಪದ್ಮದಂತೆ ಆದ ವೃಕೋದರನು ತಳೋದರಿಗೆ ಕಚಬಂಧಬಂಧುರತೆ ಯನ್ನು ಆಗಿಸುವನು. ಆತನು ಪ್ರತಿಜ್ಞೆಮಾಡಿದ ಪ್ರತಿಜ್ಞೆ ಶಿಲಾತಲದ ಅಕ್ಷರ' ಎನ್ನಿಸಿರುವ ಜನರ ಮಾತನ್ನು ಹುಸಿಮಾಡುವೆನೇ! . . . . ಧರ್ಮನ ಮಗನು ಪ್ರಾರ್ಥಿಸಿದರೆ, ಆಕಾಶನದಿಯ ಮಗನು ಮಾಡಿದರೆ, ಸಂಧಿಯಾಗುವುದು ಎಂದು ಮರುಗುವೆನು. ಅಜ್ಜನ ಮಾತನ್ನು ಹಿಂದಿ ಕ್ಕುವೆನು. ಅಜ್ಜನು ಇದ್ದು ತಡೆಯುವುದಾದರೂ ನಾನು ಅವಕಾಶ ಕೊಡುವುದಿಲ್ಲ . . . ವೈರಿಗಳನ್ನು ದಂಡಿಸಿ ಶತ್ರುಬಲದ ರಕ್ತದಿಂದ ಮನೋ ಹರವಾದ ದಂಡದಂತಿರುವ ಈ ಭುಜಾದಂಡವೂ ಯುದ್ಧದಲ್ಲಿ ಭೀಕರ ರಾದ ವಿರೋಧಿಗಳನ್ನು ಸೀಳಿದ ದಂಡನಾದ ಈ ಗದಾದಂಡವೂ ಉಗ್ರ ವಾದ ಸರ್ಪದಿಂದ ವಿಭೀಷಣವಾದ ಯುದ್ಧದಲ್ಲಿ ಸಮರ್ಥವಾದ ಈ

ಧನುರ್ದಂಡವೂ ಇರುವವರೆಗೆ, ದ್ರುಪದನಂದನೆ, ಸಂಧಿಯಾಗಲು ಅವಕಾಶ ಕೊಡುವೆನೇ!" ಎಂದು ಕುರುರಾಜನೆಂಬ ಸಮುದ್ರಕ್ಕೆ ಬಡಬಾಗ್ನಿ ಆದವನು, ಕುರುರಾಜನೆಂಬ ಅರಣ್ಯಕ್ಕೆ ದಾವಾಗ್ನಿ ಆದವನು, ಕುರುರಾಜನೆಂಬ ಅಂಬುಜಕ್ಕೆ ಚಂದ್ರನ ಬೆಳಕು ಆದವನು, ಕುರುರಾಜನೆಂಬ ಪರ್ವತಶ್ರೇಷ್ಠಕ್ಕೆ ವಜ್ರಾಯುಧನಾದವನು, ಕುರುರಾಜನೆಂಬ ಉಗ್ರವಾದ ಕತ್ತಲೆಗೆ ಶತ್ರುವಾದವನು, ಕುರುರಾಜನೆಂಬ ಗಜೇಂದ್ರಕ್ಕೆ ಕಂಠೀರವನಾದವನು ತನ್ನ ಕಾಂತೆಯ ಮುಂದೆ ಹಿರಿದಾಗಿ ಪ್ರತಿಜ್ಞೆ ಮಾಡಿ ನುಡಿದನು.

ಹೀಗೆ, ಕೌರವ್ಯರ ಕುಲಕ್ಕೆ ಕಾಲಾನಲನೂ ದುಶ್ಯಾಸನನೆಂಬ ದನುಜನ ವಿಶಾಲವಾದ ವಕ್ಷಃಸ್ಥಲದಲ್ಲಿ ಆಡಿದ ನೃಸಿಂಹನೂ ಕುರುರಾಜನ ಅನುಜರೆಂಬ ಮಹಾವೃಕ್ಷದ ಬುಡವನ್ನು ಕಿತ್ತುಹಾಕುವ ಪ್ರಳಯ ಮಾರುತನೂ ಪ್ರಬಲರಾದ ರಿಪುಗಳ ದಳದ ಭುಜಬಲವೆಂಬ ಸುತ್ತಲೂ ಇಟ್ಟು ತುಂಬಿದ ನೀರಿಗೆ ಪ್ರಳಯಾರ್ಣವನೂ ಪ್ರಚಂಡವಾದ ಭುಜಬಲದ ಅವಲಂಬನದಿಂದ ಗಂಭೀರನಾದವನೂ ಕುರುರಾಜನ ನಿಬಿಡವಾದ ತೊಡೆಗಳೆರಡನ್ನು ಒಡೆಯುವ ಪ್ರತಿಜ್ಞಾಭಾರವುಳ್ಳವನೂ ಫಣಿಕೇತನನಿಗೆ ಧೂಮಕೇತುವೂ ಪಾಂಡವಬಲಕ್ಕೆ ಪ್ರದೀಪನೂ ಪಾಂಡವಬಲಕ್ಕೆ ಪ್ರಾಕಾರನೂ ಏಕಾಂಗವೀರನೂ ಜರಾಸಂಧನ ಸಂಧಿಬಂಧವನ್ನು ಒಡೆದವನೂ ಎನ್ನಿಸಿದ ಭೀಮಸೇನನು ಹಾಗೆ ಕೋಪವನ್ನು ಏರಿಸಿಕೊಂಡವನೂ ಪ್ರತಿಜ್ಞೆಯನ್ನು ಏರಿದವನೂ ಆಗಿ—

"ಮದದಿಂದ ಕೂಡಿದ ಆನೆಯ ಕುಂಭವನ್ನು ಒಡೆಯಲು ತಕ್ಕ ಉಗ್ರವಾದ ಉಗುರಿರುವ ಸಿಂಹಕ್ಕೆ ಮೃಗರಿಪು ಎಂಬ ಹೆಸರು ಏನು ಉತ್ತಮಿಕೆಯೆ? ಜರಾಸಂಧನ ಸಂಧಿಗಳನ್ನು ಮುರಿದ ನಿನಗೆ ಕುರುವೈರಿ ಎಂಬ ಹೆಸರು ಏನು ಉನ್ನತಿಯೇ? . . . ಇರಿಯುವ ಬೆಡಗುಳ್ಳ ಸಾಹಸಭೀಮ! ದೇವ! ಪರಮೇಶ್ವರ! ನಿನ್ನಲ್ಲಿ ಯಾರು ಇರಿದು ಬದುಕುವವರು? ನಿನ್ನ ಭುಜದ ಉಗ್ರವಾದ ಗದೆಯೆಂಬ ಪರಿಘದ ಪ್ರಹಾರದಿಂದ ಹರಿದು ಹರಿದು, ಕಂಡಗಳನ್ನು ಕಾರಿದ ಹೆಣವಾಗಿ, ಮರುಳುಗಳಿಗೆ ಉಣಿಸಾಗಿ, ಯುದ್ಧದಲ್ಲಿ ಕುರಿಯಂತೆ ಕತ್ತರಿಸಿಹೋಗಿ ಬಿದ್ದ

ಅರಿಬಲಗಳೇ ನಿನ್ನ ವೀರವನ್ನು ಹೇಳವೆ!" ಎಂಬುದಾಗಿ ಬೆಂಕಿಯ ಮಗಳು ವಾಯುವಿನ ಮಗನನ್ನು ಹೊಗಳಿ—

"ಒಡಲು ಒಡವೆ ಎಂಬ ಇವು ಎರಡೂ ಕೆಟ್ಟುಹೋಗುತ್ತವೆ. ಕೆಡದ ಐಶ್ವರ್ಯವೆಂದರೆ ಯಶಸ್ಸು. ಆದ್ದರಿಂದ, ಇರಿಯುವ ಬೆಡಗುಳ್ಳವನೆ, ಕೆಡುವ ಒಡಲನ್ನೂ ಒಡವೆಯನ್ನೂ ಎಂದೂ ಕೆಡದ ಒಡವೆಗೆ ಮಾರಿಕೊಡಬೇಕು . . . . ಮಣಿ ಕನಕ ವಸ್ತ್ರವಿಭೂಷಣಗಳನ್ನು ಕೊಟ್ಟು, ಹೆಂಡಿರು ಒಲಿಯುತ್ತಾರೆಯೆ? ಗಂಡರಾದವರು ಗುಣವನ್ನೇ ಮೆರೆಯಬೇಕು. ಇರಿವಬೆಡಂಗಾ, ನಿನ್ನಂತೆ ಶಸ್ತ್ರಗಳ ವ್ರಣವನ್ನು ಮೆರೆಯಬೇಕು!" ಎಂದು ಮೂದಲಿಸಿ ನುಡಿಯಲಾಗಿ—

ಬುದ್ಧಿಮತಿ ಇಂತೆಂದಳು: "ಬೇಡಿದವರಿಗೆ ದಾನವನ್ನೂ ಭಯದಿಂದ ಶರಣುಬಂದವರಿಗೆ ರಕ್ಷೆಯನ್ನೂ ಕೊಡುವ, ಕೊಟ್ಟು ರಕ್ಷಿಸುವ ಗುಣಕ್ಕೆ ಬೇರೆ ಯಾರು ಸಮಾನರಾದವರು? ಇರಿವಬೆಡಂಗನ ಕೊರಳಲ್ಲಿ ಕೊಂಕುಂಟೆ? ಮಾತಿನಲ್ಲಿ ತೊದಲುಂಟೆ? . . . ಪರೀಕ್ಷಿಸಿ ನೋಡಿದರೆ, ನೃಪರು ಯಾರೂ ವಾಕ್‌ಸಾರರು, ಕರ್ತವ್ಯಸಾರರಲ್ಲ. ಅಂತವರು ಯಾರು ಯಾರನ್ನೋ ನಾನು ಬಲ್ಲೆ. ಕೇಳು, ಇರಿವ ಬೆಡಂಗಾ, ನಿನ್ನಂತಹ ಸ್ಥಿತಿಸಾರನು ಯಾವನು?" ಎನ್ನಲಾಗಿ—

ವೃದ್ಧಕಂಚುಕಿ ಇಂತೆಂದಳು: "ಅವರ ಪೂರ್ವಜರಾದ ಅರಸುಗಳಲ್ಲಿ ಎಲ್ಲಿಯೂ ಇದುವರೆಗೂ ಹೇಳಿ ಹುಸಿಯುವುದೂ ಆಡಿ ತಪ್ಪುವುದೂ ಕೂಡಿ ಬಿಡುವುದೂ ಬೇಡಿದವರಿಗೆ ಇಲ್ಲವೆಂಬುವುದೂ ಕಾದಿ ಸೋಲುವುದೂ ಪರಸ್ತ್ರೀಯರನ್ನು ಹಿಡಿಸುವುದೂ ಕನಸಿನಲ್ಲಾದರೂ ಇಲ್ಲ. ಧನರಕ್ಷೆಗೆ ಲೋಭ, ತನ್ನ ದೇಹದ ರಕ್ಷಣೆಗೆ ಹುಸಿ, ತನ್ನ ಆತ್ಮದ ರಕ್ಷೆಗೆ ಭಯ ಎಂಬಿವು ಇಷ್ಟು ಕಾರಣವಿಲ್ಲದ್ದು. ಇರಿವ ಬೆಡಂಗನು ಇವುಗಳಲ್ಲಿ ಅಪೇಕ್ಷೆಯಿಲ್ಲದವನು ಎನ್ನಿಸಿ ನಡೆದು ಹೆಸರಾದನು" ಎನ್ನಲಾಗಿ—

ಭೀಮಸೇನನ ಅನುಮತದಲ್ಲಿ ನರ್ಮಸಚಿವನೂ ಪರಿಹಾಸ ಕೇಳೀಶೀಲನೂ ಎನ್ನಿಸಿದ ವಿದೂಷಕನು ಹೇಳಿದನು: "ಎಲೆ ವೃದ್ಧಕಂಚುಕಿ! ನೀನೂ ದೇವಾಸುರಯುದ್ಧಕ್ಕೆ ಕರಗವನ್ನು ಹೊತ್ತ ಡಾವರಡಾಕಿನಿ ಎನ್ನಿಸಿದ ಪಾಂಚಾಲಿಯೂ ಬುದ್ಧಿಮತಿಯೆಂಬ ಮೇಳದ ಹಾಳು

ತೊತ್ತೂ—ಹೀಗೆ ಈ ಮೂವರೂ ಚೆನ್ನಾಗಿ ಹೇಳಿದಿರಿ. ಇನ್ನೇನು? ಇನ್ನೆಲ್ಲಿಯ ಧೃತರಾಷ್ಟ್ರ! ಎಲ್ಲಿಯ ಗಾಂಗೇಯ! ಎಲ್ಲಿಯ ಸಂಧಿಕಾರ್ಯ! ದುಶ್ಶ್ಯಾಸನ ಮೊದಲಾದ ನೂರ್ವರು ಕೌರವರನ್ನು ಭಯವಾಗುವಂತೆ ಕೊಂದಿಕ್ಕಿದನು. ಇನ್ನೊಬ್ಬನು ಉಳಿದನು. ದುರ್ಯೋಧನನನ್ನು ಕೊಲ್ಲು ವುದೂ ಗೆಲ್ಲುವುದೂ ನಮ್ಮ ಅರಸನಿಗೆ ಯಾವ ಗಹನ! ಅದಕ್ಕೆ ಚಿಂತಿಸ ದಿರಿ" ಎಂದು ಪಾಂಚಾಲರಾಜತನೂಜೆಯ ಮುಖವನ್ನು ನೋಡಿ—

"ಕುರುಕುಲವನ್ನು ನುಂಗಿದೆ. ಇನ್ನೂ ಅಷ್ಟು ಜನರನ್ನೂ ಕುರು ಪತಿಯನ್ನೂ ನುಂಗಲಿರುವೆ. ಎರಡನೆಯ ಹಿಡಿಂಬೆಯಾದ ರಾಕ್ಷಸಿ ನಿನ್ನನ್ನು ನಮ್ಮ ಅರಸನು ಎಲ್ಲಿ ತಂದನೊ!" ಎಂಬುದಾಗಿ ವಿದೂಷ ಕನು ಅಳುತ್ತಾ ಬಂದ ತಾನು ನಗುತ್ತಾ ಹೋಗುವಂತೆ ಸಂತೋಷ ಮಾಡಿಸಿದುದಕ್ಕೆ ಒಡಂಬಟ್ಟು ಚಾರುಹಾಸಿನಿ ತನ್ನ ನಿವಾಸಕ್ಕೆ ಹೋದಳು.

ದುರ್ಯೋಧನನ ವಿಷಾದ

ಅಷ್ಟರಲ್ಲಿ ಇತ್ತ—

ಶಂತನುತನೂಜನೂ ಮಂದಾಕಿನೀನಂದನನೂ ವಸಿಷ್ಠನ ಶಾಪದಿಂದ ವಸುಂಧರೆಗೆ ಅವತರಿಸಿ ಉಳಿದ ವಸುವೂ ಜಮದಗ್ನಿಯ ಮಗನ ಶಿಷ್ಯನೂ ಪರಶುರಾಮನನ್ನು ಗೆದ್ದವನೂ ಚಿನ್ನದ ತಾಳೆಯ ಮರವನ್ನು ಧ್ವಜದಲ್ಲಿ ಉಳ್ಳವನೂ ದೇವವ್ರತಿಯೂ ಸ್ವೇಚ್ಛಾಮೃತ್ಯುವೂ ಕುರುಕುಲ ಪಿತಾಮಹನೂ ಯುದ್ಧದಲ್ಲಿ ಭೀಷ್ಮನೂ ಎನ್ನಿಸಿದ ಭೀಷ್ಮನ ಶರಶಯನದಲ್ಲಿಯೂ—

ಭಾರದ್ವಾಜಗೋತ್ರನೂ ಕುಂಭಸಂಭವನೂ ಉಭಯಸೈನ್ಯಕ್ಕೆ ಪ್ರಧಾನ ಉಪಾಧ್ಯಾಯನೂ ತ್ರೈಲೋಕ್ಯಧನುರ್ಧರನೂ ರುದ್ರಾವತಾರನ ತಂದೆಯೂ ಜಮದಗ್ನಿಯ ಮಗನ ಶಸ್ತ್ರಸರ್ವಸ್ವವನ್ನು ಪ್ರತಿಗ್ರಹಿಸಿದ ಪ್ರೀತಿಯಿಂದ ಪವಿತ್ರವಾದ ಪ್ರಭಾವವುಳ್ಳವನೂ ಚಾಪಸಾಮರ್ಥ್ಯಸಂಪನ್ನನೂ ಧ್ವಜದಲ್ಲಿ ಚಿನ್ನದ ಕಲಶವುಳ್ಳವನೂ ಎನ್ನಿಸಿದ ಬಿಲ್ಲಜಾಣನಾದ ದ್ರೋಣನ ಸಾವಿನಲ್ಲಿಯೂ—

ಸಿಂಧುದೇಶಾಧೀಶ್ವರನೂ ದುಶ್ಶಳೆಯ ಮನೋನಯನವಲ್ಲಭನೂ ಶಲ್ಯಸಾರಥಿಯೂ ದುಶ್ಶಾಸನನ ಮನೋರಥಸಾರಥಿಯೂ ಎನ್ನಿಸಿದ ತನ್ನ ಮೈದುನನಾದ ಜಯದ್ರಥನ ವಿಪತ್ತಿನಲ್ಲಿಯೂ—

ಭೂಮಿಸುತನೂ ಇಂದ್ರನಿಗೆ ಸ್ನೇಹಿತನೂ ನಾಲ್ಕುಲಕ್ಷ ಆನೆಗಳ ಗುಂಪಿನಿಂದ ಬಳಸಿದವನೂ ಸುಪ್ರತೀಕವೆಂಬ ಆನೆಯ ಬಂಧುರವಾದ ಕೊರಳ ಮೇಲೆ ಏರಿದವನೂ ಎನ್ನಿಸಿದ ಭಗದತ್ತನ ಮರಣದಲ್ಲಿಯೂ—

ಕುರುಕುಲವೃದ್ಧನೂ ಅತಿಶಯವಾದ ಭುಜಬಲದ ಅವಲಂಬನದಿಂದ ಗಂಭೀರನೂ ಎನ್ನಿಸಿದ ಭೂರಿಶ್ರವನ ವಿಯೋಗದಲ್ಲಿಯೂ—

ಸೌಬಲ ಬೃಹದ್ಬಲ ವಿಂದ ಅನುವಿಂದ ಮೊದಲಾದವರ ನಾಶದಲ್ಲಿಯೂ—

ಯುವರಾಜನೂ ದ್ರುಪದರಾಜನಂದನೆಯ ವಸ್ತ್ರವನ್ನೂ ಮುಡಿಯನ್ನೂ ಹಿಡಿದೆಳೆದ ಧೃಷ್ಟನೂ ಎನ್ನಿಸಿದ ತನ್ನ ಪ್ರೀತಿಯ ತಮ್ಮನಾದ ದುಶ್ಶಾಸನನ ಪಂಚತ್ವಪ್ರಪಂಚದಲ್ಲಿಯೂ—

ದಿನಕರತನಯನೂ ರಾಧೇಯನೂ ಅಂಗವಿಷಯಾಧೀಶ್ವರನೂ ಸ್ವಭಾವಶೌರ್ಯಾವತಾರನೂ ತಾಳೆಯಮರದ ಮಟ್ಟದ ಧನುಸ್ಸುಳ್ಳವನೂ ಕಾರ್ಮುಕಗುರುವಾದ ದ್ರೋಣನ ಶಿಷ್ಯನೂ ಜಮದಗ್ನಿಯ ಮಗನ ಶಿಷ್ಯನೂ ಸಹಜಕವಚದಿಂದ ಅಲಂಕೃತವಾದ ಶರೀರನೂ ಧ್ವಜದಲ್ಲಿ ಮದಗಜದ ಗುರುತುಳ್ಳವನೂ ಪ್ರತಿದಿನವೂ ನಡೆಸಿದ ಹದಿನೆಂಟು ಕೋಟಿ ಸುವರ್ಣದಾನದಿಂದ ಸಕಲಭೂಸುರಲೋಕವನ್ನು ಸಂತೃಪ್ತಿಪಡಿಸಿದವನೂ ಮಹಾಭಾರತಯುದ್ಧವೆಂಬ ಸಾಗರವನ್ನು ದಾಟುವುದಕ್ಕೆ ಸಮರ್ಥವಾದ ಅಂತಃಕರಣದಿಂದ ತುಂಬಿದ ಕರ್ಣಧಾರನೂ ಎನ್ನಿಸಿದ ತನ್ನ ಪ್ರಿಯಸ್ನೇಹಿತನಾದ ಕರ್ಣನ ಸಾವಿನಲ್ಲಿಯೂ—

ಮದ್ರವಿಷಯಾಧಿಪತಿಯೂ ವ್ಯಾಘ್ರಕೇತನನೂ ಶಸ್ತ್ರಗಳಲ್ಲಿ ತುಂಬಾ ನಿಪುಣನೂ ಯುದ್ಧದ ಆನೆಗಳಿಗೆ ಶಲ್ಯನೂ ಎನ್ನಿಸಿದ ತನ್ನ ಮಾವನಾದ ಶಲ್ಯನ ಸಂಹಾರದಲ್ಲಿಯೂ—

ಕುರುಕುಲಚೂಡಾಮಣಿಯೂ ಗಾಂಧಾರೀ ಧೃತರಾಷ್ಟ್ರರ ಮಗನೂ ಭಾನುಮತಿಯ ವದನಕಮಲಕ್ಕೆ ಭಾನುವೂ ಚಂದ್ರಮತಿಯ ನಯನಕುವಲಯಕ್ಕೆ ಚಂದ್ರನೂ ದುಶ್ಶಾಸನನ ಅಗ್ರಜನ್ಮನೂ ಲಕ್ಷಣನ ತಂದೆಯೂ ಪನ್ನಗಪತಾಕನೂ ಚಿನ್ನದ ಬಳ್ಳಿಯ ಗುರುತಿರುವ ಉದ್ದವಾದ ದಪ್ಪ ಗದಾಯುಧವುಳ್ಳವನೂ ದಿವ್ಯಮುನಿವರರಿಗೆ ಅಪರಾಧ ಮಾಡಿದವನೂ ಸಕಲಲಕ್ಷ್ಮೀನಿವಾಸನೂ ಸಮರಧೈರ್ಯನೂ ಮಹಾಶೌರ್ಯನೂ ರಾಧೇಯನನ್ನು ತನ್ನ ಸ್ನೇಹಿತನನ್ನಾಗಿ ಉಳ್ಳವನೂ ಛಲದಂಕಮಲ್ಲನೂ ಸಕಲಭೋಗಲಕ್ಷ್ಮೀಪತಿಯೂ ಅಭಿಮಾನಧನನೂ ಎನ್ನಿಸಿದ ಸುಯೋಧನನು ಚಿಂತಾಕ್ರಾಂತನಾಗಿ—

"ಶತ್ರುಗಳ ಸೈನ್ಯಕ್ಕೆ ಸಾಕಾಗುವವನು ಒಬ್ಬನೇ ಅಲ್ಲವೆ! ರುದ್ರಾವತಾರನಲ್ಲವೆ! ಹಣೆಯಲ್ಲಿ ಕಣ್ಣು ಅಲ್ಲವೆ!—ಎಂಬುದಾಗಿ ನಂಬಿ ಕಾಪಾಡಿದೆನು. ತಾನಾಗಲಿ ತನ್ನ ತಂದೆಯಾಗಲಿ ಬಾಣವನ್ನು ಎಸೆಯುವುದಕ್ಕಾಗಿ ಬಿಲ್ಲಿನ ಹಗ್ಗದ ಬಾಯಿಗೆ ತಂದು ನೋಡಿದರೇ! ತಾವಿಬ್ಬರೂ ಆಯುಧವನ್ನು ಬಿಸುಟರು! ಆ ದ್ರೋಣನ ಮಗನೂ ದ್ರೋಣನೂ ಅನ್ನದ ಋಣವನ್ನು ಯೋಚಿಸಲಿಲ್ಲ! . . . ಕೊಡುವುದಕ್ಕೆ,

ಇರಿಯುವುದಕ್ಕೆ, ಶರಣುಹೊಕ್ಕರೆ ಕಾಯುವುದಕ್ಕೆ ಕ್ಷತ್ರಿಯರೆ ಬಲ್ಲರಲ್ಲದೆ ಬ್ರಹ್ಮರಾದವರು ಭೋ ಎನ್ನುವುದಕ್ಕೂ ಬಲ್ಲರು, ಕೊಂದರೆ ಥೋ ಎನ್ನಲೂ ಬಲ್ಲರು. ಇರಿಯಲು ಅವರೆತ್ತ ಬಲ್ಲರು! . . . ಕಮಲಪ್ರಿಯನಂದನನು ನನಗೆ ಪ್ರಿಯಮಿತ್ರನು. ತೇಜಸ್ವಿಯಾದ ಅವನನ್ನು ನನ್ನ ಪಕ್ಕದಲ್ಲಿ ಹಾಗೆ ಆಡಿದ ಆ ಕಳಶಜನು ಇಂದ್ರನ ಮಗನಿಗೆ ಕುಂದಿಹೋದನಲ್ಲಾ! . . . ಸೂರ್ಯನಮಗ ಬೇರೆ, ನಾನು ಬೇರೆಯೆ? ಕೆಟ್ಟದ್ದನ್ನು ಹೇಳಿದನು, ಆತನನ್ನು ಬಿಟ್ಟನು, ಮೋಸದ ಮಾತನ್ನು ಆಡಿದನಲ್ಲಾ. ಛೆ, ಮರೆ. ಪರೀಕ್ಷಿಸಿ ನೋಡಿದರೆ ಅಶ್ವತ್ಥಾಮನು ಪಾಂಡವನು . . . ಗೆಲ್ಲಲು ಸಾಮರ್ಥ್ಯವಿದ್ದರೆ ಇರಿದು ಗೆಲ್ಲಬೇಕು. ಗೆಲ್ಲಲಾರದಿದ್ದರೆ ಕಾದಿ ಸಾಯಬೇಕು. ಆಳಿಗೆ ಇಷ್ಟೇ ಗುಣ. ಗೆಲ್ಲಲೂ ಸಾಯಲೂ ಆರದೆ ತೊಲಗಿದರೆ ಆ ಕಾರ್ಯ ಚೆನ್ನಾಗಿ ಕಾಣುವುದೇನು? . . . ತೀಕ್ಷ್ಣವಾದ ಕತ್ತಿಯನ್ನು ಮಸೆದ ಹಾಗೆ ಮರದ ಕತ್ತಿಯನ್ನು ಮಸೆದರೆ ಹರಿತವಾಗುತ್ತದೆಯೆ! ಶೂರನನ್ನು ಕಾಪಾಡಿದರೆ ಯುದ್ಧದ ಸಂದರ್ಭದಲ್ಲಿ ಒಡೆಯನಿಗೆ ವಿಶ್ವಾಸವನ್ನು ತೋರುವಂತೆ ಹೇಡಿಯು ತೋರಿಸುವನೆ!"—

ಎಂಬುದಾಗಿ ಅರಸನು ಅವರಿಗೆ ವಿರಸವಾಗಿ ಕಠಿಣವನ್ನು ನುಡಿಯಲು, ಸಂಜಯನು ತನ್ನ ಮನಸ್ಸಿನಲ್ಲಿ—

"ಪ್ರಸಿದ್ಧನಾದ ಹನ್ನೊಂದನೆಯ ರುದ್ರನು, ಆದಿಪುರುಷನು, ದೇವನು, ಹಣೆಯಲ್ಲಿ ಕಣ್ಣುಳ್ಳವನು, ನಗರಾಜನ ಪ್ರಿಯಪುತ್ರಿಗೆ ಪ್ರಿಯತಮನಾದವನು, ಸ್ಮರನನ್ನು ನುಂಗಿದವನು, ಅಶ್ವತ್ಥಾಮನು ದಯೆಯಿಂದ ದ್ರೋಣನಿಗೆ ಕಾರ್ಯಾರ್ಥವಾಗಿ ಮಗನಾದನು—ಎಂದು ಹೇಳುವಾಗ ಪಿಂಗಾಕ್ಷನು ವಿರೂಪಾಕ್ಷನನ್ನು ಸತ್ತ್ವದಿಂದ ಏನು ಒಳಗೊಳಗೇ ಪರೀಕ್ಷಿಸುವನೋ! . . . ಹಗೆಯಾದ ಚಿತ್ರಾಂಗದನು ಆಕಾಶಕ್ಕೆ ಎತ್ತಿಕೊಂಡೊಯ್ದರೆ, ತನ್ನನ್ನು ತಂದ ಬಾಂಧವನ ಕಾರ್ಯವನ್ನು ಬಗೆಯದೆ ಅಹಿತವನ್ನೇ ಬಗೆದ ಕೌರವನು ರೌರವವನ್ನು ಹೋಗಿ ಹೊಗದಿರುವನೆ! . . . ಅಕಾರ್ಯನಾದ ಅಹಿಕೇತನನಿಗೆ ವಿಧಿವಿಲಾಸದಿಂದ ಕಾರ್ಯಕ್ಕೆ ಸಖ ಶಕುನಿಯಲ್ಲಾ! ಶೌರ್ಯಕ್ಕೆ ಸಖ ಸೂತನ ಮಗನಲ್ಲಾ! ಭೀಷ್ಮರ ಶರಾಚಾರ್ಯರ ನುಡಿತಪ್ಪು, ಅಲ್ಲಾ! . . . ಗುರು ಕವಚ, ಕರ್ಣ ಬಾಹುರಕ್ಷೆ,

ದೇವನದಿಯ ಮಗ ಶೀರ್ಷಕವಾಗಿರಲು ಭೀಮನು ಪ್ರೈಗೆ ಮುನಿಯಲು ತಿಳಿಯದೆ ಕುರುರಾಜನ ತೊಡೆಯನ್ನು ಮುರಿಯುವೆನೆಂದನು. . . . ಧೃತರಾಷ್ಟ್ರನೆಂಬ ಮರ ನೂರು ಶಾಖೆಯುಳ್ಳದ್ದಾಯಿತು. ಪಾಂಡುವೃಕ್ಷ ಐದು ಶಾಖೆಯುಳ್ಳದ್ದಾಯಿತು. ಎರಡನೆಯದು ಅಕ್ಷಯವಾಯಿತು. ಮೊದಲನೆಯದು ಇವನಿಂದ ಒಂದು ಶಾಖೆಯುಳ್ಳದ್ದಾಯಿತು."

ಎಂದು ಸಂಜಯನು ಕುರುರಾಜನನ್ನು ನೋಡಿ—

"ಭುವನಕ್ಕೆ ಆರಾಧ್ಯನು ಎಂಬ ಈ ಪ್ರಸಿದ್ಧವಾದ ಬಿರುದಿನ ಗುರುತಿಗೆ ತಕ್ಕ ಹಾಗೆ ಭಾರ್ಗವನಲ್ಲಿ ದಿವ್ಯಾಸ್ತ್ರವನ್ನು ಮೊದಲು ಪಡೆದು, ಊರ್ಜಿತವಾದ ಶೌರ್ಯಕ್ಕೆ ತಕ್ಕ ಹಾಗೆ ಪಾಂಡವರೂ ಕೌರವ್ಯರೂ ಕೈಮುಗಿಯಲು, ಉಂಟಾದ ಅಧಿಕತೆಗೆ ತಕ್ಕ ಹಾಗೆ ಬಿಲ್ಲೋಜನು ಗಾಂಡೀವಿಯೊಡನೆ ಕಾದಿದನು. ಅವರ ಶರಾಸಾರವನ್ನು ನೀನೇ ನೋಡಿದೆ. . . 'ಇದು ತಾನೇ ಗಂಗೆಯ ಮಗನಿಗೆ ಅನುಗುಣವಾದದ್ದು! ಇದುವೇ ರಾಜಪ್ರಸಾದಕ್ಕೆ ತಕ್ಕದ್ದು! ಇದು ಈ ಬಾಹುದಂಡದ ಕಡಿತಕ್ಕೆ ಸದೃಶವು! ಕಲಿತ ಬಿಲ್ಲಿನ ವಿಜ್ಞಾನಕ್ಕೆ ಹೀಗೆ ಇದೇ ಯುಕ್ತ! ಭೀಷ್ಮ ಎಂಬ ಹೆಸರಿಗೆ ಇದು ಸಮುಚಿತ!' ಎಂಬ ಹಾಗೆ ಸಂಗ್ರಾಮರಂಗದಲ್ಲಿ ಉನ್ನತರಾದವರೆಲ್ಲರೂ ನೋಡುತ್ತಿರಲಾಗಿ ಸಿಂಧುಪುತ್ರನು ಕದನದಲ್ಲಿ ಪರಾಕ್ರಮವನ್ನು ತೋರಿದನು. . . ಕಲಶದಲ್ಲಿಯೂ ನದಿಯಲ್ಲಿಯೂ ಜನಿಸಿದವರು ಇದು ಭಕ್ತಿಗೆ ಕಳಶಾರೋಹಣವೆನ್ನಿಸಿ ತುಂಬ ಕೆಲಸಮಾಡಿದರು. ಅವರಿಂದ ಸಾಧ್ಯವಲ್ಲ, ಕಾದಿ ಗೆಲ್ಲಲು ಯಾರಿಂದಲೂ ಸಾಧ್ಯವಲ್ಲ. ಅರ್ಜುನನ ಶೌರ್ಯವನ್ನು ನೀನು ಅರಿಯೆಯಾ! . . . ಶತ್ರುವಾದ ಚಿತ್ರಾಂಗದನು ಒಯ್ಯಲು, ಭಾನುಮತಿ ಬಂದು ಆಕ್ರಂದನಮಾಡಲು, ಧರ್ಮದಲ್ಲಿ ರತನಾದ ಧರ್ಮತನಯನು ತಮ್ಮನಿಗೆ ಹೇಳಲು, ಕೃಷ್ಣೆಯ ಸ್ವಯಂವರದಲ್ಲಿ ಮತ್ಸ್ಯಕ್ಕೆ ಬಾಣ ಹೊಡೆದು ಧನುರ್ವಿದ್ಯಾಗುಣವನ್ನು ತೋರಿದ ಫಲ್ಗುಣನು ಅಂದು ನಿನ್ನನ್ನು ನಭೋಮಾರ್ಗದಲ್ಲಿ ಬಾಣಗಳ ನಿಚ್ಚಣಿಕೆಯ ಮೂಲಕ ತಂದನಲ್ಲಾ! ಅದು ಯಾರಿಗಾದರೂ ಸಾಧ್ಯವೇ! . . . ರಾಜಾ! ನಿನ್ನನ್ನು ಹಿಡಿದೊಯ್ಯಲು, ಭಾನುಮತಿಯನ್ನು ಸಂತೈಸಿ, ಚಿತ್ರಾಂಗದನಿಗೆ ನಾಟುವಂತಹ ಅಸ್ತ್ರಗಳನ್ನು ಹೊಡೆದು,

ಒಡನೆ ಆಕಾಶದಿಂದ ಗಾಂಡೀವಿ ತರುವಾಗ ಈ ಕೃಪ ಈ ಸೈಂಧವ ಈ ನದೀಜ ಈ ರಾಧೇಯ ಈ ಮದ್ರಭೂಮಿಪ ಈ ಕುಂಭಜ ಈ ಕುರು ಪ್ರಭವರು ಅಂದು ಏನು ಮೂರ್ಛೆಹೋಗಿದ್ದರೇನು? . . . ಓಡಿ, ಯಮ ನಲ್ಲಿ ಇರಿದು, ಹಾರುವರ ಪಿಳ್ಳೆಯ ಹೋದ ಜೀವವನ್ನು ತಂದನು. ಬಂದು ಬೇಡಿದರೆ, ಆ ಸಚ್ಚರಿತನಾದ ಪಾಂಡವನು ಭುಜಬಲದಿಂದ ಖಾಂಡವವನ್ನು ಅಗ್ನಿಗೆ ಕೊಟ್ಟನು . . . ಅಂಜನಾತನಯನನ್ನು ಧ್ವಜ ದಲ್ಲಿ ಇರಿಸಿಕೊಂಡವನು, ಸಾರಥಿಯಾದ ಹರಿಯ ವರಪ್ರಸಾದವನ್ನು ಪಡೆದವನು, ಈಶ್ವರನಿಂದ ಅಸ್ತ್ರಗಳನ್ನು ಹೊಂದಿದವನು, ಇಂದ್ರನೇ ತಂದೆಯಾದವನು, ಪಾರ್ಥನು ಕೃತಿಪೂರ್ಣತೆಯಿಂದ ಕೃತಾರ್ಥನು . . . ಸಾಲುಸಾಲಾಗಿ ಇತ್ತ ಲಂಕೆಯ ವಿಭೀಷಣನು, ಇತ್ತ ಕುಬೇರನು ಅಳುಕಿ ತಂದು ಒಟ್ಟಿದ ಹೊನ್ನ ರಾಶಿಗಳನ್ನು ಭೂಸುರರಿಗೆ ಕೊಟ್ಟು, ಅಂದು ತಂದೆ ಹೇಳಿ ಅಟ್ಟಿದ ರಾಜಸೂಯಯಾಗವನ್ನು ತಡವಿಲ್ಲದೆ ಮಾಡಿದ ವೀರವನ್ನು ನೀನೆ ನೆಟ್ಟನೆ ಕಂಡು. ಗಾಂಡಿವಿಯನ್ನು ಕೀಳಾಗಿ ಕಾಣ ಲಾಗುವುದೇ ಸುಯೋಧನಾ! . . . ಈಶ್ವರನಲ್ಲಿ ಪಾಶುಪತಾಸ್ತ್ರವನ್ನು ಪಡೆ ದನು, ಇಂದ್ರನಲ್ಲಿ ಅರ್ಧಾಸನವನ್ನು ಪಡೆದನು, ಭದ್ರಮನನಾದ ಗಾಂಡಿ ವಿಯು ಸುಭದ್ರೆಯನ್ನು ನಾರಾಯಣನಲ್ಲಿ ಪಡೆದನು . . . ವೀರನು ಹನ್ನೊಂದಕ್ಷೋಹಿಣೀ ಬಲವೆಲ್ಲವನ್ನೂ ಒಂದೇ ರಥದಲ್ಲಿ ಒಬ್ಬನೇ ಗೆದ್ದನು. ಗೆಲ್ಲುವುದಕ್ಕೆ ಅಸಾಧ್ಯನು. ಗೋಗ್ರಹಣದ ಕಲಹದಲ್ಲಿ ವಿಜ ಯನು ಏಕಾಂಗವಿಜಯನಾದನು . . . . ಯಮನೂ ಇಂದ್ರನೂ ಈಶ್ವ ರನೂ ಸೂರ್ಯನಮಗನೂ ಕಲಶಜನೂ ಶಂತನುತನೂಜನೂ ಗೆಲಲಾರದ ಕುಂತೀಸುತನನ್ನು ಹೆರರು ಗೆಲ್ಲಲು ಸಮರ್ಥರಾಗುವರೆ? . . . ಲಂಕೆ ಯೆಂಬ ಪುಟಭೇದನದ ಪಟುತರವಾದ ಕವಾಟಪುಟವನ್ನು ಭೇದಿಸಿ ದವನು ಎಂತಹವನು! ಅಂತಹ ಹನುಮನು ಧ್ವಜವಾದವನಾದ ಗಾಂಡಿ ವಿಗೆ ಎದುರಾಗುವ ಗಂಡರಿದ್ದಾರೆಯೇ! . . . ಉರಗೇಂದ್ರಲೋಕವನ್ನು ಹೊಕ್ಕು, ಉರಗರೊಡನೆ ಇರಿದು, ಉರಗಪತಿಯ ಮಗಳೊಡನೆ ಆದರ ದಿಂದ ಜಯಲಕ್ಷ್ಮಿಯೊಡನೆ ಕೀರ್ತಿಯಿಂದ ಒಂದೇ ಹಸೆಯಲ್ಲಿ ಪಾರ್ಥನು ಕೂಡಿದನು . . . ಉರಿ ಕೊಳ್ಳಲು, ಕಾಡುಮೃಗಗಳು ಕೊಳ್ಳಲು, ವಿಷ

ಸರ್ಪಸಂಕುಲವು ಕೊಳ್ಳಲು, ಶತ್ರುಭೂಮಿಯಲ್ಲಿ ಗಿರಿಗಹನಗಳಲ್ಲಿ ವಿಷಮ ರಾಕ್ಷಸ ಸಂಕುಲದಲ್ಲಿ ವರಾಹಸಿಂಧುರತರಶಯ್ಯೆಯಲ್ಲಿ ವಿಪುಲವಾದ ಭೀಕರದಲ್ಲಿ ತನ್ನ ಬಾಹುವಜ್ರಪಂಜರದೊಳಗೆ ಇಟ್ಟು, ವೃಕೋದರನು ಸಹೋದರರನ್ನು ರಕ್ಷಿಸಿದನಲ್ಲವೆ! . . . ಸೌಗಂಧಿಕವನವನ್ನು ಹೊಕ್ಕರೆ, ಹೊಗಲು ಅವಕಾಶ ಕೊಡದೆ ಕಾದಾಡಿದ ಧೀರರನ್ನು ಯಮಪುರಕ್ಕೆ ಹೊಗಿಸಿ, ಕನಕಕಮಲವನ್ನು ತಂದ ವೀರನು ಯಾರು? ಈ ಪ್ರಚಂಡ ನಾದ ಇರಿವಬೆಡಂಗನು! . . . ಬಕನನ್ನು ಹಿಡಿಂಬನನ್ನು ಕೀಚಕನನ್ನು ಕಿಮ್ಮೀರನನ್ನು ಜಟಾಸುರನನ್ನು ಕೊಂದ, ಕಲಿಯಾದ ಜರಾಸಂಧನನ್ನು ಇಕ್ಕಿ ಕೊಂದ, ಬಲಶಾಲಿಯಾದ ವಾಯುಪುತ್ರನು ಸಾಮಾನ್ಯನೇ!”

ಎಂಬುದಾಗಿ ಸಂಜಯನು ಸಾಹಸಭೀಮನ ಸಾಹಸಗಳನ್ನು ಅಭಿವರ್ಣಿಸಿ—

“ಪ್ರಸಿದ್ಧನಾದ ಆ ಭಾರತಮಲ್ಲನಾದ ಶಂತನುವಿನ ಮಗನ ಬಾಣದ ಆಘಾತದಿಂದ, ಭೀಮನ ಭೀಮವಾದ ಗದಾದಂಡದ ವಿಘಾತ ದಿಂದ ಕುರುರಾಜನ ಸೈನ್ಯವು ಮಲಗಿಬಿದ್ದು ಜೇರಿಗೆಯ ರಾಶಿಗೆ ಸಮಾನ ವಾಗಿ ಬಿದ್ದ ಭಟರಿಂದ, ಬಿದ್ದ ಕುದುರೆಯಿಂದ, ಬಿದ್ದ ಆನೆಗಳಿಂದ, ಕುರುಕ್ಷೇತ್ರದಲ್ಲಿ ಎತ್ತಲೂ ಯಮನು ಕಾರಿದ ಹಾಗಾಯ್ತು . . . ಬತ್ತಳಿಕೆ ಯಿಂದ ತೆಗೆವಾಗ ಬಾಣ ಒಂದು, ತೊಡುವಾಗ ಹತ್ತು, ಧನುಸ್ಸಿನ ಹಗ್ಗ ದಿಂದ ಬಿಡುವಾಗ ನೂರು, ಹಾರುವಾಗ ಸಾವಿರ, ವೈರಿಗಳ ಬಾಣವನ್ನು ಕತ್ತರಿಸುವಾಗ ಲಕ್ಷ, ಸೇನೆಯ ಮೈಯಲ್ಲಿ ನಾಟುವಾಗ ಕೋಟಿ—ಇದು ಗಣನೆಗೆ ಮೀರಿದ್ದು ಎಂದರೆ, ಪಾರ್ಥನ ಬಿಲ್ಬಲ್ಮೆಯನ್ನು ಏನು ಹೊಗ ಳುವುದು! . . . ಪವನಸುತನು ಗದೆಗೊಂಡರೆ, ಗಾಂಡಿವಿ ಬಿಲ್‌ಗೊಂಡರೆ, ಆಯುಧವನ್ನು ಕೊಳ್ಳುವ ಎದುರುನಿಲ್ಲುವ ಅದಟರು ಭುವನದಲ್ಲಿಲ್ಲ. ಅವರ ಬಾಹುವಿಕ್ರಮ ನಿನಗೆ ಹೊಸದೇ, ಕೌರವರಾಜಾ! . . . ಧರ್ಮ ಪುತ್ರನು ಸಾಮಾನ್ಯನಲ್ಲ! ದಾನವು ಪ್ರಿಯವಾಕ್ಕಿನೊಡನೆ ಸೇರಿದುದು, ಜ್ಞಾನವು ಗರ್ವವಿಲ್ಲದುದು, ಶೌರ್ಯವು ಕೃಪೆಯಿಂದ ಕೂಡಿದುದು—ಎನ್ನಿ ಸುವ ಈ ನುಡಿಯನ್ನೇ ಆ ಧರ್ಮಜನ ದಾನವೂ ಜ್ಞಾನವೂ ಕ್ಷಮಾ ಗುಣವೂ ನುಡಿಯಿಸಿದುದು . . . ಯಮಳರು ವಿನಯದಲ್ಲಿ ವಿಕ್ರಮದಲ್ಲಿ

ಅನುಲರು. ಅವರು ಮುನಿದರೆ ವೀರರು ಇಲ್ಲದವರಾಗುವರು. ಅವರ ಪರಾಕ್ರಮವನ್ನು ನೀನು ಅರಿತಿದ್ದೂ ಯುದ್ಧದಲ್ಲಿ ಕೀಳಾಗಿ ಕಾಣುವುದೇ, ಕುರುಕುಲಾಂಬರಭಾನೂ! . . . ಅಂದು ಅರಗಿನ ಮನೆಯು ಉರಿಗೆ ಕುಶಸ್ಥಲ; ವಿಷದ ಲಡ್ಡುಗೆಗೆ ಜಯಂತ, ಕಾಳಿಂದಿ, ವೃಕಸ್ಥಳ ಆಯಿತು; ನಡೆದ ಸಭಾಸಂದರ್ಭಕ್ಕೆ ವಾರಣಾವತ ಕಾರಣ -ಎಂದು ತಿಳಿಸುವು ದಕ್ಕಾಗಿ ಪಾಂಡುತನೂಭವರು ಐದು ಗ್ರಾಮವನ್ನು ಬೇಡಿದರು. ಸಂಧಿ ಮಾಡಲು ಬೇಡಿದರೇನು? . . . ನದೀಜನು ಅತಿ ಲಜ್ಜೆಯಿಂದ ಕೂಡಿದವ ನಾದನು: ದ್ರೋಣನು ಅಧಿಕಕ್ರೋಧವನ್ನು ತಾಳಿದನು; ಉದ್ಧತನಾದ ಕೌರವ್ಯನಿಂದಾದ ಅಟ್ಟಹಾಸವು ನಿನ್ನ ಸ್ನೇಹಿತರಲ್ಲದವರಿಗೆ ವೀರಾವ ತಾರವನ್ನು ತಂದಿತು: ಪೃಥಾತನಯರು ಬಿಲ್ಲಿಗೆ ಹೆದೆಯೆತ್ತಿದರು: ಗಾಂಡೀವಿಯೂ ಭೀಮನೂ ಉದ್ಧತರಾದರು: ಪತಿಗಳು ನೋಡುತ್ತಿರು ವಂತೆಯೇ ನಿನ್ನ ತಮ್ಮನಿಂದ ಕೃಷ್ಣೆಯ ವಸ್ತ್ರದ ಆಕರ್ಷಣವು ಆಯಿತು."

ಎಂದು ನುಡಿದ ಸಂಜಯನ ನುಡಿಗೆ ಫಣಿರಾಜಕೇತನನು ಸಿಡಿಲ್ದು—

"ಸ್ಥಿರವಾದ ಸತ್ಯವನ್ನೇ ವ್ರತವಾಗಿ ಉಳ್ಳವನೆಂದು, ಧರ್ಮದಲ್ಲಿ ರುಚಿಯುಳ್ಳವನೆಂದು, ಆ ಧರ್ಮಪುತ್ರನು ದಯಾಪರನೆಂದು ಎಲ್ಲರೂ ಹೇಳಿದ ಮಾತು ಹುಸಿಯಾಯಿತು. ಈ ಕಾರ್ಮುಕಾಚಾರ್ಯನನ್ನೂ, ಗುರುವನ್ನೂ, ಬ್ರಾಹ್ಮಣನನ್ನೂ ಸುಳ್ಳು ಹೇಳಿ ಕೊಂದಾಗ—ಸುಳ್ಳೆಂಬ ಪಾತಕ ದೊಡ್ಡದು ಎಂಬ ನುಡಿಯಿಂದ ಪೃಥೆಯ ಪ್ರಿಯಪುತ್ರನು ಪಾಪಕ್ಕೆ ಗುರಿಯಾಗನೇ! . . . ತಾನು ಹತೋಶ್ವತ್ಥಾಮಃ ಎನ್ನಬಹುದೆ? ಗುರು ಯಮಪುರಕ್ಕೆ ಹೋಗುವ ಸಂದರ್ಭದಲ್ಲಿ, ಜನರಂಜನೆಗಾಗಿ 'ಘನಕುಂಜರ' ಎಂದನಲ್ಲಾ! ಧರ್ಮನ ಮಗನನ್ನೂ ಅರ್ಥಮಾಡಿಕೊಳ್ಳ ಲಾಗಲಿಲ್ಲ! . . . 'ಇಂತಹ ಧರ್ಮಪುತ್ರನೂ ಸುಳ್ಳಾಡಿದವನು ನೋಡು' ಎಂದು ಧರ್ಮನನ್ನೂ ಮೂದಲಿಸಲು ಬಾಣಗಳನ್ನು ತೊರೆದ ದ್ರೋಣನು ಯಮಪುರಕ್ಕೆ ಹೋದನು! ಮಗನನ್ನು ಹುಡುಕಲು ಹೋದನೇನು? . . . ಕಲಶಜನನ್ನು ಹೀಗೆ ಕೊಲ್ಲಿಸಿದ ಖಳನೇ ಆ ಧರ್ಮನಂದನನು! . . . ಹೆಂಡತಿಯ ಕೇಶವನ್ನು ಸಭೆಯಲ್ಲಿ ನನ್ನ ತಮ್ಮನು ಎಳೆವಲ್ಲಿ ವೀರನಾಗ

ಲಿಲ್ಲ! ಭಗದತ್ತನ ಆನೆ ಬರಿಯ ಎಲುಬು ಮುರಿಯುವವರೆಗೂ ಒತ್ತಿದರೆ ಗಂಡನಾಗಲಿಲ್ಲ! ಕೊಲ್ಲಲು ಒಲ್ಲದೆ ಅಂಗಪತಿ ಬಿಲ್ಲಿನಲ್ಲಿ ಕೋದು ಎಳೆವಾಗ ಗಂಡನಾಗಲಿಲ್ಲ! ಕುರುಬಾಲಕರನ್ನು ಸಂಹಾರ ಮಾಡಿದ ಮಾತ್ರದಿಂದ ಮಾರುತಿ ಗಂಡನಾದನೇ! . . . ಒಡಹುಟ್ಟಿದವರನ್ನು ಕೊಂದು, ಅವರ ಮಾಂಸವನ್ನು ತಿಂದು, ಅವರ ರಕ್ತವನ್ನು ಬೊಗಸೆಯಲ್ಲಿ ಕುಡಿಯುವ ಈ ನಿರ್ದಯನನ್ನು ಹಿಡಿಂಬೆಯನ್ನು ಹೊಂದಿ ಭೀಮನು ಕಲಿತನಲ್ಲವೆ! . . . ನನಗೆ ಆ ದ್ಯೂತದಲ್ಲಿ ಅಣ್ಣತಮ್ಮದಿರು ಸಹಿತವಾಗಿ ಗಂಡುದೊತ್ತಾಗಿ, ಕಾನನದಲ್ಲಿ ವಲ್ಕಲಧಾರಿಯಾಗಿ, ಹರನಲ್ಲಿ ದಿವ್ಯಾಸ್ತ್ರವನ್ನು ಬೇಡಲು ಬೆಪ್ಪುತನದಿಂದ ತಾಪಸನಾಗಿ, ಹೇಡಿಯಂಬಂತೆ ಮತ್ಸ್ಯನ ಮನೆಯಲ್ಲಿ ವಾಸುದೇವನ ನಂಟನಾದ ಪೃಥಾನಂದನನು ಬರಬಾರದ ಭವಕ್ಕೆ ಬಂದನು . . . ಮತ್ಸ್ಯನಿವಾಸದಲ್ಲಿ ಯಮಪುತ್ರನು ಇದ್ದ ರೀತಿ, ವಾಯುಪುತ್ರನು ಇದ್ದ ರೀತಿ, ಅಗ್ನಿಪುತ್ರಿ ಇದ್ದ ರೀತಿ, ಯಮಳರು ಇದ್ದ ರೀತಿ ಎಲ್ಲವೂ ವೇಷ ಮರೆಸಿಕೊಂಡಿದ್ದು ಸರಿಯೆ. ಆದರೆ ಗಂಡುಕೆಟ್ಟು ಬಳೆತೊಟ್ಟು ಬೃಹನ್ನಳೆಯಾಗಿ ಪಾರ್ಥನು ಇದ್ದ ಸ್ಥಿತಿಯೆಂದರೆ—ಅದು ರಂಭೆಯ ಶಾಪವೋ ಅಥವಾ ಪಾರ್ಥನ ಪಾಪವೋ? . . . ಗುರುವನ್ನು, ಬ್ರಾಹ್ಮಣನನ್ನು, ಮಗನ ವಿರಹವೆಂಬ ಅಗ್ನಿಗೆ ಸಿಕ್ಕಿಕೊಂಡವನನ್ನು, ನಿರಾಯುಧನನ್ನು ಸಂಹರಿಸಿದ ಇಂದ್ರನ ಮಗನಿಗೆ ಆ ಗುರುವಧೆಯೆ ಯಶೋವಧೆಗೆ ಕಾರಣವಲ್ಲವೇ! . . . ಮುರಿದ ಬಿಲ್ಲಿನ ಗುರುವನ್ನು ಸುಳ್ಳಾಡಿ ಕೊಂದ ಆ ವೀರವನ್ನು, ಶರಶಯ್ಯೆಗೆ ಬಂದ ಭೀಷ್ಮರನ್ನು ಕುರಿತು ಗುರಿ ಹೊಡೆದ ಪರಾಕ್ರಮವನ್ನು, ರಥಧನುಸ್ಸುಗಳು ಇಲ್ಲದವನು ಎನ್ನದೆ ಕರ್ಣನನ್ನು ಹೊಡೆದು ಕೊಂದು ಹಾಕಿದ ಶೌರ್ಯವನ್ನು ಮರೆಯಲು ಪಾಂಡುಪುತ್ರರು ಬಲ್ಲರಲ್ಲದೆ, ಸಾಹಸಧನನಾದ ದುರ್ಯೋಧನನು ಬಲ್ಲನೇ! . . . ಸಭೆಯಲ್ಲಿ ತಮ್ಮ ಪಕ್ಕದಲ್ಲಿ ನನ್ನ ತಮ್ಮನು ಆ ಪಾಂಚಾಲಿಯನ್ನು, ಪಂಚವಲ್ಲಭೆಯನ್ನು, ಮೋದಿದರೂ ಅಲ್ಲಿ ಮಿಳ್ಮಿಳನೆ ನೋಡುತ್ತಿದ್ದ ಬಲ್ಲಾಳುಗಳು ಇಲ್ಲಿ ಮುನ್ನುಗ್ಗುತ್ತಿದ್ದಾರೆ. ಈ ಪರಾಕ್ರಮವೂ ಈ ಹೆಮ್ಮಾತೂ ಈ ಗಂಡೂ ಈ ಸುಭಟಾಲಾಪವೂ ಎಲ್ಲವೂ ನೃಪಸುತರಿಗೆ ಅಂದು ಎಲ್ಲಿ ಹೊಕ್ಕಿದ್ದುದೋ! . . .

ಯಮ ವಾಯು ಇಂದ್ರ ಅಶ್ವಿನಿಗಳ ಮಕ್ಕಳು ತಾವಾದವರು ಈ ಐವರೂ ಚಂದ್ರವಂಶಕ್ಕೆ ಕಳಂಕರು. ಅಂಥ ಅವರಿಗೆ ಆ ಪಾಂಚಾಲ ಭೂಪಾಲ ಪುತ್ರಿ ಮನೋವಲ್ಲಭೆಯಾದಳು—ಎಂದ ಮೇಲೆ ಕೇಳಬೇಕಾದ್ದೇನು! ಇದು ಕ್ಷತ್ರಧರ್ಮವೆ? ಭೂಲೋಕಕ್ಕೆ ಹೇಳಿರಿ. ಪೃಥಾಪುತ್ರರ ಚಾರಿತ್ರ್ಯವು ಈ ರೀತಿಯದು . . . ಹಸೆಯಲ್ಲಿ, ಹಸಿರು ಹಂದರದಲ್ಲಿ ಅಗ್ನಿಸಾಕ್ಷಿಯಲ್ಲಿ ಕೊಂಡ ಪಾಂಡುಪತಿಯಿರಲು, ದೋಷಕ್ಕೆ ಮನೆಯಾಗಿ ಹಾದರದಿಂದ ಹುಟ್ಟಿದವರು ಪಾಂಡವರಲ್ಲಿ ಅಲ್ಲದೆ ನಮ್ಮಲ್ಲಿ ಉಂಟೇ!"

ಎಂದು ಧೃತರಾಷ್ಟ್ರನ ಮಗನು ಧರ್ಮನಂದನನನ್ನೂ ವಾಯುನಂದನನನ್ನೂ ಸಕ್ರಂದನನಂದನನನ್ನೂ ಅಶ್ವಿನೀನಂದನರನ್ನೂ ನಿರಾಕರಿಸಿ, ಅಷ್ಟರಲ್ಲೇ ಬಿಡದೆ—

"ಮೊದಲೇ ಬಿಡದೆ ಆರಾಧಿಸಿದರೆ ಕೊಡಲಾರದೆ, ಬಳಿಕ ಗಂಟಲನ್ನು ಮೆಟ್ಟಿದರೆ, ಇಕ್ಕಟ್ಟಿನಲ್ಲಿ ಗೆಲುವನ್ನು ಕೊಡುವಂತೆ ನರನಿಗೆ ರುದ್ರನು ಪಾಶುಪತವನ್ನು ಕೊಟ್ಟನು . . . ತನಗೆ ಮಗನೆಂದು ಮನ್ನಿಸಿ, ತನಗೆ ತೀವ್ರವಾದ ಕಾರ್ಯವೆಂದು ಪಾಕಶಾಸನನು ಅರ್ಧಾಸನವೇರಿಸಿದನಲ್ಲದೆ ಮನುಷ್ಯನಿಗೆ ಮಾನ್ಯಪದವಿಯನ್ನು ಮಾಡಿದನೇ! . . . ಗಾಳಿಗೆ ಹುಟ್ಟಿದವನು, ರಾಘವನ ಪ್ರೀತಿಯ ಆಳು, ತ್ರಿನಯನನ ಅಂಶವೆನಿಸುವ ಹನುಮನು ಪಾಂಡವನ ಕೇತುದಂಡದಲ್ಲಿ ನೆಲಸುವುದು ಯಾವ ದೊಡ್ಡತನ! ಕಪಿಗೆ ಚಪಲತೆ ಸಹಜ! . . . ತಂಗಿಯನ್ನು ನರನಿಗೆ ಕೊಟ್ಟು, ಆತನ ಮಗನಿಗೆ ತನ್ನ ಮಗಳನ್ನು ಕೊಟ್ಟು, ತಾನು ಆತನ ರಥವನ್ನು ನಡಸಿ, ಧರ್ಮಜನ ತಮ್ಮನ ನೆಪದಿಂದ ಕೃಷ್ಣನು ಆರಸುತನ ಮಾಡುತ್ತಾನೆ . . . ಪುರುಷರು ಮೂವರಲ್ಲಿ ಒಬ್ಬನೆನ್ನುತ್ತಾರೆ; ಅಸುರ ಪ್ರಧ್ವಂಸಿ ಎನ್ನುತ್ತಾರೆ; ಜಗದ್ಗುರುವೆನ್ನುತ್ತಾರೆ; ಇತರರಿಗೆ ಏಕೆ ತೇರು ನಡಸುತ್ತಾನೆ? ಧರ್ಮನ ತಮ್ಮನಿಗೆ ಏಕೆ ಕಿಂಕರನಾದನು? ತುಂಬ ಹೇಡಿಯಾದನು? ಅದರಿಂದ ಸೂತ, ಭಟ, ಹೇಡಿ ಎಂಬವರ ಮಾತು ಒಪ್ಪುತ್ತದೆ. ಆದಿದೇವನೆನ್ನಿಸಲು ಕೃಷ್ಣನಿಗೆ ಅದು ಹೇಗೆ ಒಪ್ಪುತ್ತದೆ? . . . ಮೀನು ಮೊದಲಾದ ಅವತಾರಗಳು, ದಶಾವತಾರವು ತನಗಾಯಿತಲ್ಲದೆ, ಇರದೆ ಅರ್ಜುನನ ರಥ ನಡಸುವ ಹನ್ನೊಂದನೆಯ ಸೂತಾವತಾರವೂ ಹರಿಗಾಯಿತೇ!"

ಎಂದು ದುರ್ಯೋಧನನು ಈಶ್ವರನನ್ನೂ ಇಂದ್ರನನ್ನೂ ಕಪಿರಾಜನನ್ನೂ ಪದ್ಮೋದರನನ್ನೂ ನಿರಾಕರಿಸಿ, ಅಷ್ಟರಲ್ಲಿಯೂ ನಿಲ್ಲಿಸಿ ಸೈರಿಸಲಾರದೆ ಸಮರೋದ್ಯೋಗವಾಡಲು, ಸಂಜಯನು ಅಂಜದೆ ಎದುರಾಗಿ—

"ನೀನು ಪ್ರತಿಕೂಲವಾದ ದೈವವುಳ್ಳವನು. ಪ್ರತಿನೃಪರು ಅನುಕೂಲವಾದ ದೈವವುಳ್ಳವರು. ನೀನು ಸಹಾಯವಿಲ್ಲದವನು. ಪ್ರತಿನೃಪರು ಅಸಹಾಯರು. ನೀನು ಬಲವನ್ನು ಎದುರುಹಾಕಿಕೊಂಡವನು. ಆದ್ದರಿಂದ ವಾಕ್ಯಾರ್ಥವು ಅನರ್ಥಕ."

ಎಂದು ನುಡಿದ ಸಂಜಯನ ನುಡಿಗೆ ದುರ್ಯೋಧನನು ಸಹಿಸದೆ—

"ಸಮರಜಯವು ದೈವಾಯತ್ತ. ಆದ್ದರಿಂದ ಆ ಪುರುಷಕಾರವು ಈಗ ನಮಗೆ ಆಯಿತು. ಯಮನಂದನಾದಿಗಳಲ್ಲಿ ಒಂದೆ ವೈಯಲ್ಲಿ ಅಂತು ಇರಿವೆನು. ನನ್ನ ಛಲವನ್ನು ಮೆರೆಯುವೆನು . . . 'ದೇವನದಿಯಲ್ಲಿ ಹುಟ್ಟಿದವನೂ ಕುಂಭಜನೂ ದಿನಕರತನಯನೂ ಸಾಯಲು, ಇನ್ನು ಏಕಾಕಿಯಾದ ದುರ್ಯೋಧನನು ಯುದ್ಧದಲ್ಲಿ ಪಾಂಡವರನ್ನು ಗೆಲ್ಲಲು ಆರನು. ಆಶ್ರಯವನ್ನು ಹೊಂದುತ್ತಾನೆ' ಎಂದು ಈ ಲೋಕ ಎನ್ನುತ್ತದೆ. ಭುಜಾದಂಡ ಗದಾದಂಡ ಎಂಬ ಎರಡೂ, ಸಂಜಯ, ನನ್ನ ಜಯಕ್ಕೆ ಸಹಾಯವು. ಇನ್ನು ಮತ್ತೆ ಯಾರ ಸಹಾಯವನ್ನು ಎದುರು ನೋಡಲಿ!"

ಎಂದು ನುಡಿದು ಕಾಲದಂಡದಂತೆ ಪ್ರಚಂಡವಾದ ತನ್ನ ಗದಾದಂಡವನ್ನು ಭುಜಾದಂಡದಲ್ಲಿ ಅಳವಡಿಸಿಕೊಂಡು ಯುದ್ಧಕ್ಕೆ ಎದುರು ಮುಖವಾಗಿ ನಡೆಯುವ ಫಣಿರಾಜಕೇತನನನ್ನು ಸಂಜಯನು ಅಂಜದೆ ವಾರ್ಕೊಂಡು—

"ನರನೂ ನರನ ಮಗನೂ ಗುರುವೂ ಗುರುವಿನ ಮಗನೂ ಆರ್ಯ ಭೂರಿಶ್ರವನೂ ದೇವನದಿಯ ಮಗನೂ—ಹೀಗೆ ಆರುವರೂ ಅತಿರಥರಲ್ಲವೇ, ಕುರುಕುಲಾಂಬರಭಾನೂ! . . . ಗಾಳಿಯ ಮಗನೂ ಧೃಷ್ಟದ್ಯುಮ್ನನೂ ಯಮನ ಮಗನೂ ಮಹಾಸಾತ್ಯಕಿಯೂ ಮತ್ಸ್ಯನ ಮಗನೂ ಶಿಖಂಡಿಯೂ—ವ್ಯಾಸನ ಮತದಿಂದ ಆರುವರೂ ಮಹಾರಥ

2

ರಲ್ಲವೇ! . . . ಸೂರ್ಯನ ಮಗನೂ ದುಶ್ಶಾಸನನೂ ವೃಷಸೇನನೂ ಘಟೋತ್ಕಚನೂ ನಚ್ಚಿನ ನಕುಲನೂ ಆ ಸಹದೇವನೂ ಇವರುಗಳು ಅರ್ಧರಥರುಗಳು, ಗೊತ್ತೆ, ನೃಪತಿ? . . . ಕುರುರಾಜ! ನೀನೂ ಆ ಮದ್ರರಾಜನೂ ಸೋಮದತ್ತನೂ ಕೃಪ ಕೃತವರ್ಮರುಗಳೊಡನೆ ಶಕುನಿಯೂ ಕೂಡಿ ನಿಮ್ಮ ಆರುವರನ್ನೂ ಸಮರಥರೆಂಬರಲ್ಲವೆ! . . . ಪವನಾತ್ಮಜನು ಮಹಾರಥನು ಅವನಿಪ, ನೀನು ಸಮರಥನೇ. ಅದಕ್ಕಾಗಿ, ಅಧಿಕನಾದ ಆ ಪವನಾತ್ಮಜನಲ್ಲಿ ಬದ್ಧವಾದ ವೈರವನ್ನು ಮರೆ. ಸಂಧಿಮಾಡುವುದು ಉತ್ತಮಪಕ್ಷ."

ಎಂದು ನುಡಿದ ಸಂಜಯನ ನುಡಿಗೆ ಪಿಂಗಾಕ್ಷನು ಅತಿವಿಷಮವಾದ ಪರುಷಪೇಷಾವೇಶವನ್ನು ತಾಳಿ—

"ಆತನು ಅತಿರಥನಲ್ಲವೆ! ಬಲಯುತನೂ ಸಮರಥನೂ ಆದ ನನಗಿಂತ ಮಾರುತಿ ಅಧಿಕ ಬಲವಂತನಲ್ಲವೆ! ಮಾರುತಿಯು ಮಹಾರಥನೆ! ಅವನ ರಥದ ಗಾಲಿಗಳು ದೊಡ್ಡವೇನು? . . . . ಇತರರನ್ನು ಹೊಗಳುವೆ. ನಮ್ಮನ್ನು ಚಿಕ್ಕವನು ಮಾಡುವೆ. ಎಲವೊ ಸಂಜಯ! ನೀನೂ ಇನ್ನೊಬ್ಬ ಬಿಲ್ಲೋಜ, ಇನ್ನೊಬ್ಬ ಸಿಂಧುಪುತ್ರನಾಗಲು ಬಗೆವೆಯೇನು?"

ಎಂದು ಅರಸನು ಅವನಿಗೆ ವಿರಸವಾಗಿ ಪರುಷವನ್ನು ನುಡಿಯಲು ಸಂಜಯನು ಅಂಜಿ—

"ಎಷ್ಟೆಷ್ಟು ಕಲಿಸಿದ ಹಾಗೆ ಅಷ್ಟಷ್ಟೂ ನೃಪನಂದನನು ಸಹಜವಾದ ಭಾವವನ್ನೇ ಹೊಂದುವನು. ಉದ್ದವಾಗಿ ಬೆಳೆದ ಬಿದಿರು ಹೇಗೆ ಕಠಿಣವಾದ ಮೈಯನ್ನೂ ಟೊಳ್ಳಾದ ಒಳಗನ್ನೂ ಹೊಂದಿರುವುದೋ ಹಾಗೆ ಉನ್ನತವಂಶದ ಇವನು ಕರ್ಕಶತನು, ಅಂತಶ್ಶೂನ್ಯನು"

ಎಂದು ತಿಳಿದು, "ಮೌನವು ಸರ್ವಾರ್ಥಸಾಧನವು. ಈತನಿಗೆ ಅನುಕೂಲವಾಗಿ ನಡೆದು, ಇವನ ಮನಸ್ಸಿಗೆ ಅನುಸಾರವಾಗಿ ಮಾಡಿ, ಹೇಗೂ ದೊಡ್ಡವರನ್ನು ಕೋಪಗೊಳಿಸದಿರಬೇಕು" ಎಂದು ಮೌನವನ್ನು ಕೊಂಡು; ಸಂಜಯನು ಫಣಿರಾಜಕೇತನನು ಯುದ್ಧಸನ್ನದ್ಧನಾಗಿ ನಡೆಯುವುದನ್ನು ಕಂಡು; ಮತ್ತೆ ಆ ಸಂಜಯನು ಸ್ವಲ್ಪ ಹೊತ್ತಿದ್ದು,

ಸಹಜವಾಗಿ ಮೂರ್ಖನೂ ಸ್ವಭಾವದಿಂದ ದೃಢನೂ ಸ್ವಾಮಿಹಿತನೂ ಆದುದರಿಂದ ಇರಲಾರದೆ—

"ಸೈನ್ಯದಲ್ಲಿ ಅಶ್ವತ್ಥಾಮನೂ ಬಲದೇವನೂ ಇದ್ದಾರೆ. ಅವರಿಬ್ಬರನ್ನೂ ಬಯಸದೆ, ವಿದ್ಯಾಬಲದಿಂದ ಕಾದಿದೆ. ಅರಸ, ನಿನ್ನ ಭುಜಬಲದಿಂದ ಪಾಂಡವರೊಡನೆ ಕಾದಲು ಬಗೆದೆಯಲ್ಲಾ! ಆ ಬಲದೇವ ಅಶ್ವತ್ಥಾಮರು ಇರುವರು. ಅವರಿಬ್ಬರಲ್ಲದೆ ಕೃಪ ಕೃತವರ್ಮರು ಇರುವರು. ಹಾಗೆ ನಾಲ್ವರಲ್ಲಿ ಒಬ್ಬನಿಗೆ ವೀರಪಟ್ಟವನ್ನು ಕಟ್ಟಿ, ವೀರಪ್ರಮುಖನಿಗೆ ಸೇನಾಧಿಪತ್ಯಾಭಿಷೇಕವನ್ನು ಮಾಡಿ ಹಗೆಯನ್ನು ಕೈಗೆ ಮಾಡುವುದು" ಎನ್ನಲಾಗಿ;—

ಸಂಜಯನ ನುಡಿಗೆ ದುರ್ಯೋಧನನು ಇಂತೆಂದನು:—

"ದೇವನದಿಯ ಮಗನಿಂದ ತೀರದ ಕಾರ್ಯ, ಮೊದಲು ಕಲಶಸಂಭವನಿಂದ ತೀರದ ಕಾರ್ಯ, ಸೂರ್ಯನ ಮಗನಿಂದ ತೀರದ ಕಾರ್ಯ ದ್ರೋಣನ ಮಗನಿಂದ ತೀರುವುದೇ!...ದ್ರೋಣ ನಮಗೆ ಒಳ್ಳೆಯದು ಮಾಡಿದ! ದ್ರೋಣನ ಮಗನು ಒಳ್ಳೆಯದು ಮಾಡದಿರುವನೆ! ಯುದ್ಧಭೂಮಿಯಲ್ಲಿ ಇನ್ನು ಅವನ ಆಸೆ ಸ್ವಲ್ಪವೂ ಬೇಡ! ಕಹಿಯ ಸೋರೆಯ ಕುಡಿಯೇನು, ಮಿಡಿಯೇನು!...ರಣಕೇಳೀಕುತೂಹಲಿಯಾದ ಹಲಿಯನು ನಚ್ಚಿಕೊಂಡಿದ್ದೆ. ಅವನೂ ಯುದ್ಧದ ಕೋಲಾಹಲದಲ್ಲಿ ತೀರ್ಥಯಾತ್ರೆಯ ಹಠದಿಂದ ಬಿಟ್ಟುಹೋದವನು ಇನ್ನೂ ಬಂದಿಲ್ಲ...ಶತ್ರು ಸಾಯುವುದೇ—ರವಿಸುತನಿಂದ ಸಾಯುವುದು, ಅಥವಾ ಶೌರ್ಯಶಾಲಿ ದುಶ್ಶಾಸನನಿಂದ ಸಾಯುವುದು, ಅಥವಾ ನನ್ನಿಂದ ಸಾಯುವುದು. ಬೇರೆಯವರು ಇತರರಿಂದ ನನ್ನ ಹಗೆ ಸಾಯುವುದೇ... ಕಾನೀನನೂ ದ್ರೋಣನೂ ನದೀಜನೂ ಅಳಿದ ಈ ಬಳಿಕ ನನಗೆ ಹೆರವರು ಇಲ್ಲವೆಂದು ನಾನೇ ಉದಿರುವ ಕಣ್ಣೀರಿನಿಂದ ಸೇನಾಪತ್ಯಾಭಿಷೇಕವನ್ನು ಮಾಡಿಕೊಳ್ಳುತ್ತೇನೆ... ಯುವರಾಜನೂ ಅಂಗರಾಜನೂ ನನಗೆ ಇಬ್ಬರೂ ಎರಡು ತೋಳು, ನನಗೆ ಇಬ್ಬರೂ ಎರಡು ಕಣ್ಣು ಎನ್ನುವುದಿಲ್ಲವೆ! ನಾನು ಯುದ್ಧಮಾಡೆನೆ, ಸಂಜಯ? ನನಗೆ ಮನುಷ್ಯನ ಬಾಳೇ!... ಸೂರ್ಯನ ಮಗನು ಸತ್ತ. ಯುವರಾಜನಾದ ದುಶ್ಶಾಸನನೂ ಸತ್ತ.

ಯುದ್ಧವೀರರಾದ ಇಬ್ಬರನ್ನೂ ಸಾಯಿಸಿ, ಸುಯೋಧನನು ಬಾಳುವುದನ್ನು ನಂಬಿದಿರಾ! . . . ನನಗೆ ಇಂದು ಮನಸ್ಸು ಶೂನ್ಯ, ಮನೆ ಶೂನ್ಯ. ಬೀಡು ಶೂನ್ಯವಾಯಿತು. ಸಕಲಾವನಿ ಶೂನ್ಯವಾಯಿತು. ದುಶ್ಶಾಸನನಿಲ್ಲದೆ ಕರ್ಣನಿಲ್ಲದೆ ನಾನು ಹೇಗೆ ಇರಲಿ? . . . ಬಾಂಧವರನ್ನೂ ಸರಸಿಜಬಾಂಧವತನಯನನ್ನೂ ನನ್ನ ತಮ್ಮನನ್ನೂ ಇರಿಯಿಸಿ, ನಮ್ಮ ಅಂಧನರೇಂದ್ರನ ಮುಖವನ್ನೂ ಗಾಂಧಾರಿಯ ಮುಖವನ್ನೂ ಯಾವ ಮುಖದಲ್ಲಿ ನೋಡಲಿ?"

ಎನ್ನಲಾಗಿ; ಸಂಜಯನು ಆ ಪ್ರಸ್ತಾಪದಲ್ಲಿ "ಭೀಷ್ಮ ದ್ರೋಣ ಕರ್ಣ ದುಶ್ಶಾಸನ ಶಲ್ಯ ಶಕುನಿ ಸೈಂಧವ ಭೂರಿಶ್ರವ ಸೋಮದತ್ತ ಭಗದತ್ತ ಸೌಬಲ ಬೃಹದ್ಬಲ ಬಾಹ್ಲೀಕ ವಿಂದಾನುವಿಂದಾದಿಗಳ ಸಾವಿನಿಂದ ಸರ್ವಾಂಗವಿಕಲರಾಗಿದ್ದ ಧೃತರಾಷ್ಟ್ರ ಗಾಂಧಾರಿಯರ ಚರಣಾರವಿಂದಕ್ಕೆ ವಂದನಮಾಡಿ ದೇವರ ಮನಸ್ಸಿನ ಗಾಯವನ್ನು ಆರಿಸಬೇಕು. ಬೀಡಿಗೆ ಬಿಜಯಮಾಡಬೇಕು" ಎಂದನು.—

ಮಾತಾಪಿತೃ ದರ್ಶನ

ಅಷ್ಟರಲ್ಲಿ ಸಕಲ ಚತುರಂಗಬಲವಿಕಲನಾಗಿ ಸಪ್ತಾಂಗ ರಾಜ್ಯ ಸಮಾಲಿಂಗಿತನಾಗಿ ಸಂಗ್ರಾಮರಂಗದಲ್ಲಿರುವನೆಂಬುದನ್ನು ಆಪ್ತಚರರು ತಿಳಿಸಲು ಕೇಳಿ, ಗಾಂಧಾರಿಯೂ ಧೃತರಾಷ್ಟ್ರನೂ ಶೋಕಾಕುಲೀಕೃತ ಚಿತ್ತರಾಗಿ ತಮ್ಮ ಮಗನನ್ನು ನೋಡುವುದಕ್ಕೂ ಮನಸ್ಸಿನ ಗಾಯವನ್ನು ಆರಿಸುವುದಕ್ಕೂ ಎಂದು ಹುಡುಕುತ್ತಾ ಬಂದು—

"ಹನ್ನೊಂದು ಅಕ್ಷೋಹಿಣೀಪಡೆಗೆ ಒಡೆಯನೆ! ಮೂರ್ಧಾಭಿಷಿಕ್ತನಾದವನೆ! ಮೂರು ಬೆಳ್ಗೊಡೆಯ ನಡುವೆ ಇರುವ ನೀನು ಇದ್ದ ಎಡೆಯು ನಮಗೆ ತಿಳಿಯದ ಹಾಗಾಯಿತೆ, ಮಗನೇ!"

ಎಂಬುದಾಗಿ ಪ್ರಲಾಪಿಸುತ್ತ ಬರುವ ಗುರುಜನದ ಸ್ವರವನ್ನು ಸಂಜಯನು ತಿಳಿದು, ಕರಕಮಲಗಳನ್ನು ಮೊಗ್ಗಿನಂತೆ ಬೊಗಸೆಮಾಡಿ, "ದೇವಾ, ನಿನ್ನಲ್ಲಿಗೆ ನಿನ್ನ ತಾಯಿತಂದೆಯರು ಹುಡುಕುತ್ತಾ ಬಂದರು" ಎನ್ನಲಾಗಿ; ಗೋತ್ರದ ಕಡೆಗೆ ಮೇಲೆತ್ತಿದ ಮುಖವುಳ್ಳವನು ವಜ್ರದ ಆಘಾತವಾದ ಹಾಗೆ ಸಿಗ್ಗಾಗಿ ತಲೆಯನ್ನು ಬಾಗಿ,—

"ಶತ್ರುರಾಜರನ್ನು ಇಕ್ಕಿ ಗೆದ್ದ ಮಂಗಳದಿಂದ ವಾದ್ಯಗಳ ಧ್ವನಿ ಹೊಮ್ಮಲು, ಸೋದರರು ಮಕ್ಕಳು ಆಪ್ತರು ಇವರೊಡನೆ ಬಂದು ಆನಂದದಿಂದ ಕಾಣುವೆನೆಂದಿರಲು, ಓ ವಿಧಾತ್ರ, ದುಃಖಾತ್ಮರೂ ಶೋಕ ತತ್ಪರರೂ ಮೈಯಲ್ಲಿ ಬೀಳುವ ಕಣ್ಣೀರಿನ ಮುಖವುಳ್ಳವರೂ ಆದ ನನ್ನ ಹಿರಿಯರನ್ನು ಕಾಣುವ ಹಾಗೆ ಮಾಡಿದೆಯಲ್ಲಾ! . . . 'ಕಂದ, ನಿನ್ನ ತಮ್ಮಂದಿರು ಎಲ್ಲಿದ್ದಾರೆ?' ಎಂದು ನನ್ನನ್ನು ತಾಯಿ ಬಂದು ಕೇಳಿದರೆ, ಏನೆಂದು ಉತ್ತರಕೊಡಲಿ? ಕೌಂತೇಯರು ಕೊಂದರೆಂದು ಬಿನ್ನೈಸಲೆ?"

ಎಂಬುದಾಗಿ ಶೋಕವು ಮೀರಲು ಫಣಿರಾಜಪತಾಕನು ವಿಕಲಿತ ವಿವೇಕಶೂನ್ಯನಾಗಿ ಬಾಷ್ಪೋದ್ರೇಕದಿಂದ 'ಹಾ! ದುಶ್ಶಾಸನಾ! ಹಾ ಕರ್ಣಾ!' ಎನ್ನುತ್ತಾ ಹಾಗೆಯೇ ಮೂರ್ಛೆಗೆ ಸಂದನು.

ಹಾಗೆ ಮೂರ್ಛೆಹೋದ ಪನ್ನಗಪತಾಕನಿಗೆ ಶಿಶಿರೋಪಚಾರ ಕ್ರಿಯೆಗಳನ್ನು ಮಾಡುವ ಸಂಜಯನ ಇರವನ್ನು ಆ ಪರಿಜನಗಳು ಕಂಡು ಹೇಳಲು, ಗಾಂಧಾರಿ ಮನಸ್ಸಿನಲ್ಲಿ ಅಳುಕಿ ಬಳುಕಿ—

"ಚಂದ್ರಕುಲದ ಲಕ್ಷ್ಮಿಯೆಂಬ ಬಳ್ಳಿಗೆ ಬೇರೆ ಯಾರು? ನೀನೇ ಮೊದಲ ಆಶ್ರಯವೆನ್ನುವಂತಿದ್ದೆ. ಮಗನೇ, ಲಯಕಾಲದ ಭೀಮನೆಂಬ ಉರಗನು ಉರಗಪತಾಕನಾದ ನಿನ್ನನ್ನೂ ನುಂಗಿದನೇ! . . . ನಮಗೆ ಕುರುಡರಿಗೆ ಕೋಲಾಗಿದ್ದೆ, ಮಗನೆ. ನೀನಿದ್ದರೆ ಎಲ್ಲವೂ ಇವೆ ಎಂದಿದ್ದರೆ ನಿನ್ನನ್ನೂ ಇರಿಸದೆ, ಕುರುವಂಶಕ್ಕೆ ಅನಿಮಿತ್ತರಿಪುವಾದ ಪಾಶಪಾಣಿ ಸವಿನೋಡಿದನೇ? . . . ಹಿರಿಯರ ಚರಣಗಳಿಗೆ ಎರಗದೆ, ಹರಕೆಯನ್ನು ಆದರದಿಂದ ತಾಳದೆ, ಮೌನದಿಂದ ಕೂಡಿರುವುದು ನಿನಗೆ ಉಚಿತವೆ? ಗುರುಗಳಲ್ಲಿ ವಿನಯವನ್ನು ಏಕೆ ಮರೆತೆ, ಕುರುಕುಲತಿಲಕಾ? . . . ಸತ್ತ ದುಶ್ಯಾಸನನೇನು ಮಾತಾಡಿಸುವನೊ? ಕುರುನರೇಂದ್ರ, ದುರ್ಮರ್ಷಣನು ಮಾತನಾಡಿಸುವನೊ? ದುಷ್ಕರ್ಣನು ಮಾತನಾಡಿಸುವನೊ? ನೀನೂ ಮಾತನಾಡದೆ ಇರುವುದೆ, ಮಗನೇ?"

ಎಂದು ಗಾಂಧಾರಿ ವಿಶೇಷವಾಗಿ ಪ್ರಲಾಪಿಸಲು ಧೃತರಾಷ್ಟ್ರನು ಸಕಲರಾಷ್ಟ್ರದ ರಾಜರ ಕಿರೀಟಕೋಟಿಗಳಿಂದ ತಾಡಿತವಾದ ಚರಣಾರವಿಂದದ್ವಂದ್ವವುಳ್ಳವನು ಎನ್ನಿಸಿದ ತನ್ನ ಮಗನ ಕಾಲಮೇಲೆ ಕವಿದು ಬಿದ್ದು, "ಹಾ! ಕುರುಕುಲಚೂಡಾಮಣಿ! ಹಾ ಕುರುಕುಲ ಚಕ್ರವರ್ತಿ! ಹಾ ಸಕಲಧರಿತ್ರೀಕಾಂತ! ಕಾಯ್ದು ಕೃತಾರ್ಥನಾದ ವಿಧಾತ್ರನು ನಿನ್ನನ್ನೂ ಪರಲೋಕಕ್ಕೆ ಅಟ್ಟಿದನೆ!"—

ಎಂದು ಕರುಣದಿಂದ ಆಕ್ರಂದನಮಾಡಿದ ಗುರುಜನಗಳ ಸ್ವರವನ್ನು ಸಂಜಯನು ನಿಲ್ಲಿಸಿ, "ಕರ್ಣದುಶ್ಯಾಸನಾದಿಗಳ ಸಾವಿನಲ್ಲಿ ಶೋಕೋದ್ರೇಕದಿಂದ ಮೂರ್ಛೆ ಹೋಗಿರುವನು. ಈಗಲೇ ಚೇತರಿಸುವನು. ಅಲ್ಲಿಯವರೆಗೂ ವಿಪ್ರಲಾಪವನ್ನು ಉಪಸಂಹರಿಸುವುದು" ಎನ್ನಲಾಗಿ—

ಅಂತಃಕರಣವನ್ನು ಸಮಾಧಾನ ಮಾಡಿಕೊಂಡ ತನ್ನ ಗುರುಗಳ ಕಣ್ಣೀರು ತಳಿಯುವ ಜಲವಾಗಿರಲು, ಆ ಗುರುಗಳ ದೀರ್ಘವಾದ ಉಚ್ಛ್ವಾಸವೆ ಸುತ್ತಿನ ಕೂಗು ಆಗಿರಲು, ಕುರುಕುಲಚೂಡಾಮಣಿಯು ಮೂರ್ಛೆಯಿಂದ ಎಚ್ಚತ್ತನು.

ಹಾಗೆ ಮೂರ್ಛೆಯಿಂದ ಎಚ್ಚತ್ತು, ತನ್ನ ತಾಯಿತಂದೆಯರನ್ನು ಕಂಡು ಲಜ್ಜಾಭರದಿಂದ ತಲೆಯನ್ನು ತಗ್ಗಿಸಲಾಗಿ; ಸಂಜಯನು ಧೃತ

ರಾಷ್ಟ್ರನಿಗೂ ಗಾಂಧಾರಿಗೂ "ನಿಮ್ಮ ಮಗನಾದ ರಾಜರಾಜನು ನಿಮಗೆ ವಿನಯದಿಂದ ವಿಶೇಷವಾಗಿ ನಮಿಸಿದ ಉತ್ತಮಾಂಗವುಳ್ಳವನಾದನು. ಅವಧರಿಸುವುದು" ಎನ್ನಲು;—

ಅವನ ವಚನವೆಂಬ ಅಮೃತದ ಸ್ಪರ್ಶನದಿಂದ ಆನಂದಚಿತ್ತರಾಗಿ ತಡವರಿಸಿಯೂ ತೆಬ್ಬರಿಸಿಯೂ ತೆಗೆದಪ್ಪಿಯೂ ಮನಸ್ಸಿನ ಗಾಯವನ್ನುಳ್ಳ ಶರೀರದವನನ್ನು ನೂರುಸಾವಿರ ಪರಮಾಶೀರ್ವಚನಗಳಿಂದ ಹರಸಿ, ಪುನಃಪುನಃ ಆಲಿಂಗನಮಾಡಿ, ಸ್ವಲ್ಪ ಹೊತ್ತಿನಲ್ಲಿಯೇ ಪರಿಜನರನ್ನು ಕಳುಹಿಸಿ, "ಯಮಸುತನು ಇನ್ನೂ ನಮಗೆ ಅವಕಾಶ ಕೊಡುವನು. ಒಡಂಬಡು, ಕಂದ. ಸಂಧಿಯನ್ನು ಏರ್ಪಡಿಸಲು ಸಂಜಯನನ್ನು ಅಟ್ಟುವೆನು. ಭೀಮನಲ್ಲಿ ಆದ ಬದ್ಧವೈರವನ್ನು ಬಿಡು. ಮಕ್ಕಳ, ಒಡಹುಟ್ಟಿದವರ ದುಃಖವನ್ನು ನೋಡದಿರು. ಅವರಿಗೆ ಅರ್ಧರಾಜ್ಯವನ್ನು ಕೊಡು" ಎಂದು ಅಂಧನೃಪಾಲನು ಕೈಮುಗಿದು ಮಗನನ್ನು ಬೇಡಿದನು.

ಹಾಗೆ ಕುರುನರೇಂದ್ರನನ್ನು ಅಂಧನರೇಂದ್ರನು ಬೇಡಿಕೊಂಡು—"ಶತ್ರುರಾಜರ ಸೈನ್ಯವನ್ನು ಕೆಡಹಿಬೀಳಿಸಿ ಗೆದ್ದ ಏಕಾಂಗವೀರನು, ಜಟಾಸುರ ಕಿಮ್ಮೀರ ಹಿಡಿಂಬ ಕೀಚಕ ಜರಾಸಂಧರುಗಳನ್ನು ಕೊಂದ ಭೀಕರ ಶೌರ್ಯನು, ಉಗ್ರವಾಗಿ ಕೆಲಸಮಾಡಿ ನಿನ್ನ ತಮ್ಮಂದಿರು ನೂರ್ವರನ್ನೂ ಒಟ್ಟಿಗೆ ಕೊಂದಿಕ್ಕಿದನು. ನಿನ್ನನ್ನು ಅದೇಕೆ ಉಳಿಸುತ್ತಾನೆ! ಆದ್ದರಿಂದ ಆತನಲ್ಲಿ ಆಗುವ ಯುದ್ಧದ ಅನುಬಂಧವನ್ನು ಬಿಡುವುದು. ನಾನು ಹೇಳುವುದಕ್ಕೆ ಅವಕಾಶ ಕೊಡಬೇಕು" ಎಂದ ಧೃತರಾಷ್ಟ್ರನ ನುಡಿಯನ್ನು ಗಾಂಧಾರಿ ಒತ್ತಿಕೇಳಿ, ತಾನೂ ಪ್ರಾರ್ಥಿಸಿ—

"ಪರಿಣತವಾದ ವಯಸ್ಸಿನವರಾಗಿದ್ದೇವೆ. ಎರಡು ಕಣ್ಣೂ ಕುರುಡಾದವರಾಗಿದ್ದೇವೆ. ನಮಗೆ ಅವಕಾಶ ಕೊಡುವುದು ಉಚಿತ. ನಿನ್ನ ಈ ಗುರು ನುಡಿದ ನುಡಿಗೆ ಒಡಂಬಡು. ಗುರುವಚನವು ಅಲಂಘನೀಯ ಎನ್ನುತ್ತಾರೆ, ಮಗನೇ. ಸಮರದ ವ್ಯಾಪಾರವನ್ನು ಬಿಟ್ಟು, ಮಗನೆ, ನಿನ್ನ ಶಿಬಿರದ ಅತ್ತ ಬಿಜಯಮಾಡು. ಸತ್ತ ಮಗಂದಿರು ಸತ್ತರು. ನೀನು ನಮಗೆ ಇದ್ದರೆ ಸಾಕು. ಅವರನ್ನು ಇನ್ನು ತರುವೆವೇ?" ಎಂದು

ಗಾಂಧಾರಿ ತನ್ನ ಇತರ ಮಕ್ಕಳನ್ನು ನೆನೆದು ದುಃಖ ಮರುಕೊಳಿಸಿ ದುಃಖಿಸಲು—

ಸಂಜಯನು ಗದರಿಸಿ, "ಬಂದು ಪ್ರಿಯಸುತನನ್ನು ಸಂತೈಸ ಬೇಕು. ಅದು ಕೆಟ್ಟು, ನೀನೇ ಶೋಕಾಕ್ರಾಂತೆಯಾಗಿ ಶೋಕಿಸಿದರೆ, ಅಂಧನೃಪತಿಯನ್ನೂ ನೃಪತಿಯನ್ನೂ ಸಂತೈಸುವವರು ಯಾರು?" ಎನ್ನಲಾಗಿ—

ವೃದ್ಧರಾಜನು ಕುರುರಾಜನಿಗೆ ಅಭಿಮುಖನಾಗಿ, "ಕೌರವಪತಿ, ದುಃಖದ ಮಹಾಭಾರವನ್ನು ಹೊತ್ತು ಆಯಾಸಕ್ಕೆ ಗುರಿಯಾದುದರಿಂದ ವೀರರಾದ ಮಕ್ಕಳ ತಾಯಿಯಾದ ಈ ಗಾಂಧಾರಿಗೆ ನೂರು ದುಃಖಗಳ ತಾಯಿಯೆಂದು ಈಗ ಹೆಸರಾಯಿತು" ಎಂದು ನುಡಿದ ನರೇಂದ್ರನ ನುಡಿಗೆ ಸಂಜಯನು ಒಡಂಬಟ್ಟು, "ನೃಪತಿ, ನಿನ್ನ ತಂದೆಯಾದ ನೃಪತಿಯು ಹೇಳಿದ ಯುಕ್ತವಾದ ಇದನ್ನು ನೀನು ಕೈಕೊಳ್ಳು" ಎನ್ನಲು—

ಭೂಮಿಪನು ಹೇಳಿದನು: "ನಿಮ್ಮ ಪೂರ್ವಪಕ್ಷವು ಅದೇ ನಮಗೆ ಸಿದ್ಧಾಂತವಾಯಿತು . . . ತನ್ನ ಒಡಹುಟ್ಟಿದ ಹೆಸರ ನಾಲ್ವರಲ್ಲಿ ಒಬ್ಬರು ಇಲ್ಲದಿದ್ದರೂ ತನ್ನ ಜೀವವನ್ನು ಧರ್ಮತನೂಜನು ಅಗ್ನಿಗೆ ನಿವೇದಿಸುವನು ಎಂದರೆ, ನಾನು ನನ್ನ ಒಡಹುಟ್ಟಿದ ಹೆಸರ ನೂರ್ವರಲ್ಲಿ ಒಬ್ಬರೂ ಇಲ್ಲದೆ ಬಾಳುವೆನು ಎಂಬ ಎನ್ನ ಕೀಳಾಸೆಯನ್ನು ಬಿಸುಡಿರಿ. ಇನ್ನು ಅವರು ಆದುದನ್ನು ಆಗದಿರುವೆನೇ! . . . ಫಲ್ಗುಣನನ್ನು ಸಾಧಿಸುತ್ತೇನೆ! ಪವನಸುತನ ಬಸಿರಿಂದ ಸಾಧಿಸುತ್ತೇನೆ! ಹಾ ಕರ್ಣ! ಹಾ ದುಶ್ಶಾಸನಾ! ತೆಗೆಯುವೆ. ನಿರ್ದೋಷಿಗಳಾಗಲಿ. ಯಮಜನಲ್ಲಿ ಸುಖವಾಗಿ ಬಾಳಿನು . . . ಧರೆಯನ್ನು ಪಾಂಡುರಾಜನೂ ನೀನೂ ಹಂಚಿಕೊಂಡು ಆಳಿದಿರಿ. ಅದನ್ನೆ ಮೋಸದಿಂದ ಐವರ ಕೈಯಲ್ಲಿ ಎಳೆದುಕೊಂಡೂ ಕುರುರಾಜನು ಮತ್ತೆ ಅವರಿಗೆ ಅನುಕೂಲ ಕೊಡುವನೇ! . . . ನಾನು ಮಗನಾದುದಾದರೆ ಧರ್ಮಜನೇನು ಮಗನಲ್ಲವೆ? ಬಳಿಕ ನೀವೂ ತಾವೂ ನಿಮ್ಮಲ್ಲಿ ನೇರವು ಬೀಳದ ಹಾಗೆ ಸುಖವಾಗಿ ಮೊದಲಿನಂತೆ ಬಾಳಿ. ನಾನು ಅಡ್ಡಿ ಬರುವುದಿಲ್ಲ. ನನ್ನನ್ನು ಬಿಡಿ" ಎಂದು ಮುಂದಿದ್ದು ಅಡಿಗೆ ಎರಗಿದ ಮಗನನ್ನು ಅಪ್ಪಿಕೊಂಡು, ಕಣ್ಣೀರು ಗುಡುಗುಡನೆ

ಸುರಿಯಲು ನಾಲಗೆ ತಡೆದುತಡೆದುಬರಲು, ಅಂಧನೃಪನು ಆ ನೃಪನಿಗೆ ಹೇಳಿದನು:

“ನೀನು ಹೇಗೂ ನಾವು ಹೇಳಿದುದನ್ನು ಕೈಕೊಳ್ಳದೆ ವೈರವನ್ನೇ ಕೈಕೊಂಡು, ಪಾಂಡುನಂದನರೊಡನೆ ಕಾದಿದಲ್ಲದೆ ಸಂಧಿಯನ್ನು ಒಡಂಬಡುವುದಿಲ್ಲವಾದುದರಿಂದ, ನೀನು ನಮಗೆ ಇಷ್ಟು ಒಳ್ಳೆಯದು ಮಾಡಬೇಕು. ಮಾಡುವ ಕಾರ್ಯವಾವುದನ್ನೂ ನಿಮ್ಮ ಅಜ್ಜನಲ್ಲಿ ಆಲೋಚಿಸಿ ಮಾಡುವುದು. ಅಲ್ಲಿಗೆ ಬಿಜಯಮಾಡು” ಎನ್ನಲು—

“ಮಹಾಪ್ರಸಾದ” ಎಂದು ಅದಕ್ಕೆ ಒಡಂಬಟ್ಟು, ಹಾಗೇ ಮಾಡುವೆನೆಂದು ತನ್ನ ಗುರುಜನವನ್ನು ಬೀಳ್ಕೊಂಡು, ಬೀಡಿಗೆ ಹೋಗಲು ಹೇಳಿ, ಸ್ವಲ್ಪ ಹೊತ್ತು ಶೋಕಾನುಬಂಧದಲ್ಲಿ ಕೋಪಾನುಬಂಧವೂ ಸಮರಾನುಬಂಧವೂ ಒಳಗೆ ಸೇರಿಕೊಂಡಿದ್ದು, ಸಂಜಯನ ಜೊತೆಯಲ್ಲಿ ತನ್ನ ಭುಜದ ಗದೆಯೆ ಸ್ನೇಹಿತನಾಗಿ ಸಂಗ್ರಾಮಭೂಮಿಯೊಳಗೆಯೇ ಬಂದನು.

ರಣರಂಗದಲ್ಲಿ

ಮುರಿದಿದ್ದ ಆಯುಧವು ರಕ್ತದ ಕಡಲಲ್ಲಿ ಅಡಿಗಡಿಗೆ ಅಂಗಾಲನ್ನು ಸೀಳುತ್ತಿರಲು, ಕಾಲಿಡಲು ಎಡೆ ಪಡೆಯದೆ, ಕುರುಪತಿಯು ದಡಿಗಹೆಣಗಳನ್ನು ಮೆಟ್ಟಿ ನಡೆಯುತ್ತಿದ್ದನು. ಆಗ ಅದನ್ನು ಕಂಡು, ಹೆಣವನ್ನು ತಿನ್ನುವ ಪಿಶಾಚಿಗಳ ತಂಡವು ದೊಡ್ಡಹೆಣಗಳನ್ನು ಆರಸುತ್ತಾ ಅಲ್ಲಿ ಮೇಲಿಂದ ಮೇಲೆ ಬರಲು, ಹತ್ತಿರ ಬರುವುದಕ್ಕೆ ಸ್ವಲ್ಪವೂ ಅವಕಾಶ ಕೊಡದೆ, ಒಳ್ಳೆಯ ಭಟರು ಅಲ್ಲಿ ತಮ್ಮ ಒಡೆಯನ ಹೆಣವನ್ನು ಕಾದುಕೊಂಡಿದ್ದರು. ಅವರು "ಕುರುಡುರಾಜನ ಮಗನೋ, ಹುಟ್ಟು ಕುರುಡನೋ! ಮೆಟ್ಟದೆ ಆಚೆ ಹೋಗು!" ಎನ್ನುತ್ತಾ ಕೋಪದಿಂದ ಕಣ್ಣು ಕಾಣದ ಅವರು ತಮ್ಮ ಪತಿಯ ಕಬಂಧವನ್ನು ಕದಲಿಸಿ ಹೋಗುವ ದುರ್ಯೋಧನನನ್ನು ಗದರಿಸಿದರು. ಹಲ ಚಕ್ರ ಅಂಕುಶಗಳ ರೇಖೆಯಿಂದ ವಿಲಸಿತವಾದ ಪದತಲಕ್ಕೆ ಹಲ ಚಕ್ರ ಅಂಕುಶಗಳು ಹೊಸ ರಕ್ತದ ಬಣ್ಣವನ್ನು ಉಂಟುಮಾಡಲು, ಕುರುಕುಲತಿಲಕನು ಕುಸಿಕುಸಿದು ಮೆಲ್ಲಮೆಲ್ಲನೆ ನಡೆದನು.

ಆಗ ಅದನ್ನು ಕಂಡು ಸಂಜಯನು ಗಳಗಳನೆ ಕಣ್ಣೀರನ್ನು ತುಂಬಿ ದುಃಖ ಮಿತಿಮೀರಿದ ಕಂಠವುಳ್ಳವನಾಗಿ, "ವಿನುತರಾದ ವಿರೋಧಿ ಮಂಡಳಿಕರ ಮೌಳಿಗಳಿಂದ ವಿಘಟ್ಟಿತವಾದ ಪಾದಪೀಠದ ಕಾಂಚನದಿಂದ ಕಮಲದ ಹಾಗಾದ ನಿಮ್ಮ ಮೃದುವಾದ ಪಾದಗಳು ಭಿಂಡಿವಾಳದ ಅಂಬಿನ ಕರವಾಳದ ಕಕ್ಕಡೆಯ ಕೊಂತದ ಧಾರೆಗಳು ಸೀಳುವಂತೆ ಯುದ್ಧಭೂಮಿಯಲ್ಲಿ ವಿಧಾತ್ರುವಶದಿಂದ ನಿಮಗೂ ನಡೆಯುವ ಹಾಗಾಯಿತೇ!"

ಎಂದು ಗಳಗಳನೆ ಕಣ್ಣ ನೀರನ್ನು ತುಂಬುವ ಸಂಜಯನನ್ನು ಅಭಿಮಾನಧನನಾದ ಸುಯೋಧನನು ಸಂತೈಸಿ, "ಮಕ್ಕಳ, ತಮ್ಮಂದಿರ ವಿಯೋಗದ ಮನಸ್ಸಿನ ಗಾಯ ನೋಯಿಸಲು ಸಮರ್ಥವಲ್ಲ! ಯುದ್ಧ ಭೂಮಿಯಲ್ಲಿ ಮುರಿದಿದ್ದ ಆಯುಧಗಳು ವಜ್ರದಂತಹ ಮನಸ್ಸಿರುವ ನನ್ನನ್ನು ಇಷ್ಟಾದರೂ ನೋಯಿಸುತ್ತವೆಯೆ!" ಎಂದು ಕುರುಕುಲ

ಮಾನಸ್ತಂಭನು ಧೈರ್ಯವನ್ನು ಅವಲಂಬಿಸಿದವನಾಗಿ ಬರುತ್ತಾ—ಯುದ್ಧದಲ್ಲಿ ಇದಿರಿಸಿ ಸತ್ತ ಭಟರನ್ನೂ ಗಜದ ಎದುರಿಗೆ ಹೋರಾಡಿ ಸತ್ತ ವೀರರನ್ನೂ ಪರಾಕ್ರಮದಿಂದ ಸಾವಿರ ಭಟರನ್ನು ರಣದಲ್ಲಿ ಕಾಳೆಗಮಾಡಿ ಇಕ್ಕಿ ಸತ್ತ ಶೂರರನ್ನೂ ಅರಸುತ್ತಾ ಬರುವ ಸುರಸುಂದರಿಯರುಗಳನ್ನು ಈಕ್ಷಿಸುತ್ತಾ ಪರಾಕ್ರಮನಿಕೇತನನಾದ ಫಣಿರಾಜಕೇತನನು ಮೆಲ್ಲನೆ ನಡೆದನು.

ಆಗ ಸಂಜಯನು ಅರಸನ ಚಿತ್ತವೃತ್ತಿಯನ್ನು ಅರಿತು, "ಬಿಡದೆ ಉತ್ಸಾಹವು ವೀರವನ್ನು ಉಂಟುಮಾಡಿ, ನಿಶ್ಚಯಿಸಿ, ಛಲಕ್ಕೆ ಬಿಡದೆ ಇರಿದು, ನೆಲವನ್ನು ಬಿಡದೆ, ಪರಾಕ್ರಮದಿಂದ ತಮ್ಮ ಮುಂದಿದ್ದ ಅಡಿಯನ್ನು ಹಿಂದೆ ಇಕ್ಕದೆ ಇಲ್ಲಿ ಭಟರುಗಳು ಸತ್ತರು... ಹರಿದ ತಲೆ, ಬಿಟ್ಟ ಬಾಯಿ, ನಸುಮುರಿದ ಕೊರಲು, ಮುಚ್ಚಿದ ಕಣ್ಣುಗಳು, ಅರುಣಜಲದಿಂದ ಅಂಟಿದ ಮೈ—ಇದರೊಡನೆ ಇಲ್ಲಿ ಭಟರುಗಳು ಬೀಭತ್ಸರಸವನ್ನು ಅಭಿನಯಿಸುತ್ತಿದ್ದರು .... ಕವಲುಬಾಣವು ತನ್ನ ಪಕ್ಕದವನನ್ನು ಕೊಳ್ಳಲು, ರಕ್ತ ಚಿಮ್ಮಲು, ತಾನು ನೊಂದೆನೆಂದು ಭ್ರಮಿಸಿ, ವಿಚಾರಿಸದೆ, ಕಡು ಹೇಡಿಯಾದವನು ಬೇಗ ಮೂರ್ಛೆಹೋಗಿ ಪಡೆಗೆ ನಗೆಯನ್ನು ಪಡೆದನು ... ಏರಿದವರು ಎತ್ತಿ ನಿಲ್ಲಿಸಿದ ಕೊಂಕಾದ ಹುಬ್ಬು, ಕಚ್ಚಿದ ಔಡು, ಉಚ್ಚಿದ ಕತ್ತಿ, ಇರಿಯಲು ಸಿದ್ಧವಾದ ಕೈ, ಭಯವಾಗುವಂತೆ ಬಿಟ್ಟ ಕಣ್ಗಳು ಇವು ರೌದ್ರರಸವನ್ನು ತಿಳಿಸಿದುವು ... ಬೆರಲನ್ನು ಕಚ್ಚುವ, ಹುತ್ತವನ್ನು ಓಡಿ ಏರುವ, ಆಯುಧವನ್ನು ಇರಿಸಿ ಅಡ್ಡಬೀಳುವ, ಭಯಜ್ವರದಿಂದ ನಡುಗುವ ಭೀರುಗಳು ಕೆಲವರು ಭಯಾನಕರಸವನ್ನು ಕನ್ನಡಿಸಿದರು... ನಿರತೆ, ನಿರಹಂಕಾರಗಳಿಂದ ಕೂಡಿ, ನಿರಾಯುಧರಾಗಿ ದೀನವದನದಿಂದ ಅಳುಕಿ ಪರಾಙ್ಮುಖರಾಗಿ ನಿಂತವರನ್ನು ಕಡುಮುಳಿದ ಆಳುಗಳು ಕರುಣಿಸಿ ಇರಿಯದೆ ಕಳುಹಿದರು ... ಕುದುರೆಗಳನ್ನು ಒಂದೆ ಏಟಿಂದ, ಮದದಾನೆಗಳನ್ನು ಎರಡೆ ಏಟಿನಲ್ಲಿ ಎರಡು ಖಂಡಮಾಡಿದ ಖಡ್ಗಧರರ ಭುಜಬಲವು ರಣದಲ್ಲಿ ಅದ್ಭುತರಸವನ್ನು ಅದೇನು ನಿಮಿರಿಸಿತೋ! ... ಬಹಳವಾಗಿ ಇರಿದು, ನೊಂದು, ಆಯುಧಕ್ಕೆ ಕೈಯನ್ನು ತರಲಾರದೆ, ಇಷ್ಟದೈವದ ಚರಣವನ್ನು ಸ್ಮರಣಮಾಡುವುದರಲ್ಲಿ ಪರಿಣತ

ವಾದ ತಮ್ಮ ಅಂತಃಕರಣವು ನಿಲ್ಲಲು, ಅವರಲ್ಲಿ ಶಾಂತರಸವು ಸಿಂಕಿತು" ಎಂದು ಸಂಜಯನು ಅರಸನಿಗೆ ನವರಸವನ್ನು ಅಭಿನವ ರಸಮಾಡಿ ತೋರುತ್ತಾ ಬರುತ್ತಿರಲಾಗಿ—

"ಗುರುವಿನ ನೆತ್ತರನ್ನು ಕುಡಿಯುವೆನಾದರೆ, ಅವನು ದ್ವಿಜವಂಶ ಜನು. ನಿನ್ನ ತಮ್ಮನ ನೆತ್ತರನ್ನು ಕುಡಿಯುವೆನಾದರೆ, ಭೀಮನೆ ಪ್ರತಿಜ್ಞೆ ಹೀರಿದನು. ಭೀಷ್ಮರ ಬಿಸುನೆತ್ತರನ್ನು ಕುಡಿವುದಾದರೆ, ಇನ್ನೂ ಬದುಕಿದ್ದಾನೆ. ಕುರುರಾಜಾ, ನಿನ್ನ ನೆತ್ತರ ಸವಿ ನೋಡುವವರೆಗೂ ಬಯಸಿ ನಶಿಸಿ ಹೋಗುತ್ತಿದ್ದೇನೆ" ಎಂದು ಒಂದು ಹುಲುಮರುಳು ಹೇಳಿತು.

ಅದನ್ನು ಕೇಳುತ್ತಾ ಬರುತ್ತಿರಲಾಗಿ, ಯುದ್ಧದಲ್ಲಿ ಹೊರಗೆ ಬಂದ ಒಳ್ಳೆಯ ಮೆದುಳಿನ ಕೆಸರಿನಲ್ಲಿ ಜಗುಳಿದ ಕಾಲು ಜಾರಿಹೋಗಲು ಒಡನಿದ್ದ ಸಂಜಯನು ಇಳೇಶ್ವರನನ್ನು ಹಿಡಿದು, "ಊರುಭಂಗವಾಗಲಿಲ್ಲ ತಾನೆ?" ಎಂದರೆ; "ಆಗಲಿಲ್ಲ" ಎನ್ನಲು; ಹುಲುಮರುಳು ಒಂದು ಕಡೆ ಹೋಗಿ, "ಭೀಮನ ಕೋಪದಿಂದ ನಿನಗೆ ಊರುಭಂಗದ ಭಯ ವಾಗದೆ ಹೋಗುತ್ತದೆಯೆ, ಕೌರವೇಶ್ವರಾ!" ಎಂದ ಮರುಳಿನ ಮಾತು ತನಗೆ ಕರ್ಣಕಠೋರವಾಗಲು, ತನಗೆ ಮೊದಲು ಮೈತ್ರೇಯರು ಕೊಟ್ಟ ಊರುಭಂಗಶಾಪವನ್ನು ನೆನೆನೆನೆದು, ಮನಸ್ಸಿನಲ್ಲಿ ದೃಢವಾಗಿ ಕಡೆದು, ತಾನು ಮಹಾಸತ್ತ್ವನಾದುದರಿಂದ ಒಂದನ್ನೂ ಬಗೆಯದೆ, "ಮರುಳ ಮಾತಿನಲ್ಲಿ ಪುರುಳೇನು!" ಎಂದು ಅರಸನು ಹೋಗಹೋಗಲಾಗಿ—

"ಅರಗಿನ ಮನೆಯಲ್ಲಿ, ವಿಷದ ಲಡ್ಡುಗೆಯಲ್ಲಿ ಕೊಲ್ಲಲೆಂದು ಬದ್ಧ ಮತ್ಸರದಿಂದ ವೈರವನ್ನು ಬೆಳಸಿ, ಭೀಮನನ್ನು ಇಷ್ಟಕ್ಕೆ ತಂದ ನೀನು ಮರುಳನೊ? ಭೂತಕೋಟಿಯ ಜೊತೆಯಲ್ಲಿ ಯುದ್ಧರಂಗದಲ್ಲಿ ಆಡುತ್ತಿರುವ ನಾನು ಮರುಳನೊ? ಇಬ್ಬರ ಮರುಳ್ತನವನ್ನೂ ನೋಡೋಣ, ಫಣಿರಾಜಕೇತನಾ!" ಎನ್ನಲಾಗಿ; ಸುಯೋಧನನು ಕೆಳಗಿವಿಕೇಳಿ, "ಮರುಳ ಮಾತಿನಲ್ಲಿ ಪುರುಳಿಲ್ಲ!" ಎಂದು ಸ್ವಲ್ಪದೂರ ಮುಂದೆ ಹೋಗಲು—

"ನುಡಿಯದೆ ಹೋಗಲು ಅವಕಾಶ ಕೊಡುವುದಿಲ್ಲ. ಎಲೇ, ಹೋದರೆ, ಧೂರ್ಜಟಿಯಾಣೆ! ಮೀರಿ ಹೋದರೆ, ಕಲಿಭೀಮನಾಣೆ!"

ಎನ್ನಲು; ಧೂರ್ಜಟಿಯು ಆಣೆಗೆ ನಿಂತು, ಭೀಮನೆಂದರೆ ಮುನಿದು, ಅಟ್ಟಿ ಅರಸನು ಕುಟ್ಟುವುದಕ್ಕಾಗಿ ಗದೆಯನ್ನು ಕೊಂಡರೆ; ಭೂತ ಕೋಟಿಯೂ ದೊಣ್ಣೆಗಳನ್ನು ಕೊಂಡರೆ; ಸಂಜಯನು ನಯದಿಂದ ಫಣಿ ರಾಜಕೇತನನನ್ನು ಒಡಂಬಡಿಸಿದನು.

ಹಾಗೆ ಅನೇಕವಾದ ಅಪಾಯಗಳಿಂದ ಕೂಡಿದ ಪ್ರದೇಶಗಳನ್ನು ಹೇಗಾದರೂ ಕಳೆದುಹೋಗಹೋಗಲು—'ಮುನಿದು ಬಂದು ಇಲ್ಲಿ ಭೀಮನು ನಿನ್ನ ತಮ್ಮನನ್ನು, ಆ ದ್ರೌಪದಿಗೆ ದ್ರೋಹಮಾಡಿದವನನ್ನು ಕೊಂದನು' ಎನ್ನಲು; 'ನಾನು ಆ ಪರಿಭವವನ್ನು ಕೇಳಲಾರೆ. ಮುಂದೆ ಮುಂದೆ' ಎಂದು ಕಣ್ಣೀರಿನಲ್ಲಿ ಮುಳುಗಿದವನು, ಒಡೆದ ಮನಸ್ಸಿನವನು ತಲೆಯನ್ನು ತಗ್ಗಿಸಿ, 'ಬಿಲ್ಲಗುರು ಎಲ್ಲಿರುವನು? ಭೀಷ್ಮನು ಎಲ್ಲಿರುವನೊ? ತೋರು' ಎನ್ನಲು; ಸಂಜಯನು ಕುರುಕುಲದವನನ್ನು ಕೊಂಡುಹೋದನು.

ಹಾಗೆ ಹೋಗಲು, ಆನೆಗಳ ಬೆಟ್ಟಗಳನ್ನು ಏರಿ ಏರಿ, ರಕ್ತದ ಹೊಳೆಗಳನ್ನು ದಾಟಿ ದಾಟಿ, ಆನೆಗಳ ಸೊಂಡಿಲುಗಳೆಂಬ ನೀಲವಾದ ಲತೆಗಳ ಸಾಲಿನ ಕಾಡಿನ ಗುಂಪಿನಲ್ಲಿ ಸಿಕ್ಕಿ ಸಿಕ್ಕಿ, ತ್ವರೆಮಾಡಿ, ನಿಲ್ಲದೆ ಹೋಗಿ, ಸಂಜಯನ ಹೆಗಲನ್ನು ಅವಲಂಬಿಸಿದ ಶಿರವುಳ್ಳ ಕುರುಪ್ರಭು ಶರಜಾಲದಿಂದ ಜರ್ಜರಿತಗಾತ್ರತ್ರಾಣನಾದ ದ್ರೋಣನನ್ನು ಕಂಡನು. ಸಹಜವಾಗಿಯೇ ದುಷ್ಟನಾದ ಧೃಷ್ಟದ್ಯುಮ್ನನ ಕೈಹಿಡಿದು ಕತ್ತರಿಸಿಹೋದ ತಲೆಯಾಗಿದ್ದ ಭಾರದ್ವಾಜನ ಸ್ಥಿತಿಯನ್ನು ರಾಜರಾಜನು ನೋಡಿ—

"ನಮಗೆ ಗೊತ್ತಿಲ್ಲವೆ! ಬಿಲ್ಲಿನ ವಿಜ್ಞಾನಕ್ಕೆ, ಗಾಂಡಿವಿಯಲ್ಲ, ಪಿನಾಕಪಾಣಿಯೂ ನಿಮ್ಮೊಡನೆ ಎದುರಿಸಿ ಕಾದಿ ಗೆಲ್ಲಲು ಆರನು. ಅದು ನಿಮ್ಮ ಉಪೇಕ್ಷೆಯೆಂದು ಅರಿಯೆ. ಇದು ನನ್ನ ಕರ್ಮವಶವೆಂದರಿವೆನು. ಕುಂಭಸಂಭವಾ, ನಿಮಗೆ ಹೀಗೆ ಸಾವು ಯಾವ ರೀತಿಯಿಂದ ಅಕಾರಣವಾಗಿ ಒದಗಿ ಸಂಭವಿಸಿತೋ!" ಎಂದು ದುಃಖಮಾಡಿ, ರಾಜರಾಜನು ಅವನ ಮಗನನ್ನು ನೆನೆದು—

"ಪರಾಕ್ರಮದ ಪಾರ್ಥನು ಬಾಣದಿಂದ ಹೊಡೆದು ಕೊಲ್ಲಲು, ಬಲವುಳ್ಳ ದ್ರುಪದನ ಮಗನು ಓಂಡೆಗೆಯದೆ ಹುಡಿಯಲ್ಲಿ ಹೊರಳಿಸಿ

ತಲೆಯನ್ನು ತೆಗೆಯುವಾಗ ಪಿನಾಕವೆತ್ತ ಹೋಯಿತೊ? ಶರವೆತ್ತ ಹೋಯಿತೊ? ಹಣೆಯ ಕೆಂಡಗಣ್ಣು ಅದೆತ್ತ ಹೋಯಿತೊ? ಗುರುಸೂನು ತಾನೂ ತಂದೆಯ ಪ್ರೀತಿಯೂ ಅದೆತ್ತ ಹೋದುವೋ? . . . ಶರಸಂಧಾನವನ್ನು ಅನ್ಯಸೈನ್ಯದ ಒಡಲಿನಲ್ಲಿ, ಬಿಲ್ಲಿನ ಬಲ್ಮೆಯನ್ನು ತನ್ನ ಶಿಷ್ಯರ ಪ್ಕೈಯಲ್ಲಿ, ತನ್ನ ಕೀರ್ತಿಯನ್ನು ನಿಖಿಲದಿಕ್ಚಕ್ರಗಳಲ್ಲಿ, ಚಿತ್ತವನ್ನು ಹರಪಾದಾಂಬುಜಯುಗ್ಮದಲ್ಲಿ ನಿಲ್ಲಿಸಿದವನು—ಚಾಪಾಗಮಾಚಾರ್ಯರಲ್ಲಿ ಸಮನಾರು ಎನ್ನುವ ಮಟ್ಟಿಗೆ ಕಾದಾಡಿ ಸತ್ತ ಈ ಸಾಮರ್ಥ್ಯ ದ್ರೋಣನಿಗೆ ಅದೇನು ಪ್ರತ್ಯಕ್ಷವಾಯಿತೋ!" ಎಂದು ಗುರುನಂದನನನ್ನು ನಿಂದಿಸಿ, ಗುರುವನ್ನು ಅಭಿನಂದಿಸಿ—

"ನನ್ನನ್ನು ಉಪೇಕ್ಷಿಸಿ ಕಾದಿದನು. ಇನ್ನು ಈ ಗುರುವಿಗೆ ಎರಗೆನು" ಎನ್ನದೆ ಪನ್ನಗಚಿಹ್ನನು ಅಡಿಯಲ್ಲಿ ಎರಗಿದನು. "ಹಿರಿಯರಾದವರು ಮೊದಲು ಕೂಡಿದುದನ್ನು ಮಧ್ಯದಲ್ಲಿ ಕೆಡಿಸುವರೇನು?" ಎಂದು ಕುಂಭಸಂಭವನನ್ನು ಮೂರು ಬಾರಿ ಪ್ರದಕ್ಷಿಣೆ ಮಾಡಿ ಬರುತ್ತಾ—

ಆ ದಿಕ್ಕಿನಲ್ಲಿ ಶರಾಚಾರ್ಯರಿಗೆ ಅಭಿಮುಖನಾಗಿ ಅರೆಮುಗಿದಿದ್ದ ಕಣ್ಣುಗಳೂ ಅರಳಿದ ಮುಖವೂ ಕಡಿದುಹೋದ ಕೈಯೂ ಆಸುರತರವಾಗುವಂತೆ ಕಚ್ಚಿದ ಅವುಡೂ ಕೂಡಿಕೊಂಡು, ಅನ್ಯರ ಶರಪ್ರಹಾರಗಳಿಂದ ಜರ್ಜರಿತಶರೀರನಾಗಿ ಹೊಸರಕ್ತದ ಸಮುದ್ರದಲ್ಲಿ ಅದ್ದು ಬಿದ್ದವನನ್ನು, ಅಭಿಮನ್ಯುಕುಮಾರನನ್ನು, ಯುದ್ಧವೀರನನ್ನು ಕುರುಪತಿ ನೋಡಿದನು. ಹಾಗೆ ಆತನನ್ನು ಅಹಿಕೇತನನು ನೋಡಿ—"ಗುರು ಹೂಡಿದ ಚಕ್ರವ್ಯೂಹದ ರಚನೆಯನ್ನು ಹೊಗಲು ಇತರರಿಗೆ ಅಸಾಧ್ಯ. ಇದನ್ನು ಹೊಕ್ಕು ರಣರಂಗದಲ್ಲಿ ಅರಿನೃಪರನ್ನು ಇಕ್ಕಿದ ನರಸುತ, ನಿನ್ನ ಸಮಕ್ಕೆ ಜೊತೆಗೆ ವೀರರಿರುವರೇ! . . . ಪ್ಕೈಗಲಿಗಳು ಹಲವರಿದ್ದು ಕಾದಿದರು; ನೀನು ಒಂದೆ ಪ್ಕೈಯಲ್ಲಿ ಹಲವರನ್ನು ಪೂರ್ಣವಾಗಿ ಕೊಂದೆ. ನಿನ್ನನ್ನು ಹೆತ್ತವಳು ಮೊಲೆಯನ್ನು ಪಡೆದವಳೆ? ವೀರಜನನಿಯೆಂಬ ಹೆಸರನ್ನು ಪಡೆದವಳು! . . . ಅಸಮಬಲ, ನಿನ್ನ ವಿಕ್ರಮವು ಇತರರಿಗೆ ಅಸಂಭವ. ನಿನ್ನನ್ನು ನಾನು ಇಷ್ಟು ಪ್ರಾರ್ಥಿಸುವೆ, ಅಭಿಮನ್ಯು. ನಿನ್ನ ಸಾಹಸದ ಏಕದೇಶಕ್ಕೆ ಅನುಸಾರವಾದ ಮರಣವು ನಮಗೆ ಆಗಲಿ!"

ಎಂದು ತನ್ನ ಒಳಗೇ ಚಿಂತಿಸಿ, ಅಭಿಮನ್ಯುಕುಮಾರನ ಸಾಹಸಕ್ಕೆ ಮೆಚ್ಚಿ, "ಈತನೇ ಸಾಹಸಧನನು" ಎಂದು ಅಂದು ಅಭಿಮನ್ಯುವಿಗೆ ಕೌರವೇಶ್ವರನು ಕೈಮುಗಿದನು.

ಹಾಗೆ ಅಭಿಮನ್ಯುವಿಗೆ ಕೈಗಳನ್ನು ಮುಗಿದು ಬರುತ್ತಾ ತನ್ನ ಮಗನಾದ ಲಕ್ಷಣಕುಮಾರನನ್ನು ನೆನೆದು, ದುಃಖದಿಂದ ಕಂಠ ಬಿಗಿದು, ಅಲ್ಲಿಗೆ ಹತ್ತಿರದ ಪ್ರದೇಶದಲ್ಲಿ ತನ್ನ ಕುಮಾರನನ್ನು ಕಂಡು; ಆ ಕುಮಾರನನ್ನು ಕಾಣಲೊಡನೆ ಕೈಯಿಂದ ಬಾಣ ಜಾರಿತು, ಹೃದಯದಿಂದ ರಣೋತ್ಸಾಹ ಜಾರಿತು, ಕಣ್ಣಿನಿಂದ ಕಣ್ಣೀರು ಜಾರಿತು. ಹಾಗೆ ಪುತ್ರಸ್ನೇಹದಿಂದ ಕಾತರಹೃದಯನಾಗಿ ಗಾಂಧಾರಿಯ ಮಗನು ಭಾನುಮತಿಯ ಮಗನ ವದನಾರವಿಂದವನ್ನು ನೋಡಿ—"ತಂದೆಗೆ ಮಗನು ಜಲಾಂಜಲಿಯನ್ನು ಕೊಡುವುದು ಉಚಿತ. ಅದು ಕೆಟ್ಟು, ಈಗ ನಾನು ನಿನಗೆ ಕೊಡುವ ಹಾಗಾಯಿತೆ! ಮಗನೇ, ನೀನು ಕ್ರಮವಿಪರ್ಯಯ ಮಾಡಬಹುದೇ!" ಎಂದು ಅಲ್ಲಿ ನಿಲ್ಲಲಾರದೆ, ಆ ಪ್ರದೇಶದಿಂದ ನಡೆದು—

"ವೃಷಸೇನನೆಲ್ಲಿ?" ಎಂದು ಹುಡುಕುತ್ತಾ ಬರಲಾಗಿ; ಧರ್ಮಪುತ್ರನ ಕೋಪಾನಲನಿಂದ ದಹಿಸಿಹೋಗಿದ್ದ ಶಲ್ಯನನ್ನೂ ವಿಜಯನ ಶರದಿಂದ ಉರುಳಿದ್ದ ಭಗದತ್ತನನ್ನೂ ಗಾಂಡಿವಿಯ ಪ್ರಚಂಡ ಕೋದಂಡದಿಂದ ಶರಶಯನನಾಗಿದ್ದ ಸಿಂಧುರಾಜನನ್ನೂ ಸಹದೇವನ ಖಡ್ಗದಿಂದ ಉಗ್ರವಾದ ಹಸ್ತವು ಧ್ವಂಸಮಾಡಿದ ಶಕುನಿಯನ್ನೂ ನಕುಲನ ಕುಂತಕ್ಕೆ ಕವಳವಾದ ಶರೀರವುಳ್ಳ ಶತಬಿಂದುವಿನ ಐವರು ಮಕ್ಕಳನ್ನೂ ನಿವಾತಕವಚ ತಳತಳೂಕ ಪೌಲೋಮ ಮೊದಲಾದ ಮಹಾಸಮರ್ಥರೆನ್ನಿಸುವ ದೈತ್ಯಾವತಾರರನ್ನೂ ಕಾಮರೂಪದೇಶಾಧೀಶ್ವರರನ್ನೂ ಆರುಸಾವಿರಕೋಟಿ ಅತಿರಥರನ್ನೂ ಹದಿನೆಂಟುಕೋಟಿ ಸಮರಥರನ್ನೂ ಸಂಶಪ್ತಕರೆಂಬ ಹೆಸರುಳ್ಳವರು ಎನ್ನಿಸಿದ ಸುಶರ್ಮ ತ್ರಿಗರ್ತ ಅಧೀಶ್ವರರನ್ನೂ ಬಕಾಸುರನ ಮೊಮ್ಮಗನಾದ ಜಟಾಸುರನ ಮಕ್ಕಳಾದ ಹಲಾಯುಧ ಮುಸಲಾಯುಧ ಕಾಲ ನೀಲ ರೂಕ್ಷ ರಾಕ್ಷಸರನ್ನೂ ಕಾಂಭೋಜ ಸುದಕ್ಷಿಣ ದಂಡಧರರೆನಿಸುವ ಶಂಖಾಯುಧರನ್ನೂ ಸೌಬಲ ಬೃಹದ್ಬಲ ವಿಂದಾನುವಿಂದ ಮೊದಲಾದವರನ್ನೂ ಕಂಡು ಶೋಕದಿಂದ ಕದಡಿ

ಹೋದ ಚಿತ್ತವುಳ್ಳವನಾಗಿ—"ಗಣಿಸಿದರೆ ತ್ರಿಲೋಕ ಚೂಡಾಮಣಿಗಳು, ಕೈಲಾಸಶೈಲದಂತಹ ಸುಭಟಾಗ್ರಣಿಗಳು! ನೆರೆದು, ನನ್ನ ಕಾರಣದಿಂದ ಈ ನೃಪಸುತರುಗಳು ನಾಶವಾದರೇ!" ಎಂದು ಪಶ್ಚಾತ್ತಾಪಗೆಯ್ಯಲು—

ಸಂಜಯನು ಸಂತೈಸಿ, "ನಯವನ್ನು ಕೇಳುವುದಾದರೆ, ಸಂಧಿ ಮಾಡು. ಕೌಂತೇಯರಲ್ಲಿ ಇರಿಯಬೇಡ. ಯುದ್ಧವು ಅಕ್ಷಯವಾದ ದೋಷಕ್ಕೆ ಮನೆ. ಪ್ರಧಾನಪುರುಷರು ಕ್ಷತ್ರಿಯರು ಕ್ಷಯವಾಗುವ ಸ್ಥಾನ ಎಂದು ಯಥಾರ್ಥವನ್ನು ನುಡಿದು ಆರದೆಹೋದರು. ಮೊದಲಲ್ಲಿ ನಿನ್ನನ್ನು ಹಿಡಿಂಬಾಂತಕನು ಲಯಕಾಲದ ಅಂತಕನಂತೆ ಕೊಲ್ಲದೆ ಇರನು" ಎನ್ನಲಾಗಿ—

ಅದನ್ನು ಕಿವಿಗೆ ಹಾಕಿಕೊಳ್ಳದೆ, ಭೀಮಸೇನನ ಗದಾಪರಿಘದ ಪ್ರಹರಣದಿಂದ ರಕ್ತಪ್ರವಾಹಕ್ಕೆ ವಶಗತನಾಗಿದ್ದ ಯುವರಾಜನು ಇದ್ದ ಎಡೆಯನ್ನು ಕುರುರಾಜನು ಸಮೀಪಿಸಿದಾಗ—

"ದೇವ, ಇದು ಭೀಮನು ಕಾಳಿಂಗನ ಗಜಘಟೆಯನ್ನು ಕೊಂದ ಸ್ಥಾನ! ದೇವ, ಇದು ಭೀಮನು ಮುನ್ನುಗ್ಗಿ ಕೌರವ್ಯರು ಅಷ್ಟರನ್ನೂ ತಿಂದ ಸ್ಥಾನ! ದೇವ, ಇದು ಮುಖವನ್ನು ಹೊಗಿಸಿ ಭೀಮನು ದುಶ್ಶಾಸನನ ರಕ್ತವನ್ನು ಹೀರಿದ ಸ್ಥಾನ! ದೇವ, ಇದು ಛಲಪಟ್ಟು ಭೀಮನು ಭೂಮಿಸುತನ ಆನೆಯೊಡನೆ ಆನೆಯು ಹೋರುವಂತೆ ಹೋರಿದ ಸ್ಥಾನ! . . . ದುಶ್ಶಾಸನನನ್ನು ದೂಳಿನಲ್ಲಿ ಹೊರಳಿಸಿಯೂ ಮೈಯ ಮಾಂಸವನ್ನು ಕಿತ್ತು ಕಿತ್ತು ತಿಂದೂ ರಕ್ತವನ್ನು ಮೊಗೆದು ಕುಡಿದೂ ಹಿಡಿಂಬರಿಪು ತೃಪ್ತನಾಗಲಿಲ್ಲ!" ಎಂದು ಸಂಜಯನು ಹೇಳಲು—

ಕೆಳಗಿವಿ ಕೇಳಿ ಸ್ವಲ್ಪದೂರ ಹೋಗಲು; ತನ್ನ ತಮ್ಮನ ಕಣ್ಣನ್ನು ಕುಕ್ಕುವ ಕಾಗೆಗಳನ್ನೂ ಕರುಳ ಜಡೆಯನ್ನು ತೆಗೆಯುವ ಹದ್ದುಗಳನ್ನೂ ಪಕ್ಕದ ಸುತ್ತಿಗೆ ಬಂದು ಕಾಡುವ ಗುಳ್ಳೆನರಿಗಳನ್ನೂ ನರವನ್ನು ಕೀಳುವ ನರಿಗಳನ್ನೂ ಸೆರೆಯನ್ನು ಎಳೆಯುವ ಸೀಳ್ನಾಯ್ಗಳನ್ನೂ ಕೊರಲನ್ನು ಹತ್ತಿ ಮುರಿಯುವ ತೋಳಗಳನ್ನೂ ದೂಳಿನಲ್ಲಿ ಹೊರಳಿಸುವ ಹುಲುಮರುಳುಗಳನ್ನೂ ಬೆನ್ನೆಲುವನ್ನು ಕೀಳುವ ಬೇತಾಳರನ್ನೂ ಕತ್ತಿ

ಯನ್ನು ಕೊಂಡು ಕಪಾಲವನ್ನು ಕಡಿಯುವ ಕಾಳರಾಕ್ಷಸಿಯರನ್ನೂ ಹುಣ್ಣಿನ ಬಾಯಲ್ಲಿ ತಮ್ಮ ಬಾಯನ್ನು ಇಟ್ಟು ಭೀಮನು ಕುಡಿದು ಉಳಿದ ರಕ್ತವನ್ನು ಕುಡಿಯಲು ಎದೆ ದಡಬಡಿಸುತ್ತಾ ಹುಯ್ಯಲಿಡುವ ಪಿಶಾಚಿಗಳನ್ನೂ ಕಂಡು, ತಾನೆ ಓಡಿಸಿ ಕಳೆದು, ಸೋದರಸ್ನೇಹವು ಮಿಕ್ಕುಮೀರಲು, ದುಃಖವನ್ನು ಸೈರಿಸಲಾರದೆ ಹಲುಬಿ, "ನಿನ್ನ ಜೀವವು ಪರಲೋಕದಲ್ಲಿ, ನಿನ್ನ ಮಹಾಮಾಂಸವು ಪಿಶಾಚದ ಮುಖದಲ್ಲಿ, ನಿನ್ನ ರಕ್ತ ಶತ್ರುವಿನ ಹೊಟ್ಟೆಯಲ್ಲಿ, ನಿನ್ನ ತಲೆ ನಿಶಾಚರಿಯ ಕೈಯಲ್ಲಿ, ನಿನ್ನ ದೇಹ ಕುರುಭೂಮಿಯಲ್ಲಿ ನೆಲಸಲು, ಗಾಂಧಾರಿಯ ಮಗನಾದ ದುಶ್ಶಾಸನ, ಓ ದುರ್ಯೋಧನನ ತಮ್ಮ, ಭೀಮನ ಭೀಮಗದೆಯಿಂದ ಪಂಚತ್ವವನ್ನು ಹೊಂದಿದೆ" ಎಂದು ಅತಿಯಾಗಿ ಪ್ರಲಾಪಿಸಿ, "ನಿನ್ನನ್ನು ಕೊಂದವನು ಇನ್ನೂ ಬದುಕಿರುವನಲ್ಲಾ! ಕೊಂದವನನ್ನು ಹಿಡಿದು ಕೊಲ್ಲದೆ ಬಿಟ್ಟು ನಾನು ಇನ್ನೂ ಇರುವೆನಲ್ಲಾ! ನಿನ್ನ ಪ್ರೀತಿಗೂ ನನ್ನ ಸ್ನೇಹಕ್ಕೂ ಇದೆ ಸಾಲದೆ! . . . ತಾಯ ಸ್ತನ್ಯವನ್ನು ನಾನು ಕುಡಿದೆ, ಬಳಿಕ ನೀನು. ಸೋಮಾಮೃತ ದಿವ್ಯಭೋಜನ ಎಂಬ ಇಂಥವನ್ನು ನಾನು ಉಂಡೆ, ಬಳಿಕ ನೀನು. ಬಾಲತನದಿಂದ ಎಲ್ಲಿಯೂ ವಿನಯದ ಉಲ್ಲಂಘನವಾದುದಿಲ್ಲ. ಮರಣಕ್ಕೆ ನನಗಿಂತ ನೀನು ಮೊದಲಾದೆ. ಹಾ ವತ್ಸ ದುಶ್ಶಾಸನಾ, ಈ ಒಂದೆಡೆಯಲ್ಲಿ ಯುದ್ಧದಲ್ಲಿ ಸರದಿ ತಡವಾಯಿತು" ಎಂದು ಕುರುಕುಲಪ್ರದೀಪನು ವಿಶೇಷವಾಗಿ ಪ್ರಲಾಪಿಸಿ, "ತಮ್ಮನ ರಕ್ತವನ್ನು ಕುಡಿದವನ ರಕ್ತವನ್ನು ಜೀವಸಹಿತವಾಗಿ ಕುಡಿಯದೆ, ದುರ್ಯೋಧನನೆಂಬ ಹೆಸರಿಗೆ ಹೆಗಲು ಕೊಡುವೆನೆ! ದುಶ್ಶಾಸನನ ಭಂಗವನ್ನು ನೀಗುವೆನೇ!" ಎಂದು ಪಿಂಗಾಕ್ಷನು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ, ತನ್ನ ತಮ್ಮನ ಕಳೇಬರವನ್ನು ನೋಡಲಾರದೆ, ಅಲ್ಲಿಂದ ಹೊರಟು—

ಆನೆ ಕುದುರೆ ಮನುಷ್ಯರುಗಳ ಕಳೇಬರಗಳಿಂದ ಕರಾಳವಾದ ರಣರಂಗದಲ್ಲಿ ಬರುಬರುತ್ತಾ, ಅರ್ಜುನನ ಕೈಯಿಂದ ಬಿಡಲ್ಪಟ್ಟ ಶರಗಳಿಂದ ಜರ್ಜರಿತವಾದ ಅಂಗವುಳ್ಳ ಅಂಗರಾಜನನ್ನು ಕುರುರಾಜನು ಕಂಡನು.

ಆಗ ಅದನ್ನು ಸಂಜಯನು ಕಂಡು, "'ಕುರುವಿನ ಮೇಲೆ ಬೊಕ್ಕೆ' ಎಂಬಂತೆ ತನ್ನ ಪ್ರೀತಿಯ ಮಕ್ಕಳ, ತಮ್ಮಂದಿರ ಶೋಕದಿಂದ ವಿಹ್ವಲನಾದ ಭೂತಲೇಶ್ವರನಿಗೆ ತನ್ನ ಪ್ರಿಯಸಖನಾದ ಕರ್ಣನ ದರ್ಶನದಿಂದ ದುಃಖವು ಮರುಕೊಳಿಸುವುದು" ಎಂದು ಮನಸ್ಸಿನಲ್ಲಿ ಬಗೆದಿರಲು—

ಭೂಮಿಯು ನುಂಗಿದ ರಥವನ್ನು ಮೇಲೆತ್ತಿ, ಸಮಪಾದದ ಆಸನವು ಬಗೆಗೊಳಲು, ತನ್ನ ಮುಂದೆ ತೆಗೆದ ದಕ್ಷಿಣಮುಷ್ಟಿಯೆ ಕಿವಿಯ ಮೂಲದಲ್ಲಿ ಸೊಗಸಲು, ಋಣವನ್ನು ತೀರಿಸದೆ ಒಡೆಯನ ಕಾರ್ಯವನ್ನು ಬಿಸುಟು ಸತ್ತವರನ್ನು ಅಣಕಿಸುವ ಹಾಗೆ ತನ್ನ ಉನ್ನತವಾದ ಕೇತುದಂಡವನ್ನು ನೆಮ್ಮಿ ಅಂಗರಾಜನು ಇದ್ದನು.

ಹಾಗಿದ್ದ ದಿನಕರತನೂಜನನ್ನು ಕಣ್ಣೀರಿನ ಧಾರೆಯಿಂದ ತುಂಬಿದ ಕಣ್ಣುಳ್ಳ ರಾಜಾಧಿರಾಜನು ನೋಡಿ, ದುಃಖದಿಂದ ಗದ್ಗದಕಂಠನೂ ಸಹಿಸಲಾಗದ ಶೋಕಾನಲನಿಂದ ದಹಿಸಲ್ಪಟ್ಟ ಅಂತಃಕರಣವುಳ್ಳವನೂ ಆಗಿ—

"ನಾನೂ ದುಶ್ಶಾಸನನೂ ನೀನೂ ಮೂವರೇ ಅಲ್ಲವೇ! ಅತನೂ ಸತ್ತ ಬಳಿಕ ನಾನೂ ನೀನೇ ಅಲ್ಲವೆ! ಈಗ ನೀನೂ ಮತ್ತೆ ಎತ್ತ ಹೋದೆ ಅಂಗಾಧಿಪತೀ!... ನಿನ್ನ ಮಗನಾದ ವೃಷಸೇನನೂ ನನ್ನ ಮಗನಾದ ಲಕ್ಷಣನೂ ಹೋರಾಡಿ ಸತ್ತರು. ನೀನು ನನ್ನನ್ನು ಸಂತೈಸಬೇಕು. ನಾನು ನಿನ್ನನ್ನು ಸಂತೈಸಲು ಬಂದಿರುವೆ, ಅಂಗಾಧಿಪತೀ!... ನಿನ್ನ ಇಂದಿನ ರೀತಿಯನ್ನು ನಾನು ಅರಿಯೆ. ನೀನು ನನ್ನಲ್ಲಿ ಏಕೆ ಮುನಿದಿರುವೆಯೊ? ಅಥವಾ ಮರುಮಾತು ಕೊಡದೆ, ರವಿಸುತ, ಮರೆತು ಇರುವೆಯೊ? ಅಥವಾ ಬಳಲಿರುವೆಯೊ? . . . ನಿನ್ನ ಗೆಳೆಯನಾದ ಸುಯೋಧನನನ್ನು ನೋಡದೆ, ನುಡಿಯದೆ, ಅಪ್ಪಿಕೊಳ್ಳದೆ, ಆಜ್ಞೆಯೇನು ಎನ್ನದೆ, ಜೀಯ ಎನ್ನದೆ, ದೇವಾ ಎನ್ನದೆ, ಏಕೆ ಉಸಿರದಿರುವೆ, ಅಂಗಾಧಿಪತೀ!... ಸುಳ್ಳು ಲೋಭ, ಭಯ ಎಂಬ ಇಷ್ಟೂ ನೀನು ಇರುವ ನಾಡಲ್ಲಿ ಇರುವುವೆ? ರವಿನಂದನ, ಸತ್ಯ, ತ್ಯಾಗ, ಶೌರ್ಯ ಎಂಬ ಅಷ್ಟಕ್ಕೂ ನೀನೇ ಮೊತ್ತಮೊದಲಿಗನಾದೆ... ನಾನು ಬಲ್ಲೆ, ಕುಂತಿ ಬಲ್ಲಳು, ದಾನವರಿಪು ಬಲ್ಲ, ಸೂರ್ಯ ಬಲ್ಲ, ದಿವ್ಯಜ್ಞಾನಿ ಸಹದೇವ ಬಲ್ಲ. ನೀನು ಯಾರಿಗೆ ಎಂದು ಯಾರೂ

ಅರಿಯರು, ಅಂಗಾಧಿಪತೀ!...ಒಡಹುಟ್ಟಿದವನೆಂದು ತಿಳಿದರೆ ಧರ್ಮ ತನಯನು ರಾಜ್ಯವನ್ನೇ ಕೊಡುವನು. ರಾಜ್ಯಕ್ಕೆ ಒಡೆಯನಾದವನನ್ನು ತಿಳಿದೂ ಸುಮ್ಮನಿದ್ದೆ. ನಿನಗೆ ರಾಜ್ಯವನ್ನು ಕೊಡಲಾರದೆ ಹೋದೆ, ಅಂಗಾಧಿಪತೀ!...ನೀನಿದ್ದರೆ ರಾಜ್ಯವುಂಟು, ನೀನಿದ್ದರೆ ಪಟ್ಟವುಂಟು, ಬಿಳಿಯ ಕೊಡೆಯುಂಟು. ನೀನು ಇದ್ದರೆ ಪೀಳಿಗೆಯುಂಟು. ನೀನಿಲ್ಲದೆ ಇವೆಲ್ಲ ಉಂಟೇ, ಅಂಗಾಧಿಪತೀ!...ಇನಸುತ, ಅಂದಿನ ಗೋಗ್ರಹಣ ದಲ್ಲಿ ಗಾಂಡಿವಿಯು ಸಮ್ಮೋಹನಾಸ್ತ್ರದಿಂದ ಹೊಡೆದು ನಿದ್ರೆಯನ್ನುಂಟು ಮಾಡಿದನು. ಈಗ ನಿನಗೆ ಹೀಗೆ ದೀರ್ಘನಿದ್ರೆಯನ್ನು ಮಾಡಿದನೇ!... ಚಿನ್ನವನ್ನು ದ್ವಿಜರ ದಾನದಲ್ಲಿಯೂ ಹೊಸ ಯೌವನವನ್ನು ಸ್ವಪತ್ನಿಯ ಸಂತೋಷದಲ್ಲಿಯೂ ನಿನ್ನ ಜೀವವನ್ನು ಒಡೆಯನ ಕಾರ್ಯದಲ್ಲಿಯೂ ಕಳೆದೆಯಲ್ಲಾ! ನಿನ್ನಂತಹವನು ಯಾವನು, ಅಂಗಾಧಿಪತೀ!.... ಇಂದ್ರನು ಕವಚವನ್ನು ಬೇಡಿದರೆ, ನೀನು ಇರದೆ ಕೊಟ್ಟೆ. ಕುಂತಿ ಬೇಡಿದರೆ, ಬೆದರದೆ ಹುರಿಗಣೆಯನ್ನು ಕೊಟ್ಟೆ. ದಾನದಲ್ಲಿಯೂ ವೀರ ದಲ್ಲಿಯೂ ನಿನಗೆ ಸಮನಾದ ಕಲಿಯಾವನು ಅಂಗಾಧಿಪತೀ!...ಕಣ್ಣಿ ನಲ್ಲೂ ಎದೆಯಲ್ಲೂ ನಿನ್ನ ರೂಪು ಇದೆ, ನಿನ್ನಮಾತು ನನ್ನ ಕಿವಿಯೊಳಗೆ ಇದೆ. ಇನನಂದನ, ವಿಯೋಗ ಹೇಗಾಯಿತೆಂದು ಅರಿಯೆ, ಅಂಗಾಧಿ ಪತೀ!... ನಿನ್ನನ್ನು ಕೊಂದ ಕಿರೀಟಿಯೂ ನನ್ನ ತಮ್ಮನನ್ನು ಇಕ್ಕಿ ಕೊಂದ ಭೀಮನೂ ಇನ್ನೂ ಇದ್ದಾರೆ. ನಾನೂ ಇನ್ನೂ ಇದ್ದೇನೆ. ನಿನ್ನ ಪ್ರೇಮಕ್ಕೂ ನನ್ನ ಸಜ್ಜನಿಕೆಗೂ ಇದೇ ಸಾಲದೆ!... ಪರಶುಧರ, ಚಕ್ರ ಧರ, ಸುರಪತಿ, ಭೂಕಾಂತೆ, ಕುಂತಿ ಎಂದು ಈ ಹೇಳಿದ ಐವರೇ ಕೂಡಿ ನಿನ್ನನ್ನು ಕೊಂದರು. ನರನು ಒಬ್ಬನೇ ಕೊಂದವನಲ್ಲ, ಅಂಗಾಧಿ ಪತೀ!... ಇಂದು ನಾನಾದೆ; ಮತ್ತು, ಕೇಳು ಇನನಂದನ, ಪಾಂಡು ತನಯರಾದರು! ನಿನ್ನನ್ನು ಕೊಂದೂ ದುಶ್ಶಾಸನನನ್ನು ಕೊಂದೂ ಬದುಕುವವನು ಅದಾವನು, ಅಂಗಾಧಿಪತೀ!" ಎಂದು ಅನೇಕ ಪ್ರಕಾರ ದಿಂದ ವಿಪ್ರಲಾಪಮಾಡಿ, "ಸೂರ್ಯಪುತ್ರನ ಸ್ಥಿತಿಯನ್ನೂ ದುಶ್ಶಾಸನನ ಸ್ಥಿತಿಯನ್ನೂ ಕಂಡು ಇನ್ನೂ ನನ್ನ ಜೀವವಿದು ನೆಟ್ಟನೆ ಹೋಗಲಿಲ್ಲ. ನನ್ನ ಹಾಗೆ ಕಲ್ಲೆದೆತನದಿಂದ ಬದುಕಿದವನು ಯಾವನಾದರೂ ಇರು

ವನೇ!" ಎಂದು ತನ್ನನ್ನು ತಾನೆ ನಿಂದಿಸಿಕೊಂಡು. "ಮಕ್ಕಳ ನಾಶವನ್ನೂ ಪ್ರಿಯರಾದ ಸ್ನೇಹಿತರ ತಮ್ಮಂದಿರ ನಾಶವನ್ನೂ, ವಿಧಾತ್ರಾ, ನೀನು ಕಾಣಿಸಿ, ಪಾಪಕರ್ಮನೂ ನಿರ್ಗುಣನೂ ಆದ ನನಗೆ ಇನ್ನೇನನ್ನು ಕಾಣಿಸಬೇಕೆಂದಿರುವೆ!" ಎಂದು ವಿಧಾತ್ರನಿಗೆ ಹಲುಬಿ, ರಾಧಾನಂದನನ ಮುಖವನ್ನು ನೋಡಿ, ಸಂಜಯನನ್ನು ಕುರಿತು ಇಂತೆಂದನು: "ಯಾರೊಡನೆ ಮಾತನಾಡಲಿ? ಪ್ರೀತಿಯಿಂದ ಯಾರೊಡನೆ ಓಲಗದಲ್ಲಿರಲಿ? ಯಾರೊಡನೆ ಕೂಡಿಕೊಂಡು ಊಟಮಾಡಲಿ? ನನಗೆ ಪ್ರಿಯರಾದವರಿಲ್ಲದೆ ಯಾರೊಡನೆ ಆನೆ ಕುದುರೆಗಳನ್ನು ಏರಲಿ? . . . ಗೆಳೆಯನಿಗೆ ಜೀವ ಮುಕ್ತಿ ಹೊಂದಿತು, ನನಗಾದರೋ ಕಣ್ಣೀರಿನಿಂದ ಮುಕ್ತಿಯಾಗದು. ಇವನು ಧರಾತಳವನ್ನು ಕೊಟ್ಟನು, ನಾನು ಜಲಾಂಜಲಿಯನ್ನು ಕೊಡಲಿಲ್ಲ. ಅನ್ಯಮಂಡಲವನ್ನು ಇವನು ಪ್ರತಾಪವೆಂಬ ಬೆಂಕಿಯಿಂದ ಸುಟ್ಟನು, ನಾನು ಈತನನ್ನು ಸತ್ಕ್ರಿಯೆಯ ಬೆಂಕಿಯಿಂದ ಸುಡಲೂ ಇಲ್ಲ. ನನಗೆ ಪ್ರಿಯತಮನಾದ ಕರ್ಣನಿಗೆ ಇದೇನು ಪ್ರೀತಿಯನ್ನು ತೋರಿಸಿದೆನೋ!" ಎನ್ನಲಾಗಿ—

"ದೇವಾ, ನೀವು ಹೀಗೇಕೆ ಪ್ರಲಾಪಿಸುವಿರಿ?" ಎಂದು ಸಂಜಯನು ಇಂತೆಂದನು: "ವಾಗ್ಜಲದಿಂದ ಜಲದಾನಕ್ರಿಯೆಯನ್ನೂ ಕೋಪಾಗ್ನಿಯಿಂದ ದಹನಕ್ರಿಯೆಯನ್ನೂ ಗೆಳೆಯನಿಗೆ ಮಾಡಿದೆ. ಓ ಕುರುಕುಲದರ್ಪಣ, ಇನ್ನು ದಿನಪತಿಸುತನನ್ನು ಮರೆಯುವುದು . . . ಹೆಣ್ಣುಗಳು ಪ್ರಲಾಪಿಸುವ ಹಾಗೆ ಗಂಡುಗಳು ಪ್ರಲಾಪಿಸುವುದು ತಕ್ಕದ್ದೇ? ಛಲವನ್ನು ಕೈಕೊಂಡು ಕೆಲಸ ಮಾಡುವವರಾರು? ಕುರುಕುಲಮಂಡನ, ನೀನು ಎತ್ತಿಕೊಂಡ ಛಲವನ್ನೇ ನಡೆಸಿತೋರು."

ಎಂದು ಸಂಜಯನು ನುಡಿದ ನುಡಿಯನ್ನು ಅವಧಾರಿಸಿ, "ಸ್ವಲ್ಪವಾದ ಹಾಸದಿಂದ ಸುಂದರನಾದ, ದಿಗ್ಗಜದಂತೆ ಗಮನವುಳ್ಳವನಾದ, ಕನಕಪರ್ವತದಂತೆ ಎತ್ತರವಾದ ದಿನೇಶ್ವರಸುತನ ರೂಪು ಚಿತ್ರ ಬರೆದ ಹಾಗೆ ನನ್ನ ಚಿತ್ತವೆಂಬ ಗೋಡೆಯಲ್ಲಿ ಇರುವುದು . . . ದೀಕ್ಷಾವಿಧಿಗಳಿಗೆ ಗುರು, ಹಿತಕಾರ್ಯಾಲೋಚನಕ್ಕೆ ಮಂತ್ರಿ, ಭೂಮಿಯನ್ನು ಕಾಪಾಡುವ ಗುಣಕ್ಕೆ ಅರಸ, ಕ್ರೀಡಾರಸಕ್ಕೆ ನರ್ಮಸಚಿವ, ಗುರುಭಾರಕ್ಕೆ ಆನೆ

ಯಂತಹ ಆಳು, ರಣಕ್ಕೆ ಯೋಧ, ಕಟ್ಟಾಯದಲ್ಲಿ ವೀರ, ಪರಿಹಾಸಕ್ಕೆ ಮೇಳದಾಳು—ಎನ್ನಿಸಿದ್ದ ಕರ್ಣನನ್ನು ದುರ್ಯೋಧನನು ಹೇಗೆ ಮರೆಯುವನು!" ಎಂದು ಶೋಕದಿಂದ ಕುರುಡಾದವನು ಕರ್ಣನನ್ನು ಅಗಲಿದವನಾದುದರಿಂದ ಇಂದ್ರನ ಮಗನಿಗೆ ಮುನಿದು, "ಸೂರ್ಯನ ಮಗನನ್ನು ನೆನೆದ ಆ ಸ್ಮರಣದಿಂದ ಉಕ್ಕಿದ ನನ್ನ ಶೋಕಮಹಾಸಾಗರವನ್ನು ಭೀಕರವಾದ ನನ್ನ ಕೋಪಾಗ್ನಿಯು ಬಡಬಾಗ್ನಿಯ ಹಾಗೆ ಪೂರ್ಣವಾಗಿ ಹೀರಿಬಿಟ್ಟಿತು" ಎಂದು ಕ್ರೋಧರಸವನ್ನು ಶೋಕರಸದ ಮೇಲಿಟ್ಟು ಎದುರುಪಡೆ ಏತರುವುದನ್ನು ನೋಡಿ ನಡೆಯುವ ಪನ್ನಗಪತಾಕನ ಜಯದ ಮುನಿಸಿನ ರೀತಿಯನ್ನು ತಿಳಿದು ಸಂಜಯನು ಹೇಳಿದನು:

"ದೇವಾ, ಭೀಷ್ಮರು ಇತ್ತ ಇದ್ದಾರೆ. ಇತ್ತ ಬಿಜಯಮಾಡಿರಿ! ನಿಮ್ಮ ಗುರುಜನರ ಪ್ರಾರ್ಥನೆಯನ್ನು ಭಂಗಮಾಡಲಾಗದು. ಇನ್ನು ನೀವು ನಡಸುವ ಕಾರ್ಯವಾವುದನ್ನೂ ನಿಮ್ಮ ಅಜ್ಜನೊಡನೆ ಆಲೋಚಿಸಿ ನಡಸುವುದು" ಎಂದು ಹೇಳಿದನು.

ಭೀಷ್ಮರ ಉಪದೇಶ

ಆಗ, ತನ್ನ ಗುರುಜನರ ಪ್ರಾರ್ಥನೆಯನ್ನು ಭಂಗಮಾಡದೆ, ಸಂಜಯನ ಮಾತನ್ನು ನೀಗದೆ, ಶರಶಯನಗತನಾಗಿದ್ದ ನದೀನಂದನನ ಚರಣಾರವಿಂದಕ್ಕೆ ವಂದನೆ ಮಾಡಲೆಂದು ಗಾಂಧಾರಿಯ ಮಗನು ಹತ್ತಿರ ಬಂದು, ಗಂಗಾನದೀನಂದನನನ್ನು ಕಂಡನು.

ಅರ್ಜುನನ ಶರಕೋಟಿಯು ತನ್ನ ಶರೀರವನ್ನು ಜರ್ಜರಿಸಲು, ಅಸ್ತ್ರಗಳ ವೇದನೆಗೆ ಪರವಶನಾಗಿಯೂ ಮುಕುಂದನನ್ನು ಮರೆಯಲಿಲ್ಲ; ಏಕಚಿತ್ತದಿಂದ ಸ್ಮರಿಸುತ್ತಿದ್ದನು. ಇತ್ತ 'ಕುರುಭೂಪತಿಗೆ, ಕುರುಪತಿಗೆ ಈಗ ಹೀಗಾಯಿತೆ!' ಎಂದನು. ಆ ಪರಮಯೋಗಿಗೂ ಇಷ್ಟು ಮೋಹವಾಗದೇ!

ಹಾಗೆ ಶರಶಯನದಲ್ಲಿದ್ದ ನದೀನಂದನನನ್ನು ಕಂಡು ರಾಜರಾಜನು ದುಃಖದಿಂದ ಗದ್ಗದಕಂಠನಾಗಿ, "ವಿನಯವನ್ನು ಬಿಟ್ಟು, ನೀವು ಗುರುವೃದ್ಧರು ಹೇಳಿದ ಹಿತೋಪದೇಶವನ್ನು ಮನಸ್ಸಿನಲ್ಲಿ ಕೀಳಾಗಿ ಕಂಡು, ವಾಯುಪುತ್ರನ ವೈರದಿಂದ ನಿಮ್ಮನ್ನು ಇಂದ್ರನ ಮಗನೊಡನೆ ನಾನೆ ಕಾದಿಸಿದೆ, ನಾನೆ ಉತ್ಸಾಹಿಸಿದೆ. ಪಾಪಕರ್ಮನಾದ ನನ್ನ ಕಾರಣದಿಂದ ಈ ನಿಮಗೂ ಈ ಸ್ಥಿತಿಯಾಯಿತೇ, ಸಿಂಧುನಂದನಾ!"

ಎಂದು ಪಶ್ಚಾತ್ತಾಪಪಡುತ್ತ ಮುಂದೆಬರುವ ತನ್ನ ಮೊಮ್ಮಗನ ಕಾಲ ಸಪ್ಪುಳವನ್ನು ಕೇಳಿ, ಅರಳಿದ ಬಿಳಿಯ ಕುವಲಯಗಳ ವಿಲಾಸವನ್ನು ಒಳಕೊಂಡಿರುವವುಗಳೂ ಕಿವಿಯ ಕೊನೆಗೆ ಹೋಗಿ ನಿಂತವುಗಳೂ ಆದ ತನ್ನ ಕಣ್ಣುಗಳನ್ನು ಅರ್ಧ ತೆರೆದು, ಸ್ವಲ್ಪ ತೆರೆದ ಕಣ್ಣುಗಳೆಂಬ ಕಮಲಾಕರವಿದ್ದಂತೆ ಇದ್ದ ಶಂತನುತನೂಜನ ಕಿವಿಯ ಸಮೀಪಕ್ಕೆ ಬಂದು ಸಂಜಯನೆಂದನು: "ಅಜ್ಜಾ, ನಿಮ್ಮ ಮೊಮ್ಮಗನಾದ, ಕುರುಕುಲವೆಂಬ ಗಗನಕ್ಕೆ ಸೂರ್ಯನಾದ, ಬಾಹುಶಾಲಿ ದುರ್ಯೋಧನನು ಬಂದನು" ಎಂದು ವಿಜ್ಞಾಪಿಸಲು, ಯೋಗಿಯು ಯೋಗಾಭಿಯೋಗವನ್ನು ಉಪಸಂಹರಿಸಿ, ತನ್ನ ಕಾಲುಗಳ ಬಳಿ ತಲೆಯಿಟ್ಟಿದ್ದ ಪನ್ನಗಪತಾಕನಾದ ಕುರುಕುಲೋತ್ತಂಸನನ್ನು ಪರಮಾನಂದದಿಂದ ಭೀಷ್ಮರು

ಆಶೀರ್ವಚನ ಸಹಸ್ರಗಳಿಂದ ಹರಸಿ, ದಿಕ್ಕರಿಗಳ ಕರಗಳನ್ನು ಅನುಕರಿಸುವಂತಹ ತಮ್ಮ ಭುಜಾದಂಡಗಳಿಂದ ತೆಗೆದು ಅಪ್ಪಿ, ಕಣ್ಣೀರು ತುಂಬಿದ ಕಣ್ಣುಗಳುಳ್ಳವನಾಗಿ—

"ಬಿಳಿಯಗಜೇಂದ್ರವೂ ಬಿಳಿಯಚಾಮರವೂ ಬಿಳಿಯಕೊಡೆಯೂ ಬಿಳಿಯ ಉತ್ಪಲದಂತಹ ಕಣ್ಣಿನ ವಧೂಜನವೂ ಕೂಡಿಕೊಂಡು ಕೀರ್ತಿಯಿಂದ ಎಂಟು ದಿಕ್ತಟಗಳು ಬಿಳುಪಾಗುತ್ತಿರಲು, ಶುಭ್ರವಾದ ಮಂಗಳ ಗೇಯದಿಂದ ಒಪ್ಪಿ ಬರುವ ಕೌರವಧವಳನಿಗೆ ದಿಕ್ಕಿಲ್ಲದವನು ಬರುವ ಹಾಗೆ ಒಬ್ಬನೇ ಬರುವುದಾಯಿತೇ!" ಎಂದು ಏಕಾಕಿಯಾಗಿ ಬಂದ ಧೃತರಾಷ್ಟ್ರನ ಮಗನ ಬರವಿನಲ್ಲಿ ನದೀಜನು ಸಮರವೃತ್ತಾಂತವನ್ನು ಅರಿತು, ವಿಸ್ಮಯದಿಂದ ಆಕ್ರಮಿಸಲ್ಪಟ್ಟ ಚಿತ್ತವುಳ್ಳವನಾಗಿ, "ಧವಳಚಾಮರವು ಎಲ್ಲಿರುವುದೊ? ಒಂದೇ ಕೊಡೆಯು ಎಲ್ಲಿರುವುದೋ! ಅಹಿಕೇತನ, ಮೃಗೇಂದ್ರಾಸನ ಎಲ್ಲಿರುವುದೊ? ಚಲಿಸುವ ವಂಶಧ್ವಜಗಳ ಗುಂಪು ಎಲ್ಲೊ? ಭಾನುಮತಿ ಎಲ್ಲಿದ್ದಾಳೆ? ಓಲಗದ ಸೂಳೆಯರುಗಳ ತಂಡ ಎಲ್ಲಿ? ಗೀತವಾದ್ಯಗಳೆಲ್ಲಿ? ಲಲಿತವಧೂಜನಗಳು ನಡಸುವ ನೃತ್ತಗಳೆಲ್ಲಿ? ನೂರುವರು ಮಕ್ಕಳೂ ನೂರುವರು ತಮ್ಮಂದಿರೂ ಎಲ್ಲಿ? ಮಗನೇ ಹೇಳು, ಚತುರಂಗಸೈನ್ಯವೂ ಅತಿರಥ ಸಮರಥ ಮಹಾರಥ ಅರ್ಧರಥರುಗಳೂ ಎಲ್ಲಿ?" ಎಂದು ಶೋಕಿಸಲಾಗಿ—

ರಾಜರಾಜನು ನದಿಯ ಮಗನನ್ನು ತಡೆದು, "ನೀವಾದರೆ ತಿಳಿದುದನ್ನೂ ತಿಳಿದವರೂ ಭಾವಿತಾತ್ಮರೂ ಆಗಿದ್ದ ಜ್ಞಾನಿಗಳು. ಹಾಗೆ ಮಾಡಲಾಗದು" ಎಂದು ತಾನು ಬಂದ ವೃತ್ತಾಂತವನ್ನೂ ಯುದ್ಧದ ಸಂದರ್ಭವನ್ನೂ ತಿಳಿಸಿದರೆ; ಸ್ವಲ್ಪ ಹೊತ್ತು ಚಿಂತಾಕ್ರಾಂತನಾಗಿದ್ದು—

"ಮಗನೆ, ಕಮಲನಾಭನ ನಾಭೀನಳಿನದಲ್ಲಿ ಸಂಭವಿಸಿದ ಹಿರಣ್ಯಗರ್ಭನ ಮನಸ್ಸಂಭವರಾದ ಸಪ್ತರ್ಷಿಯರೊಳಗೆ ಜಗತ್‌ಪವಿತ್ರನಾದ ಅತ್ರಿಯ ನೇತ್ರದಲ್ಲಿ ಹುಟ್ಟಿದ ಚಂದ್ರನಿಂದ ಚಂದ್ರವಂಶವಾಯಿತು. ಆ ಚಂದ್ರವಂಶದಲ್ಲಿ ಅನೇಕರು ಅರಸುಮಕ್ಕಳು ಆಗಿಹೋದರು. ಅವರಲ್ಲಿ ಸತ್ಯನೆಂಬವನಿಗೆ ಭರತನೆಂಬವನಾದನು. ಆತನಿಂದ ಬಳಿಕ ಭರತಾನ್ವಯವೆಂಬುದು ಆಯಿತು. ಆ ಭರತಕುಲದಲ್ಲಿ ಅಪ್ರತಿಮ ಪ್ರಬಲ

ಪ್ರತಾಪನೆಂಬವನು ಪ್ರದೀಪನು. ಆತನಿಗೆ ಹುಟ್ಟಿದ ಶಂತನುವೂ ಬಾಹ್ಲಿಕನೂ ವಿನುತನೂ ದೇವಾಪಿಯೂ ಎಂಬ ಈ ನಾಲ್ವರು ಮಕ್ಕಳಾದರು. ಅಲ್ಲಿ ಶಂತನುಗೂ ಗಂಗಾದೇವಿಗೂ ನಾನು ಹುಟ್ಟಿದೆ. ಚಿರಕಾಲದಿಂದ ತೊಡಗಿ ಹಿಡಿದ ಬ್ರಹ್ಮಚರ್ಯವ್ರತದಲ್ಲಿ ಪರಿಣತನಾದೆ. ನನ್ನ ತಂದೆಯಾದ ಶಂತನುಗೂ ಯೋಜನಗಂಧಿಯೆನಿಸಿದ ಸತ್ಯವತಿಗೂ ಚಿತ್ರಾಂಗದನು ವಿಚಿತ್ರವೀರ್ಯನು ಎಂಬ ಇಬ್ಬರು ಮಕ್ಕಳಾದರು. ಅವರು ಕಣ್ಮರೆಯಾದಾಗ ಸಂತತಿ ನಷ್ಟವಾಗಲು, ಕೃಷ್ಣದ್ವೈಪಾಯನರ ವರಪ್ರಸಾದದಿಂದ ಅಂಬಿಕೆಗೆ ಧೃತರಾಷ್ಟ್ರನೂ ಅಂಬಾಲಿಕೆಗೆ ಪಾಂಡುರಾಜನೂ ಅವರ ದಾಸಿಯಾದಾಕೆಗೆ ವಿದುರನೆಂಬವನೂ ಮೂವರು ಮಕ್ಕಳಾದರು. ಹೀಗೆ ಸೋಮವಂಶದಿಂದ ಅವಿಚ್ಛಿನ್ನವಾಗಿ ಬಂದ ಭರತಾನ್ವಯದಲ್ಲಿ ಇದುವರೆಗೂ ಗೋತ್ರಕಲಹವೆಂಬುದು ಆದುದಿಲ್ಲ. ನಿಮ್ಮಲ್ಲಿ ಆಯಿತು. ಇನ್ನು ನಾನು ಹೇಳುವುದನ್ನು ಒಪ್ಪುವುದಾದರೆ ಪಾಂಡವರನ್ನು ಒಡಂಬಡಿಸಿ ಸಂಧಿಯನ್ನು ಮಾಡಿ, ಪೂರ್ವಕ್ರಮದಲ್ಲಿ ನಡೆಯುವಂತೆ ಮಾಡುವೆನು. ಇದುವರೆಗೂ ಅವರು ನಾವು ಹೇಳಿದುದನ್ನು ಒಪ್ಪುವರಲ್ಲದೆ ಮೀರುವವರಲ್ಲ. ನೀನೂ ನಾವು ಹೇಳುವುದನ್ನು ಮೀರದೆ ನಡಸಬೇಕು" ಎನ್ನಲಾಗಿ—

ಸುಯೋಧನನು ಮುಗುಳ್ನಗೆ ನಕ್ಕು, "ನಿಮಗೆ ಅಡ್ಡಬಿದ್ದು ಹೋಗುವ ನಿಶ್ಚಯದಿಂದ ಬಂದೆ. ಅಹಿತರಲ್ಲಿ ಸಂಧಿಯನ್ನು ಏರ್ಪಡಿಸಲೆಂದು ಬಂದೆನೇನು? ಅಜ್ಜ, ಯುದ್ಧದಲ್ಲಿ ನನಗೆ ಏನು ಕಾರ್ಯ? ಹೇಳಿ. . . . ಛಲವನ್ನೂ ಪರಾಕ್ರಮವನ್ನೂ ಸ್ವೀಕರಿಸಿದ ನನಗೆ ಆ ಕೌಂತೇಯರೊಡನೆ ಸಂಧಿಯೇ! . . . ನೆಲಕ್ಕಾಗಿ ಇರಿಯುವೆನೆಂದು ಬಗೆದಿರೇನು? ಛಲಕ್ಕಾಗಿ ಪಾಂಡುಪುತ್ರರನ್ನು ಇರಿಯುವೆನು! ಈ ನೆಲವು ನನಗೆ ಹಾಳುನೆಲ. ದಿನಪಸುತನನ್ನು ಕೊಲ್ಲಿಸಿದ ನೆಲದೊಡನೆ ಮತ್ತೆ ಹೊಂದಿ ಬಾಳುವೆನೇ! . . . ತಮ್ಮಂದಿರೊಡನೆ ಕೂಡಿರುವ ಯಮತನಯನೊಡನೆ ತಮ್ಮಂದಿರನ್ನು ಕಳೆದುಕೊಂಡ ದುರ್ಯೋಧನನು ದುರಾಸೆಪಟ್ಟು ಈಗ ಸಂಧಿಮಾಡಿದರೆ ನೋಡುವವರ ಮಾತಿಗೆ ಈಡಾಗದಿರುವನೇ! . . . ಒಡನೆಯ ವಿರೋಧಿಯನ್ನು ತರಿದು, ಆ ರಸಮಾಂಸದಿಂದ ಭೂತಗಳಿಗೆ

ಭೋಜನ ಮಾಡಿಸದೆ, ಶತ್ರುಗಳ ವಾರವನಿತೆಯರ ವದನಾಂಬುರುಹ ಗಳನ್ನು ಕುಂದಿಸದೆ, ಬಂಧುಶೋಕದಿಂದ ಕೂಡಿದ ಬಂಧುಜನಕ್ಕೆ ಸಂತೋಷಮಾಡದೆ, ಫಣಿರಾಜಕೇತನನು ಪಾಂಡವರಲ್ಲಿ ಸಂಧಿಮಾಡುವ ನೇನು!... ಮೊದಲು ಅವರು ಐದು ಗ್ರಾಮಗಳನ್ನು ಬೇಡಿದರೆ ನಾನು ಕೊಡಲಿಲ್ಲ. ಅರ್ಧ ರಾಜ್ಯವನ್ನು ಬೇಡಿ, ಅವರಲ್ಲಿಗೆ ಅಟ್ಟಿದರೆ, ಪವನ ನಂದನನು ನನ್ನನ್ನು ಅಣಕಿಸಿ ಹೀಯಾಳಿಸದೆ ಬಿಡುವನೆ! . . . ನನ್ನ ಪ್ರಿಯ ಸ್ನೇಹಿತನನ್ನೂ ಪ್ರಿಯನಾದ ತಮ್ಮನನ್ನೂ ಇಕ್ಕಿದ ಪಾರ್ಥನೂ ಭೀಮನೂ ಇರುವವರೆಗೂ ನನ್ನ ದೇಹದಲ್ಲಿ ನನ್ನ ಜೀವವಿರುವವರೆಗೂ ಸಂಧಿಯನ್ನು ಒಲ್ಲೆನು. ಮೊದಲು ಅವರಿಬ್ಬರನ್ನೂ ಇಕ್ಕುವೆನು. ಇಕ್ಕಿದ ಬಳಿಕ, ಅಂತಕಾತ್ಮಜನೊಡನೆ ಸಂಧಿಮಾಡುವೆನು. ನನ್ನ ದುಃಖ ಆರಿ ದರೆ, ಆಗದು ಎನ್ನುವೆನೇ!" ಎಂದು ಮತ್ತೆಯೂ ಹೀಗೆಂದನು :—

"ಅವರೊಡನೆ ಹೇಗೂ ಸಂಧಾನವನ್ನು ಮಾಡಲಾಗದು, ಹೊಂದಿ ಬಾಳುವುದಕ್ಕೆ ಸ್ವಲ್ಪವೂ ಆಗದು. ಅಜ್ಜಾ, ನೀವಿಲ್ಲದೆ, ಬಿಲ್ಲಗುರುಗಳು ಅವರಿಲ್ಲದೆ, ಆ ಕರ್ಣನಿಲ್ಲದೆ, ದುಶ್ಶಾಸನನಿಲ್ಲದೆ, ಯಾರೊಡನೆ ರಾಜ್ಯ ವಾಳಲಿ? ಯಾರಿಗೆ ನನ್ನ ಸಂಪದವನ್ನು ತೋರಲಿ? ಯಾರಿಗೆ ನಾನಾ ವಿನೋದಗಳನ್ನು ತೋರಿ ಮೆರೆಯಲಿ? . . . ಖಂಡಿತವೆನ್ನಿಸುವ ಪರರ ಭೂಮಂಡಲದ ಧವಳಾತಪತ್ರದ ಸಂಪದವು ನನಗೆ ಏನು ಪ್ರಯೋಜನ! ಅದನ್ನು ಒಲ್ಲೆನು, ಅಖಂಡಿತವಾದ ಅಭಿಮಾನವದನ್ನೇ ಬಲವಾಗಿ ಹಿಡಿ ಹಿಡಿಯುವೆನು . . . ಹುಟ್ಟಿದ ನೂರುವರೂ ಒಡಹುಟ್ಟಿದ ನೂರುವರೂ ಇದಿರಿಸಿ ಸತ್ತರೆ, ಕೋಪವು ಹುಟ್ಟಿ ವ್ಯಾಪಿಸಿತು. ಸತ್ತವರು ಹುಟ್ಟರು. ಪಾಂಡವರೊಡನೆ ಇರಿದು, ಛಲವನ್ನೇ ಮೆರೆಯುತ್ತೇನೆ . . . ಕಾದದೆ ಇರೆನು, ಅಜ್ಜ. ಈ ಹೊತ್ತಿನ ಒಂದೆ ಯುದ್ಧದಲ್ಲಿ ಪಾಂಡವರಾದರು, ಅಥವಾ ನಾನಾದೆ. ಆದ್ದರಿಂದ ಭೂತಳ ಪಾಂಡವರಿಗಾಯಿತು, ಅಥವಾ ಕೌರವನಿಗಾಯಿತು."

ಎಂಬುದಾಗಿ ರಾಜಾಧಿರಾಜನು ನಿವ್ಯಾರ್ಜಶೌರ್ಯವನ್ನು ಅವ ಲಂಬಿಸಿದವನಾಗಿ ನುಡಿಯಲು, ಗಾಂಗೇಯನು ಅತಿಯಾದ ವಿಸ್ಮಯ ದಿಂದ ಆಕುಲಿತವಾದ ಚಿತ್ತವುಳ್ಳವನಾಗಿ ಪುನಃಪುನಃ ತಲೆಯನ್ನು

ತೂಗುತ್ತಾ, "ಅರಗಿನ ಮನೆಯು ಬೆಂಕಿಯು ಬೀಜ, ಉಗ್ರವಾದ ವಿಷದಿಂದ ಹುಟ್ಟಿದ ಮೊಳಕೆ, ಆಟದಲ್ಲಿ ಉದ್ಧತಿಯಿಂದ ಆಡಿದ ದ್ಯೂತದ ವಿನೋದವೆಂಬ ಚಿಗುರಿನ ಗೊಂಚಲು, ಪಾಂಚಾಲ ರಾಜಾತ್ಮಜೆಯ ಆಯತವಾದ ಕೇಶದ ಗ್ರಹಣವೆಂಬ ಪುಷ್ಪ—ಹೀಗೆ ಬಳೆದ ವೈರದ ವೃಕ್ಷವು ಕೌರವ ಕ್ಷಿತಿಪಾಲನಿಗೆ ಊರುಕಿರೀಟಭಂಗಗಳ ಭಯವನ್ನು, ಹೇಳು, ಮಾಡದೆ ಹೋಗುವುದೇ!" ಎಂದು ನಿಶ್ಚಯಿಸಿ, "ಕುರುರಾಜನ ತಮ್ಮಂದಿರನ್ನು ವಾಯುಸುತನು ಕೊಂದಿಕ್ಕುವನು, ಕೌರವೇಶ್ವರನ ಎರಡು ತೊಡೆಗಳನ್ನೂ ಗದಾಪರಿಘದಿಂದ ನುಗ್ಗಾಗಿ ಒತ್ತುವನು, ಏಳು ಸಮುದ್ರಗಳವರೆಗಿನ ವಸುಂಧರಾತಳವನ್ನು ಏಕಚ್ಛತ್ರದಿಂದ ಆಳುವನು—ಎನ್ನುವವರ ಮಾತನ್ನು ಪರಾಕ್ರಮಿಯಾದ ಭೀಮನು ಹುಸಿಯಾಗಲು ಈಯನು" ಎಂದು ಗಾಂಗೇಯನು ಮನಸ್ಸಿನಲ್ಲಿಯೇ ಹೊಗಳಿ; ತನ್ನ ಹೊಟ್ಟೆಯಿಂದ ಒಂದು ಬಾಣವನ್ನು ತೆಗೆದು ಲೆಕ್ಕಣಿಕೆ ಮಾಡಿ, ಆನೆಯ ಮದದ ಮಸಿಯನ್ನು ತರಿಸಿ, ಪತಾಕೆಯ ಪಟದಲ್ಲಿ ಬರೆದು ಸಿಂಧುಸುತನು ಅಂಧನೃಪತಿಗೆ ಅಟ್ಟಿದನು.

ಹಾಗೆ ತನ್ನ ಹೆಸರಿನ ಗುರುತಿರುವ ಲೇಖನವನ್ನು ಬರೆದು, "ಮೊಮ್ಮಗನು ಹೇಳಿದ ಮಾತನ್ನು ಹೇಗೂ ಒಡಂಬಡುವವನಲ್ಲ. ನೀನೂ ಗಾಂಧಾರಿಯೂ ಇದ್ದು ಕುರುಕುಲಪ್ರದೀಪನಾದ ದುರ್ಯೋಧನನನ್ನು ಕೌಂತೇಯರೊಡನೆ ಎಲ್ಲಿಯಾದರೂ ಸಂಧಿಯನ್ನು ಮಾಡಿ, ಹಿಂದಿನ ಕ್ರಮದಲ್ಲಿ ನಡೆಯುವಂತೆ ಮಾಡುವುದು" ಎಂದು ಸಂಜಯನ ಕೈಯಲ್ಲಿ ಕೊಟ್ಟು, ಧೃತರಾಷ್ಟ್ರನಲ್ಲಿಗೆ ಅಟ್ಟಲಾಗಿ—

ಕುರುರಾಜನು ಸಿಂಧುಸುತನ ಮುಖವನ್ನು ನೋಡಿ, "ಮುರಿಯುವ ಯಶಸ್ಸಿನ ಉನ್ನತವಾದ ಕುರುವಂಶವು ನನ್ನ ಕಾರಣದಿಂದ ಚೂರಾಯಿತು. ನಾನೂ ಕುರುರಾಜನೇ? ನೀವೂ ಸಂಧಾನ ಹೇಳುವುದೇ? ನನಗೆ ರಾಜ್ಯವೇ? . . . . ಈ ನನ್ನ ಎರಡು ನಿಡುದೋಳುಗಳಿಂದ ಬಂದದ್ದು ವೀರವೃತ್ತಿ. ಜಯವೆಂಬುದು ದೈವದಿಂದ ಬರುವದು. ಅಜ್ಜ, ಭರತವಂಶಕ್ಕೆ ಕಲಂಕವಾಗದ ಹಾಗೆ ನಡೆಯುತ್ತೇನೆ . . . ಮಂಗಳ ಮಹಾಶ್ರೀ ಸಂಧಿಕಾರ್ಯಕ್ಕೆ ನೀವು ಹೇಳಿದಂತೆ ಕೇಳುತ್ತೇನೆ. ಬಿಡಿ, ಅಜ್ಜ.

ನಿಮ್ಮ ಮಾತನ್ನು ಒಮ್ಮೆಗೆ ದಾಟಿದೆ. ಆಜ್ಞಾಲಂಘನವೆಂಬ ದೋಷವನ್ನು ಒಪ್ಪಿಸಿ, ನಿನ್ನ ಆಗ್ರಹವನ್ನು ಬಿಸುಡಬೇಕು" ಎನ್ನಲು—

ಮಂದಾಕಿನೀನಂದನನು ಅವನ ಸತ್ತ್ವಕ್ಕೂ ಆ ಏಕಾಂಗಸಾಹಸಕ್ಕೂ ವಿಸ್ಮಯದಿಂದ ಉಕ್ಕಿ ಮೆಚ್ಚಿ ಹೊಗಳಿದನು. "ಗುರು ಭೀಷ್ಮ ಕರ್ಣ ಮೊದಲಾದ ಅಶೇಷ ಸುಭಟಾನೀಕವು ವಿನಿಶ್ಶೇಷವಾಗಿರಲು ಕೌರವ್ಯವಿಶೇಷಕನು ಚಲಿತನಾದವನಲ್ಲ. ಏಕಾಕಿಯಾಗಿ, ಕುಂತೀತನೂಜರೊಡನೆ ಇನ್ನೂ ಹೊಂದಿ ಬಾಳಲೊಲ್ಲದೆ, ಇರಿಯಲೆಂದು ಇರುವನು. ಈ ರೀತಿಯಾದ ಪರಾಕ್ರಮಿಯೂ ಮೊಯ್ಗಲಿಯೂ ಯಾವನು?" ಎಂದು ಮಂದಾಕಿನೀನಂದನನು ಹೊಗಳಿದನು.

ಸರೋವರ ಪ್ರವೇಶ

ಗಾಂಗೇಯನು ಹಾಗೆ ಮನಸ್ಸಿನಲ್ಲಿ ಹೊಗಳಿ, 'ಅಶುಭಸ್ಯ ಕಾಲ ಹರಣಂ' ಎಂಬ ವಾಕ್ಯಾರ್ಥವನ್ನು ಅವಧಾರಿಸಿ, "ಮಗನೆ, ನೀನು ಹೇಗೂ ನಾವು ಹೇಳಿದುದನ್ನು ಕೈಕೊಳ್ಳದೆ, ಛಲವನ್ನೇ ಕೈಕೊಂಡು, ಪಾಂಡುನಂದನರೊಡನೆ ಕಾದಿದಲ್ಲದೆ ಇರೆನೆನ್ನುವೆಯಾದರೆ—ತೀರ್ಥ ಯಾತ್ರೆಗೆ ಹೋದ ಬಲದೇವನು ಬರುವವರೆಗೂ ನೀನು ಇದ್ದ ಎಡೆ ತಿಳಿಯದ ಹಾಗೆ ಮೈಮರೆಸಿ, ಅಶ್ವತ್ಥಾಮ ಕೃಪ ಕೃತವರ್ಮರು ಬರುವ ವರೆಗೂ ಕಾಲವಂಚನೆ ಮಾಡಬೇಕು. ಅಲ್ಲದೆ, ಜಲಮಂತ್ರ ವಿದ್ಯಾ ಭ್ಯಾಸವನ್ನು ಕೈಕೊಂಡು, ಕುರುಕ್ಷೇತ್ರದ ಉತ್ತರದಿಶಾಭಾಗದಲ್ಲಿರುವ ವೈಶಂಪಾಯನ ಸರೋವರವನ್ನು ಹೊಕ್ಕಿದ್ದು, ಇಂದಿನ ಒಂದು ಇರು ಳನ್ನು ಕಳೆದು, ನಾಳೆ ನೀವು ಮಾಡುವುದನ್ನು ಮಾಡುವುದು" ಎನ್ನಲು—

'ಮಹಾಪ್ರಸಾದ'ವೆಂದು ಅದಕ್ಕೆ ಒಡಂಬಟ್ಟು, 'ಹಾಗೆ ಮಾಡುವೆ' ನೆಂದು ಯಥೋಚಿತವಾದ ಹಿತೋಪದೇಶದೊಡನೆ ಜಲಮಂತ್ರೋಪ ದೇಶವನ್ನು ಕೈಕೊಂಡು, ಕುರುಕುಲಪಿತಾಮಹನನ್ನು ಬೀಳ್ಕೊಂಡು, ತನ್ನ ಭುಜದ ಗದೆಯ ಸಹಾಯವುಳ್ಳವನಾಗಿ ಸಂಗ್ರಾಮರಂಗದ ಒಳಗೇ ಬರುತ್ತಾ, ತನ್ನ ಮನಸ್ಸಿನಲ್ಲಿಯೇ "ಕರ್ಣನ ದುಶ್ಶಾಸನನ ವಿಯೋಗ ದಲ್ಲಿಯೂ ಇದುವರೆಗೆ ನನಗೆ ನೋವಿಲ್ಲ. ಅಹಿತರೊಡನೆ ಹೊಂದಿ ಬಾಳು ಎಂಬ ಸುಜನರಾದ ಗುರುಜನರ ಅಭ್ಯರ್ಥನೆಯಿಂದ ನೊಂದೆ... ಪಾಂಡವರು ಶತ್ರುಗಳೇ. 'ಅವರೊಡನೆ ವಿರೋಧವನ್ನು ಬಿಸುಟು, ಸಂಧಿಯನ್ನು ಮಾಡುವುದು' ಎಂಬವರ ಮಾತನ್ನು ಕೇಳುವುದಕ್ಕೆಂದು ಎರಡು ಕಿವಿಗಳನ್ನು ನನಗೆ ವಿಧಿ ಮಾಡಿದನೇ!" ಎನ್ನುತ್ತಾ ಆ ಸರೋ ವರದ ಸಮೀಪವನ್ನು ಕುರುಕುಲಪ್ರದೀಪನು ಐದಿಬಂದಾಗ—

ಒಂದೆರಡನ್ನು ತರತರದಿಂದ ಹೊರಗೆ ಹೊರಟ ಹಜ್ಜೆಯೆನ್ನಿಸು ವಂತೆ ಹಿಂದುಹಿಂದಾಗಿ ಪ್ರವೇಶಿಸಲು, 'ಛಿಃ!' ಎಂದು ಅವನನ್ನು ರಾಜ್ಯಲಕ್ಷ್ಮಿ ಹೇಸಿ ಬಿಸುಟಳು. ಹಸುಗಳನ್ನು ಕಳ್ಳತನಮಾಡಿಸುವ, ಕೃಷ್ಣೆಯ ನಿರಿಯನ್ನು ಹಿಡಿದು ಉರ್ಚಹೇಳುವ, ಕೊಳವನ್ನು ಹಿಂದು

ಹಿಂದಾಗಿ ಹೊಗುವ ದುರ್ನಯಗಳು ಕೌರವನ ರಾಜ್ಯದ ಆಯುಸ್ಸಿನ ಕೇಡನ್ನು ತಿಳಿಸುವುದಿಲ್ಲವೆ!

ಹಾಗೆ ಸರೋವರವನ್ನು ಸಮಿಾಪಿಸಿ ಬಂದು—'ಆಕಾಶವು ನೆಲಕ್ಕೆ ಬಿದ್ದಿತೋ! ಅಥವಾ ನೆಲದಲ್ಲಿ ನೆಲ ಹುಟ್ಟಿತೋ! ಅಥವಾ ಇಲ್ಲಿ ಪನ್ನಗ ರೆಂಬ ದೇವತೆಗಳು ಎಂದೂ ಇರುವ ಬಿಲವೋ! ಅಥವಾ ಎಂಟು ದಿಗ್ಗಜ ಗಳ ಗುಂಪಿಗೆ ಮೈ ತೊಳೆದುಕೊಳ್ಳುವುದಕ್ಕಾಗಿ ಬ್ರಹ್ಮನು ಮಾಡಿದ ನೀರಿನ ಸ್ಥಳವೋ! ಸಂದೇಹ ಮನಸ್ಸಿಗಾಯಿತು!' ಎನ್ನಿಸಿದ್ದ ವೈಶಂಪಾ ಯನ ಸರೋವರವು ಏನು ಹಿರಿದೋ!—ಹಾಗೆ ಗಂಭೀರವಾದ ನಿರಾಕರ ವಿರುವಂತೆ ಇದ್ದ ಕಮಲಾಕರವನ್ನು ನೋಡುವಷ್ಟರಲ್ಲಿ—

"ಕುರುಪತಿ, ನೀನು ಪ್ರವೇಶಮಾಡಿದ ಹೊಳೆಗಳು ಮೊದಲಾಗಿ ಬತ್ತಿಹೋಗುವುವು. ಈ ರೀತಿಯಾದ ದುರಾತ್ಮನನ್ನು ಖಳನನ್ನು ನಾನು ಒಳಕೊಂಡರೆ, ಭೀಮನು ಈ ಸರೋವರವನ್ನೂ ನಮ್ಮನ್ನೂ ಕದಡು ವನು. ಪ್ರವೇಶಿಸಬೇಡ, ತೊಲಗು" ಎಂದು ನಿಷೇಧಿಸುವ ಹಾಗೆ ಅನೇಕ ಬಕ ಕೋಕ ಮರಾಳ ವಿಹಂಗಮಗಳ ಧ್ವನಿಯು ನೆಗೆಯಿತು.

ಆಗ ಕುರುರಾಜನು ತನ್ನ ಮೈಯಲ್ಲಿ ಅಂಟಿಕೊಂಡಿದ್ದ ಕೆಂಪುರಕ್ತ ವನ್ನು ತೊಳೆದು ಕಳೆದು, ಕೈ ಕಾಲು ಮುಖಗಳನ್ನು ತೊಳೆದು, ಮುಕ್ಕು ಳಿಸಿ ಉಗುಳಿ, ಆಚಮನಕ್ರಿಯೆಗಳನ್ನು ಮಾಡಿ, ಜಲದೇವತೆಗೆ ನಮ ಸ್ಕರಿಸಿ, ಜಲಮಂತ್ರೋಪದೇಶದಿಂದ ಜಲಜಾಕರವನ್ನು ಅಭಿಮಂತ್ರಿಸಿ, ವೈಶಂಪಾಯನ ಸರೋವರವನ್ನು ಹೊಕ್ಕು, ಫಣಿರಾಜಕೇತನನು ಪರಮ ಯೋಗಿಯಂತೆ ಇದ್ದನು.

ಭೀಮನ ಕೋಪಾಟೋಪ

ಅಷ್ಟರಲ್ಲಿ ಇತ್ತ, ಶಲ್ಯನ ವಧೆಯಾದ ಬಳಿಕ ಎಲ್ಲಿಯೂ ಹುಡುಕಿದರೂ ದುರ್ಯೋಧನನ ರೂಪುಗಾಣದೆ, 'ಇದು ಏನಾದರೂ ಒಂದು ಕಾರಣವಾಗಬೇಕು' ಎಂದು ಸೂಕ್ಷ್ಮಕ್ರಿಯೆಯಿಂದ ಅಂತಕತನಯನು ಗರುಡಧ್ವಜನೊಡದೆ ಆಲೋಚಿಸುವುದನ್ನು ಕುರುಕುಲಾಂತಕನು ಕೇಳಿ, "ಸಭೆಯಲ್ಲಿ ನಾನು ಮಾಡಿದ ಪ್ರತಿಜ್ಞೆ ಸುಳ್ಳಾಯಿತು. ಪಾಂಚಾಲ ರಾಜಾತ್ಮಜೆಯ ಮುಖದ ಕಂದು ಹೋಗಿಲ್ಲ. ನನ್ನ ಭುಜಾದಂಡದಲ್ಲಿ ಹುಟ್ಟಿದ ಕಡಿತ ಇನ್ನೂ ಸ್ವಲ್ಪವೂ ತೀರಿಲ್ಲ. ಸುಯೋಧನನ ವಧೆಗೆ ಏನುಮಾಡಲಿ? ಹೇಗೆ ಆದೀತು?" ಎಂಬುದನ್ನು ಕುರಿತು ಉತ್ಸುಕ ಚಿತ್ತನಾದ ಭೀಮನು ವ್ಯಥೆಪಟ್ಟನು.

ಹಾಗೆ ವ್ಯಥೆಪಟ್ಟು, ಕುರುಕುಲ ಮಹೀಪಾಲನ ಬೃಹತ್ತಾದ ತೊಡೆಗಳೆಂಬ ಶೈಲಗಳೆರಡನ್ನೂ ತನ್ನ ಗದಾದಂಡವೆಂಬ ವಜ್ರದಂಡದಿಂದ ನುಗ್ಗುನುರಿಮಾಡಲೂ, ಆ ಕೌರವೇಶ್ವರನ ಬಾಹುಗಳೆಂಬ ಶಾಖೆಗಳನ್ನು ತನ್ನ ಗದೆಯೆಂಬ ಕೊಡಲಿಯಿಂದ ತರಿದುಹಾಕಲೂ, ಆ ಪಿಂಗಾಕ್ಷನ ವಕ್ಷಸ್ಥಲವನ್ನು ತನ್ನ ಗದೆಯೆಂಬ ನೇಗಿಲಿನಿಂದ ಎರಡು ಭಾಗವಾಗಿ ಹೋಳಿಕ್ಕಿ ಹರಡಲೂ, ಆ ಫಣಿರಾಜಕೇತನನ ವಿಕಟಲಲಾಟವೆಂಬ ಶಿಲಾಪಟ್ಟವನ್ನು ತನ್ನ ಗದಾದಂಡದಿಂದ ಚಿಪ್ಪುಚಿಪ್ಪಾಗಿ ಚೆಕ್ಕೆಯೆಬ್ಬಿಸಲೂ, ಆ ದ್ರೌಪದಿಗೆ ದ್ರೋಹಮಾಡಿದವನ ಮಣಿಮಯವಾದ ಮುಕುಟವನ್ನು ತನ್ನ ಗದೆಯ ಏಟನಿಂದ ಉರುಳಿಸಿ, ಕಾಲಿನ ಒದೆಯಿಂದ ದೂಳಿನಲ್ಲಿ ಹೊರಳಿಸಲೂ ಆ ಸುಯೋಧನನ ರಕ್ತಧಾರೆಯ ಪ್ರವಾಹದಿಂದ ತನ್ನಗದ್ದಿಸುತ್ತಿರುವ ವಿಪುಲವಾದ ಕೋಪವೆಂಬ ಬೆಂಕಿಯ ನಾಲಗೆಗಳ ಸಾಲನ್ನು ಆರಿಸಲೂ ಪಡೆಯದೆ ಅಡಹಡಿಸಿ ಭೀಮಸೇನನು ಕಿಡಿಕಿಡಿಯಾಗಿ, ಮೀಸೆಯನ್ನು ಕಡಿದು, ಕುರುಕುಲಾಂತಕನು ಅಂತಕನಂತೆ ಮಹಾಪ್ರಯತ್ನಕ್ಕೆ ಪ್ರಯತ್ನಿಸಿ, ಪ್ರಳಯಕ್ಕೆ ಸಮನಾದ ಸಂಕಲ್ಪವನ್ನು ಮಾಡಿ--

"ರಸಾತಲಕ್ಕೆ ಇಳಿದನೊ! ಅಥವಾ ನಾಲ್ಕೂ ದಿಕ್ಕುಗಳ ಕೋಣೆಗಳೊಳಗೆ ಉಳಿದನೊ! ಅಥವಾ ಖಳನು ಇಲ್ಲಿ ಈ ವಸುಮತಿಯಲ್ಲಿ

ಗಾಂಧಾರಿಯ ಬಸಿರನ್ನು ಮತ್ತೆ ಹೋಗಿ ಹೊಕ್ಕಿರುವನೋ! . . . ಭುವನಗಳು ಹದಿನಾಲ್ಕು, ಹೆಸರಿಂದ ನಾಲ್ಕು ಸಮುದ್ರ, ಹತ್ತು ದಿಕ್ಕುಗಳ ವಿವರ, ನೋಡಿದರೆ ಬ್ರಹ್ಮಾಂಡಮಂಡಲದಲ್ಲಿ ಇಲ್ಲಿ ಇಲ್ಲ. ಇನ್ನು ಎತ್ತ ಓಡುವನು! ಯಾರ ಜೊತೆ ಕೊಳ್ಳುವನು? ಯಾರ ಮರೆಯನ್ನು ಹೊಕ್ಕಿರುವನು! ಈಗ ಹೀಗೆ ಈ ಇವರನ್ನು ಬಿಟ್ಟು ಬೇರೆ ಎಲ್ಲಿ ಹೊಕ್ಕು ಈ ಭುಜಗಧ್ವಜನು ಬದುಕಲಾಗುವುದು! . . . ಚರ ಅಚರ ಎಂಬ ಜಗತ್ತಿನ ಒಳಗಡೆ ಖಳನು ಎಲ್ಲಿ ಹೊಕ್ಕರೂ, ಹರಿ ಹರ ಹಿರಣ್ಯಗರ್ಭರಲ್ಲಿ ಅವರ ಭುಜಪಂಜರದೊಳಗೆ ಇದ್ದರೂ, ಅಲ್ಲಿಯೂ ಕೊಲ್ಲದೆ ಇರೆನು. . . . ನಾಲ್ಕು ದಿಕ್ಕು ಕೊನೆಯಾದ ಭೂಕಾಂತೆ, ಕೇಳು! ಜಲಧಿ, ಕೇಳು! ಏಳು ನಾಲಗೆಯ ಅಗ್ನಿ, ಕೇಳು! ತಂದೆಯಾದ ವಾಯುವೇ, ಕೇಳು! ವಾಯುಮಾರ್ಗವೇ ಕೇಳು! ಶತ್ರುವನ್ನು ಕೊಂದು ನನ್ನ ಕೋಪಾಗ್ನಿಗೆ ಆಹುತಿಮಾಡುತ್ತೇನೆ. ಕೊಲಲು ಆರದ ಅಂದು ನಿಶ್ಚಯಿಸಿ ನಾನು ನನ್ನನ್ನು ಸಂದ ಅಗ್ನಿಗೆ ಆಹುತಿಮಾಡುತ್ತೇನೆ. ಖಂಡಿತ!'' ಎಂದು ಕೌರವ್ಯಕೋಲಾಹಲನು ಪ್ರತಿಜ್ಞೆಮಾಡಿ ಕೂಗಿದನು.

ಹಾಗೆ ಪಂಚಭೂತಸಾಕ್ಷಿಯಾಗಿ ಪ್ರತಿಜ್ಞೆಮಾಡಿ ನುಡಿದು, ಕುರುಕುಲಕ್ಕೆ ಪ್ರಧಾನಶತ್ರು ಎನ್ನಿಸಿದ ಸಾಹಸಭೀಮನು ಅಜಾತಶತ್ರುವಿಗೆ ಸಾಷ್ಟಾಂಗ ನಮಸ್ಕಾರ ಮಾಡಿ, ಹೀಗೆಂದನು: "ಬಿಟ್ಟ ಕೂದಲಿನ ದ್ರೌಪದಿ ಎಷ್ಟು ನವೆಯುತ್ತಾಳೆ! ಆ ದುಃಖವನ್ನು ಕಂಡು ಕಂಡೂ ನಾನೂ ನನ್ನ ತಮ್ಮಂದಿರೂ ಎಷ್ಟು ಸೈರಿಸೋಣ! ಪಾಂಚಾಲಿಯನ್ನು ನೋಡಿ ನೀನು ಮನಸ್ಸಿನಲ್ಲಿ ನೋಯುವುದೂ ಇಲ್ಲ. ನಿಷ್ಕರುಣಿಯಾಗಿದ್ದೀಯೆ. ನೀವು ಹೀಗಿದ್ದರೆ, ಅಷ್ಟರಲ್ಲಿ ಮುನಿಸನ್ನು ತೀರಿಸಲು ನರೇಂದ್ರನಾದ ವೈರಿಯೆಂಬ ವೃಕ್ಷವನ್ನು ನಿರ್ಮೂಲನಮಾಡುತ್ತೇನೆ. . . ಇಂದಿನ ಒಂದು ದಿವಸದಲ್ಲಿ ನಾನೂ ವಿಧೇಯನಲ್ಲ, ನೀನೂ ಗುರುವಲ್ಲ. ಉರ್ವೀನಾಥ, ಹರಿಯಲು ಬಿಡು. ಕುರುಸೂನುವನ್ನು ಇರದೆ ಇಕ್ಕಿ ಮೆಟ್ಟಿ ಡೊಕ್ಕರಿಸುತ್ತೇನೆ . . . ಮುಂದಲೆಯನ್ನು ಹಿಡಿದು ನನ್ನ ಮುಂದೆ ಎಳೆದು, ಅನಲಜೆಯನ್ನು ಒಯ್ದು ಪರಿಭವಿಸಿಯೆ ದಳ್ಳಿಂದು ಉರಿದು ಸೊಕ್ಕಿದವನನ್ನು ಕೊಂದೆ. ಕುರುಪತಿಯನ್ನು ಕೊಲ್ಲಲು ತಡೆಯುವೆನೇ!"

ಎಂದು ಕುರುಕುಲಾಂತಕನು ಕುರುಕುಲಕ್ಕೆ ಪ್ರಳಯಕಾಲದಂಡವೆನಿಸುವ ತನ್ನ ವಿಜಯಗದಾದಂಡವನ್ನೆತ್ತಿಕೊಂಡು, ಕುರುಕುಲವೆಂಬ ಬಾಳೆಯ ಕಾಡಿಗೆ ಆನೆಯ ಮರಿಯಾದವನು, ಶತ್ರುಗಳೆಂಬ ಮಿಡತೆಗಳನ್ನು ಬೀಳಿಸುವ ಕೆದರುದೀಪವಾದವನು, ಪವನಸುತನು ಆ ಕುರುಭೂಮಿಯಲ್ಲಿ ಕುರುಪತಿಯನ್ನು ಅರಸಿದನು.

ಹಾಗೆ ಇದಿರಿಗೂ ಹಿಂದೆಯೂ ಹಾಸೂ ಹೊಕ್ಕು, ಎರಡು ಸಲ ಮೂರು ಸಲ ಅಡ್ಡಾದಿಡ್ಡಿ ಹರಿದು; ಕುರುಕ್ಷೇತ್ರದಲ್ಲಿ ವಜ್ರದ ಏಟಿನಿಂದ ರೆಕ್ಕೆಯೊಡನೆ ಕೆಡೆದ ಪರ್ವತಗಳಂತೆ ಲೋಹದ ಪಕ್ಕರಕ್ಕೆಗಳೊಡನೆ ಕೋಡನ್ನು ಊರಿ ಪಾಡುಕೆಟ್ಟು ಮುದ್ದೆಯಾಗಿ ಬಿದ್ದ ಮದಾಂಧಗಂಧಸಿಂಧುರಗಳ ಅಡಿಯಲ್ಲಿ ಅಡಗಿದನೆಂದು ಭ್ರಮಿಸಿ ಕೈ ಕುತ್ತಿ ನೋಡಿಯೂ; ತನ್ನ ಭೀಕರವಾದ ಗದೆಯ ಏಟಿನಿಂದ ಜಾರಿ ಎಡವಿಬಿದ್ದು ಪಕ್ಕಕ್ಕೆ ಉರುಳಿ ಚೆಲ್ಲಾಪಿಲ್ಲಿಯಾದ ಕಾಂಭೋಜಾವಳಿಗಳ ತುರುಷ್ಕತುರಗಗಳ ಅಡಿಯಲ್ಲಿ ಅಡಗಿದನೆಂದು ಭ್ರಮಿಸಿ ಕೈಕುತ್ತಿ ನೋಡಿಯೂ; ಪ್ರದಕ್ಷಿಣಮಾಡಿ ನೋಡಿಯೂ; ತನ್ನ ಹರಿತವಾದ ಬಾಣಪರಂಪರೆಯ ದೊಡ್ಡ ಏಟಿನಲ್ಲಿ ತಗ್ಗಿ ನುಗ್ಗುನುರಿಯಾಗಿಬಿದ್ದ ತೇರಿನ ಹಲಗೆಗಳಲ್ಲಿ ಮೈಮರೆಸಿಕೊಂಡನೆಂದು ಭ್ರಮಿಸಿ ಬೆದಕಿನೋಡಿಯೂ; ತನ್ನ ನಿಷ್ಠುರವಾದ ಚರಣಸಂಘಟ್ಟದಲ್ಲಿ ಜಜ್ಜಿಹೋದ ವೀರಭಟರ ಮುಕುಟಗಳಲ್ಲಿ ಅವಿತುಕೊಂಡನೆಂದು ಭ್ರಮಿಸಿ ಶೋಧಿಸಿನೋಡಿಯೂ; ಮಾಂಸದ ಮುದ್ದೆಯಲ್ಲಿ ಸುಳಿದು ನೋಡಿಯೂ; ನರಗಳ ಗುಂಪಿನಲ್ಲಿ ತೊಳಲಿ ನೋಡಿಯೂ, ಮೂಳೆಯ ಗುಡ್ಡಗಳನ್ನು ಏರಿ ನೋಡಿಯೂ; ಮೆದುಳ ತಣ್ಣನೆಯ ಕೆಸರಲ್ಲಿ ಹೊಕ್ಕು, ಕರುಳ ಮೆದೆಯನ್ನು ಹಿಕ್ಕಿ ಹರಹಿ ನೋಡಿಯೂ; ಹಲ್ಲುಗಳ ಬಣಬೆಗಳಲ್ಲಿ ಪರವಶಗೊಂಡು ಮೆಟ್ಟಿಯೂ; ಅಟ್ಟೆಯ ಬೆಟ್ಟಘಟ್ಟದ ಇಟ್ಟೆಡೆಗಳಲ್ಲಿ ನಿಟ್ಟಿಸಿಯೂ; ವೈಯಾಕರಣನಂತೆ ಶಬ್ದವನ್ನು ಆಲಿಸಿಯೂ; ಬೇಟೆಕಾರನಂತೆ ಅಡಿಯ ಹೆಜ್ಜೆಯನ್ನು ಅರಸಿಯೂ; ಗರುಡನಂತೆ ಹಾವಿನ ಬಾವುಟವನ್ನು ಪರೀಕ್ಷಿಸಿ ನೋಡಿಯೂ; ವೈದ್ಯನಂತೆ ಅಹಿತನ ಗದೆಯನ್ನು ಅನ್ವೇಷಣಮಾಡಿ ನೋಡಿಯೂ; ಹಿಂದೆ ಪರಶುರಾಮನು ಈ ನೆಲದಲ್ಲಿ ಉಳ್ಳ ಅರಸುಮಕ್ಕಳೆಲ್ಲರನ್ನೂ ಇಪ್ಪತ್ತೊಂದು

ಸಲದವರೆಗೂ ಪಿಳ್ಳೆ ಹೆಸರಿಲ್ಲದ ಹಾಗೆ ಕೊಂದು, ಅವರುಗಳ ನೊರೆ ರಕ್ತದಿಂದ ತುಂಬಿ, ತನ್ನ ತಾಯಿಗೆ ತರ್ಪಣವನ್ನೂ ತಂದೆಗೆ ತರ್ಪಣವನ್ನೂ ಕೊಡಲೆಂದು ಮಾಡಿದ ಸ್ಯಮಂತಪಂಚಕಗಳೆಂಬ ಹೆಸರಿನ ಹಿರಿಯ ಮಡುಗಳೊಳಗೆ ಮೂಡಿ ಮುಳುಗಾಡಿ ನೋಡಿಯೂ; ನಾಲ್ವತ್ತೆಂಟು ಗಾವುದ ಸುತ್ತಳತೆಯ ಕುರುಕ್ಷೇತ್ರದಲ್ಲಿ ಎಲ್ಲಿಯೂ ದುರ್ಯೋಧನನನ್ನು ಅರಸಿ ಕಾಣದೆ ವಿಸ್ಮಯಪಟ್ಟು, ಅವನು ಬಿಟ್ಟಬೀಡಿಗೆ ನೇರವಾಗಿ ನುಗ್ಗಿ—

"ಅರಗಿನ ಮನೆಯಲ್ಲಿ ಸುಡಲು ಬಗೆದವನು ಎಲ್ಲಿದ್ದಾನೆ? ವಿಷಾನ್ನವನ್ನು ಇಕ್ಕಿ ಮರುತ್ಸುತನನ್ನು ಉಪಾಯದಿಂದ ಕೊಲ್ಲಲು ಮಾಡಿದವನು ಎಲ್ಲಿದ್ದಾನೆ? ಆ ಪಗಡೆಯ ಸಂದರ್ಭದಲ್ಲಿ ಕೃಷ್ಣೆಯನ್ನು ಪರಾಭವಿಸಿ ಎಳೆದ ಅಪರಾಧಿ ಎಲ್ಲಿದ್ದಾನೆ? ಕೃತಕಸಭಾಪ್ರವೇಶಮಾಡಿದ ಆ ಸುಯೋಧನನು ಎಲ್ಲಿದ್ದಾನೆ? . . . ಧೃತರಾಷ್ಟ್ರನ ಮಗ, ಸೂರ್ಯನ ಮಗನ ಸ್ನೇಹಿತ, ಹನ್ನೊಂದು ಅಕ್ಷೋಹಿಣಿಗೆ ಒಡೆಯ, ಮೋಸದ ಜೂಜಿನಿಂದ ಯಮಸುತ ಭೀಮಾರ್ಜುನರಿಗೆ ತನ್ನನ್ನು ಸ್ವಾಮಿಯಾಗಿ ಮಾಡಿಕೊಂಡವನು, ದ್ರೋಣಭೀಷ್ಮರ ಉಚಿತವಾದ ವಾಕ್ಯವನ್ನು ದ್ವೇಷಿಸಿದವನು, ಕೃಷ್ಣೆಯ ಬಟ್ಟೆಯನ್ನೂ ಕೂದಲನ್ನೂ ಎಳೆದವನು, ಶೋಕವೆಂಬ ತೀವ್ರಾಗ್ನಿಯಿಂದ ಬೆಂದವನು, ಮಕ್ಕಳ ಶೋಕದಿಂದ ಆಕ್ರಮಿಸಲ್ಪಟ್ಟವನು, ನಿಮ್ಮ ರಾಜಾಧಿರಾಜನು, ನೃಪತಿಲಕನು ಎಲ್ಲಿರುವನೋ? . . . ಭರತಕುಲವೆಂಬ ಚಂದ್ರನಿಗೆ ಕಲಂಕವಾದವನು, ಭರತವಂಶವೆಂಬ ರಾಜಭವನಕ್ಕೆ ರಾಜಕಪೋತವಾದವನು, ಕುರುಗಳಿಗೆ ಕೇತುವಾದವನು ಎಲ್ಲಿದ್ದಾನೆ? ಆ ಕುರುಕುಲಕ್ಕೆ ಲಯಕೇತುವಾದ ಭೀಮಸೇನನು ಬಂದನು!"

ಎಂಬುದಾಗಿ ಶಿಬಿರರಕ್ಷಕರ ಗರ್ಭವೂ ಶಿಬಿರದ ಸ್ತ್ರೀಯರ ಗರ್ಭವೂ ಒಡನೊಡನೆ ಜಾರಿಬೀಳುವಂತೆ ಸಿಂಹಗರ್ಜನೆಯಿಂದ ಗರ್ಜಿಸಿ, ಕುರುರಾಜನ ಬಾಗಿಲಿನ ಸಮೀಪದ ಹತ್ತಿರಕ್ಕೆ ಬಂದಾಗ—

"ಸಮರದಲ್ಲಿ ಯಾರು ಯಾರು ಸತ್ತರು? ಯಾರು ಯಾರು ಇದ್ದಾರೆ? ನನ್ನ ಮಕ್ಕಳಿಗೇನಾಯಿತು?" ಎಂದು ವಿಚಾರಿಸುವುದಕ್ಕಾಗಿ

ಶತ್ರುವಿನ ತಾಯಿಯು ಪರಿಜನರೊಡನೆ ನೃಪನ ಮನೆಯ ಬಾಗಿಲಲ್ಲಿ ಇದ್ದು; ಬಾಹುಗಳಿಂದ ಭ್ರಮಿಸುತ್ತಿದ್ದ ಅಭ್ರವಿಭ್ರಮವಾದ ಗದೆಯು ದಿಕ್ಕನ್ನು ವ್ಯಾಪಿಸಿ ತುಂಬಿ ಹಬ್ಬಿ ಗಗನವನ್ನು ಕೂಡಿಟ್ಟಹಾಗೆ ನೀಳ್ದು ಭಯಂಕರವಾಗಿರಲು, "ಕೌರವ್ಯರನ್ನು ತಿಂದ ರಾಕ್ಷಸನೊ! ಈತನೇಯೋ ಭೀಮಸೇನ!" ಎನ್ನುತ್ತಾ ಗಾಂಧಾರಿ ಬಳುಕುತ್ತಾ, ಪಾಂಡವಬಲ ಪ್ರಕಾರನ ಆಕಾರವನ್ನು ಬರುವಾಗ ಕಂಡು, ಬೆಚ್ಚಿಬಿದ್ದಳು. ಹಾಗೆ ಕಂಡು ಬಿಲ್ಲುಂಬೆರಗಾಗಿ—

"ನನ್ನ ಮಕ್ಕಳು ನೂರ್ವರನ್ನೂ ನುಂಗಿದ ಹಾಗೆ ಪನ್ನಗಕೇತನ ನನ್ನೂ ನುಂಗಲು ಭರದಿಂದ ಬಂದನು. ಹೀಗೆ ಅನ್ಯಾಯವಾಯಿತು!" ಎಂದು ಹೆಚ್ಚಾಗಿ ವ್ಯಥೆಪಡುವಷ್ಟರವುಟ್ಟಿಗೆ ವಿಜೃಂಭಿಸಿ, ಕಹಿಯ ಸ್ವರ ದಿಂದ ಗುರುಜನಕ್ಕೆ ಸಮುಚಿತಾಚಾರವನ್ನು ಮೆರೆದು, ಭೀಮನು ಭೀಮ ನಾದವನ್ನು ಮಾಡಿ—

"ಧೃತರಾಷ್ಟ್ರ ಕ್ಷಿತಿಪಾಲ, ಕೇಳು. ಜನನಿ ಗಾಂಧಾರಿ, ಕೇಳು. ನಿನ್ನ ಮಕ್ಕಳು ನೂರ್ವರನ್ನೂ ಗದೆಯ ಏಟಿನಿಂದ ಕೊಂದೆ. ದುಶ್ಶಾಸ ನನ ಉರಃಸ್ಥಲದ ಗಾಯದಿಂದ ಬಂದ ರಕ್ತಜಲದ ಸೇಕದಿಂದ ಕೋಪಾ ಗ್ನಿಯನ್ನು ತಣಿಸಿದೆ. ಉದ್ಧತನೂ ಕೋಪದಿಂದ ಅಪರಾಧಶತಗಳನ್ನು ಮಾಡಿದವನೂ ಆದ ಪಿಂಗಾಕ್ಷನನ್ನು ನುಂಗಲು ಬಂದೆನು!"

ಎನ್ನಲು ಗಾಂಧಾರಿ ಜರಾಸಂಧಾರಿಗೆ ಬದ್ಧಾಂಜಲಿಯಾಗಿ "ಅಷ್ಟು ಜನ ಮಕ್ಕಳ ದುಃಖವನ್ನು ಅನುಭವಿಸಿಯೂ ನಮ್ಮ ಜೀವಗಳು ಸ್ವಲ್ಪವೂ ಹೋಗವು. ನೀನು ಇಷ್ಟು ನಮಗೆ ಒಳ್ಳೆಯದು ಮಾಡು. ಭೀಮ, ಮೊದಲು ನಮ್ಮನ್ನು ನುಂಗು, ಬಳಿಕ ನಮ್ಮ ಮಗನನ್ನು ನುಂಗು" ಎನ್ನಲಾಗಿ;

ಅಂಧರಾಜನಿಗೆ ಪವನತನೂಜನು ಅಭಿಮುಖನಾಗಿ, "ಕುರುಸುತ ಕುರುಕುಲವರ್ಧನ, ಕುರುಭೂಮಿಯೆಂಬ ಕಾಡಿನಲ್ಲಿ ಕುರುವೆಂಬ ಹುಲಿಯು ದೊರಕಲು, ನಿನ್ನ ಪಕ್ಕದಿಂದ ಹೊರಳಿಸಿ ಕೊಲ್ಲಲೆಂದು ಬಂದ ಭೀಮನೆಂಬ ಕಿರಾತನು ನಾನು" ಎಂದನು.

ನೂನಧನ ಸುಯೋಧನ

ಅಷ್ಟರಲ್ಲಿ ಇತ್ತ ತ್ವರಿತಗತಿಯಿಂದ ವಿಂಧ್ಯಕ ಜಾಲಕರೆಂಬ ಕಿರಾತ ದೂತರು ಬಂದು ದೂರದಲ್ಲಿ ಅಡ್ಡಬಿದ್ದು, "ದೇವಾ, ದುರ್ಯೋಧನನನ್ನು ಕುರುಕ್ಷೇತ್ರದಲ್ಲಿ ಎಲ್ಲಿಯೂ ಹುಡುಕಿಯೂ ಕಾಣದೆ, ಮಧ್ಯಾಹ್ನದ ಸಮಯದಲ್ಲಿ ಹಣೆಯನ್ನು ಸುಡುವ ಸೂರ್ಯನ ತಾಪದಿಂದ ದಾಹಕ್ಕೆ ಸೋತು ಸಕಲ ಜಗತ್ಪಾವನವೂ ಆಪ್ಯಾಯನಕಾರಿಯೂ ಆದ ವೈಶಂಪಾಯನ ಸರೋವರಕ್ಕೆ ನೀರು ಕುಡಿಯಲು ಹೋಗಿ, ಹಲ ಕುಲಿಶ ಕಮಲ ಶಂಖ ಚಕ್ರಗಳ ಗುರುತುಳ್ಳ ಅಡಿಹೆಜ್ಜೆಯನ್ನು ಕೊಳದ ತಡಿಯಲ್ಲಿ ಕಂಡೆವು. ಅಲ್ಲಿ ಹೊರಗೆ ಹೊರಟ ಹಜ್ಜೆಯಲ್ಲದೆ ಹೊಕ್ಕ ಹಜ್ಜೆಯನ್ನು ಕಾಣೆವು" ಎನ್ನಲು—

ಪವನತನಯನು ಅವರನ್ನು ಒಡಗೊಂಡು ಬಂದು, ಧರ್ಮತನಯಾದಿಗಳಿಗೆ ಆ ವೃತ್ತಾಂತವೆಲ್ಲವನ್ನೂ ತಿಳಿಸಲು; ಯುಕ್ತಿಯುಕ್ತವಾದ ದೂತರ ಮಾತನ್ನು ಸಕಲ ಜಗತ್ತಿನ ಉತ್ಪತ್ತಿ ಸ್ಥಿತಿ ಪ್ರಳಯಕ್ಕೆ ಪ್ರಭುವೆನ್ನಿಸಿದ ವಿಷ್ಣು ಕೇಳಿ, ಮನಸ್ಸಿನಲ್ಲಿ ಅವಧಾರಿಸಿ, "ದೇವನದಿಯ ಮಗನು ಕೊಡಲು ಜಲಮಂತ್ರದ ಬಲದಿಂದ ಕಾಲವಂಚನೆಗೈವುದಕ್ಕಾಗಿ ಕೊಳವನ್ನು ಹೊಕ್ಕಿರುವನು. ಹಲಾಯುಧ ಕೃಪ ಅಶ್ವತ್ಥಾಮರೂ ನಾಗಕೇತನನಲ್ಲಿ ನಾಳೆಯೆ ಕೂಡಿಬರುವರು. ಅವರು ಇನ್ನೂ ಬರದಷ್ಟರಲ್ಲಿಯೇ ಸುಯೋಧನನನ್ನು ಮೊದಲೇ ವಶಮಾಡಬೇಕು. ಬಳಿಕ ಯಾರಿಗೂ ಗೆಲ್ಲಲು ಬರುವುದೇ! ಆದ್ದರಿಂದ ಈಗಲೇ ಹೋಗಿ, ಹೂಕೊಳವನ್ನು ಮುತ್ತಿ, ದುರ್ಯೋಧನನನ್ನು ಹೊರಡಿಸಿ, ಹಗೆಯನ್ನು ಹರಿದು ಕೆಡವಬೇಕು" ಎಂದು ಅರವಿಂದನಾಭನು ಧರ್ಮನಂದನಾದಿಗಳನ್ನು ಒಡಗೊಂಡು ಬಂದು, ಕಿರಾತದೂತರಿಂದ ಸಂಸೂಚಿತವಾದ ಹಲಕುಲಿಶ ಕಮಲ ಶಂಖ ಚಕ್ರಾಂಕಿತಲಕ್ಷಣವಾದ ಅಡಿಹಜ್ಜೆಯನ್ನು ಕಂಡು, ಸುಯೋಧನನ ಅಡಿಹಜ್ಜೆಯಾದುದನ್ನು ತಪ್ಪಿಲ್ಲದೆ ತಿಳಿದು, ಚಿತ್ತದಲ್ಲಿ ಸಂದೇಹವಿಲ್ಲದವರಾಗಲು—

"ಭರತಜರಲ್ಲಿ ಮೊದಲಿಲ್ಲದ ಪರಿಭಾಷೆಯನ್ನು ಉಂಟುಮಾಡಿ, ಕುರುರಾಜನು ಹಿಂದಕ್ಕೆ ಅಡಿಯಿಟ್ಟನು" ಎಂದು ಲಜ್ಜಾಭರದಿಂದ ಧರ್ಮ

ಸುತನು ತಲೆಯನ್ನು ತಗ್ಗಿಸಿದನು. ಹೀಗೆಂದು ದುರ್ಯೋಧನನ ಮನಸ್ಸಿನ ಧೈರ್ಯದ ಗಾಯಕ್ಕೆ ಮನದಲ್ಲಿ ನೊಂದು ಸಿಗ್ಗಾಗಿ, ತಲೆಯನ್ನು ಬಾಗಿ ಧರ್ಮನಂದನನು ಇರಲು—

ಕೂಗುತ್ತಿರುವ ಸಾರಸ ರಾಜಹಂಸಗಳ ರವದಿಂದ "ಏನು ಬಂದಿರೀ! ಬನ್ನಿ! ಹೀಗಿರಿ!" ಎಂದು ಆದರಿಸುವ ಹಾಗಾಯಿತು. ಗಾಳಿಯಿಂದ ಮೇಲೆದ್ದ ಅಲೆಗಳ ನೀರಿನಿಂದ ಕಾಲಿಗೆ ಎರಗಿದ ಹಾಗಾಯಿತು. ಅರಳಿದ ತಾವರೆಯಿಂದ ಪಂಕಜಾಕರವು ಅನಿಲಜನಿಗೆ ಅಭ್ಯಾಗತಪ್ರೀತಿಯಿಂದ ಅರ್ಘ್ಯವನ್ನು ಕೊಡುವ ಹಾಗಾಯಿತು. "ನಿನಗೆ ಅಹಿತನಾದ ಕೌರವನೆಂಬ ಶತ್ರು ಇಲ್ಲಿರುವನು, ನೋಡು" ಎಂದು ಮೇಲೆದ್ದು ಮುಳುಗಾಡಿಯೆ ತೋರುವ ಹಾಗೆ ಅಲ್ಲಿ ಮೇಲೆದ್ದು ಮುಳುಗಾಡುವ ಹಕ್ಕಿಗಳ ಗುಂಪು ಏನು ಮನವನ್ನು ಕೊಂಡುವೋ!

ಆಗ "ಹಗೆವನು ಒಳಗಾದನು. ಸರೋವರದಲ್ಲಿ ಇದ್ದು ಇನ್ನು ಎತ್ತ ಹೋಗುವನು! ಸರೋಜಲವನ್ನು ಮೊದಲು ಪೂರ್ಣವಾಗಿ ಹೀರಿ, ಶತ್ರುವಿನ ರಕ್ತಜಲವನ್ನು ಹೀರುತ್ತೇನೆ. ನನ್ನ ಸ್ವಾಮಿಗೆ ನನ್ನ ಸಾಮರ್ಥ್ಯವನ್ನು ತೋರುತ್ತೇನೆ" ಎಂದು ಸಂತೋಷದಿಂದ ಬಾಹುಗಳನ್ನು ಅಪ್ಪಳಿಸಿ, ದಿಗ್ವಲಯವು ಮರುದನಿಯಿಟ್ಟ ಹಾಗೆ ಭೀಮನು ಗಜರಿದನು.

ಆಗ ಆ ಕೊಳವನ್ನು ಬಳಸಿ ಬಂದು, ನಿರ್ಭರವಾಗಿ ಬೊಬ್ಬಿರಿದು ಅಬ್ಬರಿಸಿ, ಹಲವು ತೆರದ ತಮಟೆಗಳನ್ನು ಹೊಯ್ಸಿಯೂ, ಶಂಖಗಳನ್ನು ಪೂರೈಸಿಯೂ, ಭೇರಿಗಳನ್ನು ಬಾರಿಸಿಯೂ, ಕಹಳೆಗಳನ್ನು ಒತ್ತಿಸಿಯೂ ಪಂಚಮಹಾವಾದ್ಯಗಳನ್ನು ಬಾಜಿಸಿಯೂ ಹೇಗೂ ಹೊರಡಿಸಲಾರದೆ ಸುಯೋಧನನನ್ನು ಹೆಸರುಗೊಂಡು ನಕುಲನು ಆಸ್ಫೋಟಿಸಿ, "ಪ್ರಸಿದ್ಧನಾದ ಕಲಿಯೆ! ಕುರುವಂಶಕ್ಕೆ ಚಂದ್ರನೆ! ದುರ್ಯೋಧನನೆಂಬವನೆ! ಹೀಗೆ ಮಾಡಿ, ಅಯಶಸ್ಸೆಂಬ ಕೆಸರಿನಲ್ಲಿಯೂ ಈ ಸರೋವರದ ಕೆಸರಿನಲ್ಲಿಯೂ ನೀನೇ ನಿನ್ನನ್ನು ಹೀಗೆ ಅದ್ದಬಹುದೇ! ಇರಿವ ಬೆಡಂಗನೊಡನೆ ನೀನು ಇರಿಯಲಾರೆ. ನಿನಗೆ ನಾನೆ ಸಾಕಾಗುವೆನು. ಒಂಟಿಯಾಗಿ ಹೋರಲು ಸಮರ್ಥನಾಗಿದ್ದೇನೆ. ಓರನೆ, ಕೊಳದಿಂದ ಹೊರಗೆ ಬಾ. ನನ್ನ ಕೊಂತದ ಸವಿಯನ್ನು ತೋರಿಸುವೆನು" ಎನ್ನಲು—

ಸಹದೇವನು ಉತ್ಕಟಿಸಿ, "ಎಂದಿಗೂ ನಿನಗೆ ಸಾವಿಲ್ಲವೆಂದಿರುವೆಯು? ನಿನ್ನ ಮನಸ್ಸಿನಲ್ಲಿ ಇದುವರೆಗೂ ನೀನು ಒಂದನ್ನು ಬಗೆದರೆ ವಿಧಿ ತಾನೊಂದನ್ನು ಬಗೆಯಿತು, ಸಕಲ ಕುರುಕುಲಕೇತೂ!... ಯಮನ ಮಗನಿರಲಿ, ಸುಭಟರ ಯಮನಾದ ಭೀಮನಿರಲಿ, ಬಿಳಿಯ ಕುದುರೆಯ ಅರ್ಜುನನಿರಲಿ, ನಕುಲನೂ ಇರಲಿ; ಹೋರುವುದಾದರೆ ನನ್ನ ಕತ್ತಿಯ ರುಚಿಯನ್ನು ರುಚಿನೋಡಿ, ಬಳಿಕ ನೀರಿನ ರುಚಿಯನ್ನು ನೋಡು" ಎನ್ನಲಾಗಿ—

ಅರ್ಜುನನು ವಿಜೃಂಭಿಸಿ, "ಸುಯೋಧನ, ಮಾನಧನನೆನ್ನಿಸಿ ನಿನ್ನ ಅಭಿಮಾನಕ್ಕೆ ನೀನು ಗಾಯಮಾಡಿದೆ. ಈ ನೀರಿನಲ್ಲಿ ಏಡಿಯಿರುತ್ತದೆ, ಮೀನಿರುತ್ತದೆ, ಕಪ್ಪೆಯಿರುತ್ತದೆ. ಗಂಡರು ಇರುವರೆ? ಭೀಮನೊಡನೆ ಯುದ್ಧ ನಿನಗೆ ಅಸಾಧ್ಯ. ನನಗೂ ನಿನಗೂ ಯುದ್ಧ ತಕ್ಕದ್ದು. ನಿನ್ನನ್ನು ನುಂಗುವುದಕ್ಕೆ ಅಮೋಘವಾದ ಶರಗಳಿವೆ. ಇವುಗಳ ಸವಿಯನ್ನು ನೋಡು" ಎನ್ನಲು—

ಧೃತರಾಷ್ಟ್ರನ ಮಗನು ಮೊದಲು ಮಾಡಿದ ಅಧರ್ಮವನ್ನು ನೆನೆಯದೆ ಕುಲಕ್ರಮಕ್ಕೆ ಯುಕ್ತವಾದ ನಿರ್ಮಲಕ್ಷತ್ರಧರ್ಮವನ್ನೆ ಬಗೆದು, ಧರ್ಮನಂದನನು ಇಂತೆಂದನು: "ಭರತವಂಶದಲ್ಲಿ ಅಂದಿನಿಂದ ಇದುವರೆಗೂ ಸಪತ್ನಿಯ ಮಕ್ಕಳಲ್ಲಿ ಬದ್ಧವಾದ ಮತ್ಸರವಿಲ್ಲ. ನಮ್ಮನ್ನು ಅಕಾರಣವಾಗಿ ಕದಡಿದೆ. ಸಾವನ್ನು ಸಮೀಪಿಸಿದೆ. ಸೋದರರು ನಷ್ಟವಾದರು. ನನಗೂ ಸ್ವಗೋತ್ರವಧೆಯಾದ ಪಾತಕ ಆಯಿತು. ಕೌರವೇಶ್ವರ, ನೀನು ಸಂಧಿಗೆ ಒಡಂಬಡು. ಇನ್ನು ಕೊಳವನ್ನು ಹೊಕ್ಕಿರುವುದು, ಏನು ಯೋಗ್ಯವೇ!" ಎನ್ನಲಾಗಿ—

ಆ ಮಾತಿಗೆ ಸೈರಿಸದೆ, "ಈ ಭೂತವು ನನ್ನ ಸ್ವರವನ್ನು ಕೇಳದ ಹೊರತು ಹೊರಗೆ ಬರುವವನಲ್ಲ. ಇವನಿಗೆ ನಾನೆ ಸಾಕಾಗುವೆನು" ಎಂದು ಭೀಮನು ಉದ್ದಾಮಕೋಪಾಟೋಪಚಿತ್ತದಿಂದ ಹುಬ್ಬು ಬಿಗಿದು, "ಮರುಳೆ, ಕೊಳದೊಳಗೆ ಉಳಿದಿದ್ದು ನೀನು ಬದುಕಲು ಬಗೆವೆಯಾ! ನಿನ್ನ ತಮ್ಮನ ರಕ್ತಜಲವನ್ನು ಸವಿನೋಡಿದೆನು. ಹೀಗೆ ನಿನ್ನ ಬಲದ ಜಲನಿಧಿಯನ್ನು ಸವಿನೋಡಿದೆನು. ಈ ಕೊಳವನ್ನು ಪೂರ್ಣವಾಗಿ ಹೀರಿ,

ಬಳಿಕ ನಿನ್ನ ಸವಿಯನ್ನು ನೋಡುವೆನು . . . ಸ್ವರವನ್ನು ಕೇಳುವುದಕ್ಕೆ, ನನ್ನ ಉಗ್ರರೂಪವನ್ನು ನಿಂತು ನೋಡುವುದಕ್ಕೆ ಧೈರ್ಯವಿಲ್ಲದೆ, ಸಮರಾಕರವನ್ನು ಬಿಸುಟು ಕಮಲಾಕರವನ್ನು ಹೊಕ್ಕು, ಎಲವೋ ಮರುಳೇ, ಬದುಕಲು ಬಗೆಯುವೆಯಾ? . . . ಜಲದಲ್ಲಿ ಮೀನಿರುವ ಹಾಗೆ ನೀನು ಕೊಳದಲ್ಲಿ ಮುಳುಗಿದ್ದು, ಅಯ್ಯೋ, ಶೀತದ ಸೇಡಿಗೆ ಒಳಗಾದೆ! ನಿನ್ನ ದುರ್ಯೋಧನ ಎಂಬ ಹೆಸರಿಗೆ ಇದು ಲಜ್ಜಾಕರ. ನಿನ್ನ ಅಳತೆಯನ್ನು ತೋರಿದೆಯಲ್ಲಾ! ಛೀ! ಸತ್ತವರೇನು ಹುಟ್ಟುವುದಿಲ್ಲವೆ! ಹೊರಗೆ ಬಾ! ಆಯುಧವನ್ನು ಎತ್ತಿಕೊ! ಕೌರವೇಂದ್ರಾಚಲವಜ್ರನು, ಕುರುಕುಲ ಮಥನೋದ್ದೀಕರನಾದ ಭೀಮಸೇನನು ಈಗ ಬಂದನು! . . . ಹರಿ ಸಂಧಾನಕ್ಕೆ ಬಂದ ಅಂದು ಅವಗಡಿಸಿದ ಅಹಂಕಾರ ಎಲ್ಲಿತ್ತೊ! ಕೃಷ್ಣೆಯ ವಸ್ತ್ರವನ್ನೂ ಕೇಶವನ್ನೂ ಆಕರ್ಷಣಮಾಡಿಸಿದ ಮದ ಅದು ಎಲ್ಲಿತ್ತೊ! ಕೌಂತೇಯರನ್ನು ಮತ್ಸರದಿಂದ ಕಾಡಿನಲ್ಲಿ ತಿರ್ರನೆ ತಿರಿಸಿದ ಸೊಕ್ಕು ಈಗ ಏನಾಯಿತು!" ಎಂದು ಆ ಕುರುವಂಶಾಧೀಶನನ್ನು ಅದಟನೂ ಉದ್ದಾಮಭೀಮನೂ ಆದ ಭೀಮನು ಮೂದಲಿಸಿದನು.

ಹಾಗೆ ಮುಟ್ಟಿ ಮೂದಲಿಸಿ ನುಡಿದೂ, ಹೇಗೂ ಹೊರಗೆ ಹೊರಡಿಸಲಾರದೆ, "ಎಷ್ಟೆಂದು ಹೊಕ್ಕಿರುವೆ ನೀನು? ದ್ರೌಪದಿಗೆ ದ್ರೋಹ ಮಾಡಿದವನೆ, ದುಶ್ಶಾಸನನಿಗೆ ದುಷ್ಟಜ್ಯೇಷ್ಠನಾದವನೆ, ಭೀಷ್ಮನೇ ಮೊದಲಾದ ನಿಖಿಲಬಂಧುಗಳ ಕ್ಷಯದಿಂದ ಉತ್ಪನ್ನವಾದ ದುಃಖಧ್ವನಿಯ ನೀರಿನಿಂದ ಕತ್ತರಿಸಿಹೋದ ಧೈರ್ಯವೆಂಬ ಮರವುಳ್ಳವನೆ, ಯಮಸುತನನ್ನು ನಿಷ್ಕಾರಣವಾಗಿ ದ್ವೇಷಿಸುವವನೆ, ಭೀಮನ ಧ್ವನಿಯನ್ನು ಕೇಳಿ, ಇನ್ನೂ ಇರುವೆಯಾ! ಕೊಳದಿಂದ ಹೊರಗೆ ಬಾ!" ಎಂದು ಜಟಾಸುರ ಹಿಡಿಂಬ ಬಕವೈರಿ ಸಿಂಹನಾದ ಮಾಡಿದನು.

ಆಗ, ಸಿಂಹದ ಗರ್ಜನೆಯನ್ನು ಜಯಿಸಿದ ಆ ರವವನ್ನು, ಮೇಘದ ಗುಡುಗನ್ನು ಮುಳುಗಿಸಿದ ಆ ರವವನ್ನು ಕೇಳಿ, ಕೋಪದಿಂದ ಕೆಂಪಾದ ಕಣ್ಣುಗಳ ಆ ಉರಗಪಾತಕನು ಆ ನೀರಿನಲ್ಲಿ ಇದ್ದೂ ಬೆವರಿದನು!

ಹಾಗೆ ಬೆವರಿ, ಕುದಿಗೊಂಡು, ಸಹಿಸಲಾರದೆ ಜಲಮಂತ್ರವನ್ನು ಏನನ್ನೂ ಬಗೆಯದೆ, ಕೋಪೋದ್ರೇಕವನ್ನೇ ಬಗೆದು, "ಜಲಸ್ತಂಭನ

ವಿದ್ಯಾಬಲವನ್ನು ಅಪೇಕ್ಷಿಸಿದನು ಎನ್ನಡೆ, ಉರಗಪತಾಕನು ಬಲಹಾನಿಯಾಗಲು ಕೊಳದಲ್ಲಿ ಮುಳುಗಿರುವನು ಎಂದು ಆಗದವರು ನನ್ನನ್ನು ನೋಡಿ ನಗುವುದಿಲ್ಲವೆ!" ಎಂದು ಆಗ ಆ ಜಲಸ್ತಂಭಮಂತ್ರವೆಲ್ಲವೂ ಅವಿನೀತನಾದ ರಾಜಪುತ್ರನಲ್ಲಿ ಆಲೋಚಿಸಿದ ಮಂತ್ರದಂತೆ ಪರಿಣಾಮ ರಮಣೀಯವಾಗದೆ ಕೆಟ್ಟರೂ ಅಹಂಕಾರ ಕೆಡದೆ, ಆಗ ಫಣಿರಾಜಕೇತನನು ತನ್ನ ಎರಡು ಭುಜಗಳಲ್ಲಿ ತೋರಣದಂತೆ ಗದಾಪರಿಘವನ್ನು ಹೊತ್ತು ಕಮಲಾಕರದಿಂದ ಹೊರಗೆ ಬಂದನು.

ರಸಾತಲದಿಂದ ಕಾಲಾಗ್ನಿರುದ್ರನು ಹೊರಗೆ ಬರುವಂತೆ ಹಾಗೆ ಆ ಸರೋಮಧ್ಯದಿಂದ ಸಾಹಸಗರ್ವಾಲಂಕೃತನು ತಟಕ್ಕನೆ ಹೊರಗೆ ಬಂದು, "ಎಲ್ಲಿದ್ದಾನೆ ಭೀಮ? ಎಲ್ಲಿದ್ದಾನೆ ಭೀಮ?" ಎಂದು ಎಂಟು ದಿಕ್ಕುಗಳನ್ನೂ ನೋಡುತ್ತಾ, ಮತ್ತೆ ಕೋಪದಿಂದ ಕೆಂಪಾದ ಕಣ್ಣು ಅದ್ಭುತ ನಟನ ಹಣೆಯಲ್ಲಿ ತೊಳಗುವ ಉರಿಗಣ್ಣಿನಂತೆ ದಳ್ಳಿಸಲು, ಧಾರ್ತರಾಷ್ಟ್ರನು ತನ್ನ ಭುಜದ ಗದೆಯನ್ನು ತೂಗಿದನು.

ಹಾಗೆ ತನ್ನ ಭುಜದ ಗದೆಯನ್ನು ತೂಗುತ್ತಾ ಇದ್ದ ಪನ್ನಗಪತಾಕನ ಮೇರೆಯಿಲ್ಲದ ವೈಗಲಿತನಕ್ಕೆ ಮೆಚ್ಚಿ, ತಲೆಯನ್ನು ತೂಗಿ, ಎಲ್ಲಾ ಭಯಂಕರವಾದ ಸೇನೆಯನ್ನೂ ತನ್ನ ಭುಜದ ಪ್ರತಾಪದಿಂದ ಜಯಿಸಿದ ಭೀಮಸೇನನು ಕೌರವನ ಎದುರಿಗೆ ಬಂದು, "ನಿನ್ನ ತಮ್ಮನ ರಕ್ತಜಲವನ್ನು ಮೊದಲು ಪೂರ್ಣವಾಗಿ ಹೀರಿದರೆ, ಹೆದರಿ ನೀನು ಕೊಳವನ್ನು ಹೊಕ್ಕರೆ, ಬೆನ್ನಲ್ಲಿಯೇ ಬಂದವನು, ಶೌರ್ಯೋನ್ನತನು, ಕೌರವಮಲ್ಲನು, ಇದೋ ಇರುವನಲ್ಲವೆ!" ಎಂದು ಮರ್ಮವನ್ನು ಉಂಟು ಮಾಡಿ, ಮೂದಲಿಸಿ ನುಡಿಯಲು—

ದುರ್ಯೋಧನನು ಅತಿಯಾದ ಕ್ರೋಧವೆಂಬ ಬೆಂಕಿಯುಳ್ಳವನಾಗಿ, "ಯಮರಾಜನ ಪ್ರಿಯಪುತ್ರನಿಗೂ ನಿನಗೂ ಆ ಗಾಂಡೀವ ಧನ್ವಿಗೂ ಆ ಯಮಳರಿಗೂ ಪ್ರಿಯೆಯಾದ ಕೃಷ್ಣೆಯ ತಲೆಗೂದಲ ಮೊದಲನ್ನು ಬಾಹುವಿಕ್ರಮಿಯಾದ ದುಶ್ಶಾಸನನು ನಿನ್ನ ಮುಂದೆ ಹಿಡಿದೆಳೆದ ಅಂದು ಎಲ್ಲಿದ್ದೆ? ಈ ಗಂಡಗರ್ವವೂ ಅಂದು ಎಲ್ಲಿಗೆ ಹೋಯಿತು? ಷಂಡ, ನಿನಗೆ ಈ ಗಂಡನ್ನು ಯಾರು ಮಾಡಿದರು? . . . ಅಸುರನು ಭೂಮಿ

ಯನ್ನು ರಸಾತಲಕ್ಕೆ ಒಯ್ದರೆ, ಹರಿ ಅದನ್ನು ತರಲು ಹೊಕ್ಕ ಹಾಗೆ, ನಿನ್ನ ಕಡೆಯಿಂದ ಈ ಭೂಮಿಯನ್ನು ಎತ್ತಿತರುವುದಕ್ಕಾಗಿ ಹೊಕ್ಕೆನಲ್ಲದೆ, ಕೊಳವನ್ನು ಅಂಜಿ ಹೊಕ್ಕೆನೆ!... ನಾಡುಕಡೆಗಳನ್ನು ಬಿಟ್ಟು, ಜೇರು ಬಿಕ್ಕೆಗಳನ್ನು ತಿಂದು, ವನದಲ್ಲಿ ಅಡಗಿದ್ದು, ನೀವೂ ಈಗ ನೆಟ್ಟಗೆ ಎದ್ದು ನಿಂತು, ಬಿರುದನ್ನೂ ವೀರವನ್ನೂ ಕೊಚ್ಚುವಿರಾ!... ಹುಟ್ಟನ್ನೂ ಸಟ್ಟುಗವನ್ನೂ ಕೊಂಡು, ಅಟ್ಟು ಆರಿಸಿ, ಬೋನವಿಟ್ಟು ಬಂದೆಯೊ! ಗದೆಯನ್ನು ಕೊಂಡು ತಿರುಗಿಸುವ ಹಾಗಾಯಿತೆ! ತಟಕ್ಕನೆ ನಿನಗೆ ಗಂಡಗರ್ವವುಂಟಾಯಿತೇ!... ಎಸರನ್ನು ಇಡುವ, ಅಕ್ಕಿಯನ್ನು ತೊಳೆಯುವ ಕೆಲಸವಲ್ಲದೆ, ಕೈಗೆ ನೀರೆರೆಯುವ ಕಂಚು ತೊಳೆಯುವ ಕೆಲಸವಲ್ಲದೆ, ಮತ್ಸ್ಯನ ಬಾಣಸಿಗನಾದ ನಿನಗೆ ಈ ಕೆಲಸವನ್ನು ಯಾರು ಕೊಟ್ಟರೊ!" ಎಂದು ಮುಟ್ಟೆ ಮೂದಲಿಸಿ ನುಡಿಯಲು—

ಭೀಮಸೇನನು ಮುಗುಳುನಗೆ ನಕ್ಕು, "ಹಿರಿಯಣ್ಣನ ಸತ್ಯವನ್ನು ಆದರದಿಂದ ಕಾಯುವುದಕ್ಕಾಗಿ ಹೆರರಿಗೆ ಅಡಿಗೆಮಾಡಿದೆ. ಕುರುವಂಶಜ, ಕೇಳು: ನಿನ್ನ ಈ ಶರೀರಮಾಂಸದಲ್ಲಿ ಮರುಳುಗಳಿಗೆ ಅಡಿಗೆಮಾಡುತ್ತೇನೆ! ... ಚಿತ್ರಾಂಗದನಿಂದ ಅಂದು ನಿನಗೆ ಆದ ಭಂಗವನ್ನು ನೆನೆ. ಗೋಗ್ರಹಣ ಪ್ರಪಂಚದಲ್ಲಿ ರೂಪುಗೊಂಡ ಭಂಗವನ್ನು ನೀನು ನೆನೆ. ನಿನ್ನ ತಮ್ಮನ ಕೆಂಪುರಕ್ತವನ್ನು ಕುಡಿಯುವಲ್ಲಿ ಭಯದಿಂದ ಬೆದರುತ್ತಾ ಬೆನ್ನಿತ್ತುದನ್ನೂ ಹಿಂದೆ ಇಕ್ಕಿದ ನಿನ್ನ ಮೊದಲಿನ ಕವಲುಭಂಗಗಳನ್ನೂ ನೆನೆ. ಕೌರವಾ! ... ಅರಗಿನ ಮನೆಯ ಬೆಂಕಿಯ ಸುಡುವಿಕೆಯಿಂದ, ವಿಷವಿಕ್ಷೇಪದಿಂದ ಲೇಪನವಾದ ಗುಪ್ತಾನ್ನದಿಂದ, ಕೃತಕದ್ಯೂತವಿನೋದದಿಂದ, ದ್ರೌಪದಿಯ ಕೇಶಾಂಬರಗಳನ್ನು ಎಳೆದುದರಿಂದ, ಧೃತರಾಷ್ಟ್ರನ ಮಗನೇ, ಪಾಂಡುರಾಜನ ಮಕ್ಕಳನ್ನು ಮೊದಲು ಕೊಲ್ಲಲು ಕೋರಿದೆ. ಕಳೆದ ಕಾಲವು ಲಯಕಾಲವಾಯಿತು. ನಿನಗೆ ಇನ್ನು ಅಂತ್ಯಕಾಲವಾಯಿತು!"

ಎಂಬುದಾಗಿ ಮರ್ಮೋದ್ಘಾಟನಮಾಡಿ ಮೂದಲಿಸಿದ ಅಷ್ಟರಲ್ಲಿ ಉರಗಧ್ವಜನು ನಿಂತು ಮುನಿದು ಅಷ್ಟರ ಮುಖವನ್ನು ನೋಡಿ, "ಈ ಇಬ್ಬರು ಮಾದ್ರೀತನೂಜರು ಇರಲಿ. ಅವರು ಇನ್ನೇನು ಮಾಡಿಯಾರು! ಧರ್ಮಜನೊಡನೆ ಕೂಡಿ ಈಗ ಭೀಮಸೇನನು ಯುದ್ಧಮಾಡಲಿ.

ಇಷ್ಟು ಜನ ಮಕ್ಕಳು, ಮೂವರು ಅಲ್ಲ. ಈ ನರನೂ ಬರಲಿ. ಯಮನ ಮಗ, ವಾಯುಪುತ್ರ, ಗಾಂಡೀವಧನ್ವಿ ಮೂವರಲ್ಲಿ ಒಬ್ಬನು ಬರಲಿ. ಅಥವಾ ಅಷ್ಟು ಜನರನ್ನೂ ಕೂಡಿಕೊಂಡು ಭೀಮನು ಬರಲಿ. ಸೋಲು ಕೊಡುತ್ತೇನೆ'' ಎಂಬುದಾಗಿ ಉರಗಧ್ವಜನು ಗರುಡಧ್ವಜನನ್ನು ಸಂಬೋಧಿಸಿ ನುಡಿಯಲು—

ವನರುಹನಾಭನು ದುರ್‍ಯೋಧನನು ಹೇಳಲಾಗಿ ಕೇಳಿ, "ವಿನಯವನ್ನೇ ಮೆರೆಯುವ ದುರ್‍ಯೋಧನನನ್ನು ನೀನು ನನ್ನಮುಂದೆ ನುಡಿಯುವುದೆ ಭೀಮಾ!'' ಎಂದು ಭೀಮಸೇನನನ್ನು ಗದರಿಸಿದನು.

ಹಾಗೆನ್ನಲು ಧರ್ಮನಂದನನು ಧೃತರಾಷ್ಟ್ರನಂದನನು ಮೊದಲು ಮಾಡಿದ ಅಧರ್ಮವನ್ನು ನೆನೆಯದೆ, ನಿರ್ಮಲವಾದ ಕ್ಷತ್ರಧರ್ಮವನ್ನು ನೆನೆದು, "ಯುದ್ಧ ಆಗದು. ಗುಣಯುತನಾಗು. ಮಹಾ ಭೋಗಿಯಾಗು. ನೀನು ಆಳುವ ಮಹೀಭಾಗವನ್ನೂ ಸಕಲ ಮಹೀಭಾಗವನ್ನೂ ನೀನೇ ಕೊಂಡು ಸುಖವಾಗಿರಬಾರದೆ! . . . ಈ ಧರಾಚಕ್ರವನ್ನೂ ಒಪ್ಪಿಕೊ. ವಿದ್ವೇಷವನ್ನು ಬಗೆಯದಿರು. ನಮ್ಮ ಐವರನ್ನೂ ನಿನ್ನ ಸೇವೆಗಿರಿಸಿಕೊ. ಕೆಟ್ಟುದನ್ನು ನೆನೆಯದಿರು. ನಾವು ಹೇಳಿದುದಕ್ಕೆ ಅನುಕೂಲವಾಗು" ಎನ್ನಲು,—

ಹರಿ ಎಂದನು: "ದುರ್‍ಯೋಧನ, ಧರ್ಮತನೂಜನು ಒಳ್ಳೆಯದನ್ನು ಹೇಳುತ್ತಾನೆ. ಆತನು ಹೇಳಿದುದನ್ನು ಮಾಡಿ, ನೀನು ಅರಸನಾಗಿ, ವಸುಮತಿಯನ್ನು ಆಳುವುದು ಯಾವ ದೋಷ? ಎನ್ನಲಾಗಿ"—

ಭೀಮಸೇನನು ಇಂತೆಂದನು: "ನೀನು ಐದು ಗ್ರಾಮಗಳಲ್ಲಿ ಸಂಧಾನಮಾಡಲು ಹೋದರೆ ಮೊದಲು ಒಲ್ಲದೆ, ಈ ಮಾನಧನನು ತನ್ನ ಮಕ್ಕಳೂ ತಮ್ಮಂದಿರೂ ಸಂಪೂರ್ಣವಾಗಿ ನಾಶವಾಗಲು ಸಂಧಿಯನ್ನು ಮಾಡುವನೆ?" ಎನ್ನಲಾಗಿ,—

ದುರ್‍ಯೋಧನನು ಭೀಮಸೇನನ ನುಡಿಯನ್ನೇ ಸಮರ್ಥಿಸಿ, "ಸೂರ್ಯನ ಮಗನ ನೇರ್ಪಿಗೆ ಅರ್ಜುನನನ್ನು ಮೊದಲು ಕೊಲ್ಲುವೆನು. ನನ್ನ ತಮ್ಮನ ನೇರ್ಪಿಗೆ ಅನಿಲಜನನ್ನು ಕೊಲ್ಲುವೆನು. ಕಮಲನಾಭ, ನೇರ್ಪಿಗೆ ನೇರ್ಪುಗೊಳ್ಳದೆ ಬಿಡುವುದಿಲ್ಲ!" ಎಂದು ಹೇಳಿ;—

"ನಾನೇ! ಮಧ್ಯಸ್ಥವನ್ನು ನುಡಿಯುವವನೇ! ನಿನಗೂ ಅವರಿಗೂ ಹೊಂದಿ ಬಾಳುವಿಕೆಯೆ! ಸಂಧಾನವೆ! ಸಂಧಿಯ ಮಾತನ್ನು ಮೊದಲೇ ದಾಟಿದೆ! ಇನ್ನು ಒಡಂಬಡುವೆಯು!" ಎಂದು ಹೇಳಿದ ಕಮಲನಾಭನ ಸಮಂಜಸಿಕೆಯಲ್ಲಿ ತನ್ನನ್ನು ತೆಗಳಿ ನುಡಿದುದಕ್ಕೆ ಸಹಿಸದೆ,—

"ಅಂದು ಜರಾಸಂಧನಿಗೆ ಹೆದರಿ, ಸೋತು, ಭೀಮನ ಮರೆಯನ್ನು ಹೊಕ್ಕು, ಅವನು ಕೊಂದುಕೊಡಲು, ಅಂದಿನಿಂದ, ಆಹಹ, ದೇವ, ನೀನು ದೊಡ್ಡವನಾದೆ! . . . . ವನವಾಸದಿಂದ ಮಲಿನನಾದ ಯಮತನಯ ನನ್ನು ಉಜ್ವಲಮಾಡಿ, ಗೋತ್ರದಿಂದ ಧವಳನಾದ ನನ್ನನ್ನು ತುಂಬಾ ಮಲಿನಮಾಡಿದೆ. ಕೃಷ್ಣ, ನಿನ್ನಂತೆ ಬಿಳುಪನ್ನು ಕಪ್ಪುಮಾಡುವವರುಂಟೆ! . . . ನೀನು ಸಮುದ್ರದಲ್ಲಿ ಒಬ್ಬ ನೀರುಹೆಂಗುಸನ್ನು ಪಡೆದ ಗರ್ವದಿಂದ 'ನಾನೂ ಲಕ್ಷ್ಮೀನಿಲಯನು' ಎಂದಿರುವೆ. ನಿನ್ನ ಸಿರಿಯ ಮಹಿಮೆಯ ಹುರುಳನ್ನು ನಾನರಿಯೆನೆ! . . .ಯದುಕುಲಜಲನಿಧಿಯಲ್ಲಿ, ಅಮೃತವೂ ನಂಜೂ ಒಡನೆ ಹುಟ್ಟುವಂತೆ ಪ್ರಸಿದ್ಧನಾದ ಹಲಾಯುಧನೂ ನೀನೂ ಹುಟ್ಟಿದಿರಿ. ಅದಕ್ಕೇ ಬಲರಾಮನು ಗುಣವಂತನಾದ ಮತ್ತೆ ನೀನು ನಿರ್ಗುಣಿಯಾದೆ" ಎಂದು ಹೇಳುವಷ್ಟರಲ್ಲಿ—

ಆ ಪ್ರಸ್ತಾವದಲ್ಲಿ, ಕೈಯಲ್ಲಿ ಹಲ ಮುಸಲಗಳುಳ್ಳವನು, ಮಧುವಿನಿಂದ ಪಾಟಲವಾದ ನೇತ್ರವುಳ್ಳವನು, ನೀಲವಸನನು, ಆ ಧವಳವಾದ ದೇಹದವನು, ಏಕಕುಂಡಲನು, ತಾಳೆಯ ಗುರುತಿನ ಬಲರಾಮನು ಕುರುಕುಲನೊಡನೆ ಕೂಡುವುದಕ್ಕಾಗಿ ಬಂದನು.

ಹಾಗೆ ಸಕಲ ಜಗತ್ತಿನ ಪವಿತ್ರವಾದ ತೀರ್ಥಜಲಗಳಿಂದ ಎಲ್ಲಾ ಪಾಪಗಳನ್ನು ಕಳೆದುಕೊಂಡ ಸಂಕರ್ಷಣನು ಸುಯೋಧನನಿಗೆ ಪುಣ್ಯ ಬರುವಂತೆಯೂ ಜಂಗಮ ಹಿಮಾಚಲವೇ ಬರುವಂತೆಯೂ ಬಂದು, ತಾವು ಅಷ್ಟು ಜನವೂ ಒಂದಾಗಿ ಗುಂಪುಗಟ್ಟಿ ನಿಂತ ಪಾಂಡುನಂದನರನ್ನೂ ಏಕಾಕಿಯಾಗಿ ನಿಂತ ಕುರುಕುಲಸ್ವಾಮಿಯನ್ನೂ ಕಂಡು, ದೇವಕೀನಂದನನ ವದನಾರವಿಂದವನ್ನು ನೋಡಿ, ವಿಸ್ಮಯಾಕ್ರಾಂತ ಚಿತ್ತನಾಗಿ, ಮನಸ್ಸಿನಲ್ಲಿ ನಿಶ್ಚಯಿಸಿ, ತನಗೆ ಎರಗಿದ ಫಣಿರಾಜಕೇತನನನ್ನು ಮನಃಪ್ರೀತಿಯಿಂದ ಹರಸಿ, ಗರುಡಕೇತನನನ್ನೂ ಪಾಂಡವ

ರನ್ನೂ ಹರಸಲೊಲ್ಲದೆ ಮುನಿದು, ತಮ್ಮನನ್ನೂ ಐವರನ್ನೂ ನೋಡಿ, "ಕೌರವಕುಲಚೂಡಾಮಣಿಯೊಡನೆ ಏನನ್ನು ಆಲೋಚಿಸಿದೆ?" ಎಂದು ನುಡಿದ ಹಲಾಯುಧನ ನುಡಿಗೆ ಚಕ್ರಾಯುಧನು ಇಂತೆಂದನು: "ಅಗ್ರಜಾತ, ಮುನಿಯದೆ ಕೇಳು. ಪಾಂಡುನಂದನರಿಗೆ ಐದು ಗ್ರಾಮಗಳನ್ನು ಬೇಡಲು ಹೋದೆನು. ದ್ರೋಣನೂ ಧೃತರಾಷ್ಟ್ರನೂ ಭೀಷ್ಮನೂ ಹೇಳಿದುದನ್ನು ಮಾಡಲಿಲ್ಲ. ನೀವು ಇದನ್ನು ಸುಯೋಧನನಲ್ಲೇ ಕೇಳಿ ನಂಬುವುದು. ಫಣಿರಾಜಕೇತನನು ಎರಡು ನುಡಿಯುವುದಿಲ್ಲ."

ಎನ್ನಲಾಗಿ, ದುರ್ಯೋಧನನು ಎಂದನು: "ಏಕೆ ಮುನಿಯುವಿರಿ? ಪಾಂಡುನಂದನರು ನಿರ್ದೋಷಿಗಳು. ಮೊದಲೇ ನಾನು ಒಲ್ಲೆನಲ್ಲವೆ! ಹೇಗೂ ಇವರಲ್ಲಿ ಸಂಧಾನವನ್ನು ಹೇಳುವೆನೆಂದರೆ—ಮಕ್ಕಳೂ ತಮ್ಮಂದಿರೂ ಹಲವರು ಸತ್ತರು. ಆ ದುಃಖವನ್ನು ಸೈರಿಸಲು ಎಷ್ಟಾದರೂ ಆಗುವುದೆಂದರೆ—ಹಗೆಯವರು ಇರಲಿ, ಸನ್ನದ್ಧನಾಗಿರುವೆನು. ಇವರ ನನ್ನ ಕಾಳಗನ್ನು ನೋಡುವುದಲ್ಲದೆ ಬೇರೆ ಇತರ ಮಾತಿಗೆ ಎಡೆಯಿಲ್ಲ. ಅವಧರಿಸಬೇಕು" ಎನ್ನಲಾಗಿ—

ಕೌರವೇಂದ್ರನನ್ನು ಮುಸಲಪಾಣಿ ಮನಸ್ಸಿನಲ್ಲಿ ಹೊಗಳಿದನು. ಹಾಗೆ ಹೊಗಳಿ, ರಾಜರಾಜನ ನಿರ್ವ್ಯಾಜವಾದ ಶೌರ್ಯಕ್ಕೆ ಸಂಕರ್ಷಣನು ಆಶ್ಚರ್ಯಪಟ್ಟು, ಬೇರೆ ಏನನ್ನು ಹೇಳಲೂ ತಿಳಿಯದೆ, ಧರ್ಮನಂದನಾದಿಗಳ ಮುಖವನ್ನು ನೋಡಿ, "ನಿಮ್ಮ ಐವರಲ್ಲಿ ಯಾರಾದರೂ ಈತನೊಡನೆ ಒಬ್ಬನೆ ಕಾದುವುದು. ಕಾದಿ ಗೆದ್ದಬಳಿಕ ದುರ್ಯೋಧನನು ನೆಲವನ್ನು ಆಳಲಿ. ಆತನಿಗೆ ಉಳಿದ ನಾಲ್ವರು ಬೆಸಕೈದು ಬಾಳುವಿರಿ" ಎಂದು ಹೇಳಲು—

ಭೀಮಸೇನನು ಎದುರಿಗೆ ಬಂದು, "ಧರ್ಮನ ಮಗನಿರಲಿ. ಅರ್ಜುನನಿರಲಿ. ಪ್ರಸಿದ್ಧರಾದ ಮಾದ್ರೀಸುತರಿರಲಿ. ಕೀಳಾದ ಶತ್ರುವನ್ನು ಹರಿದಿಕ್ಕುವುದಕ್ಕೆ, ಹಲಾಯುಧ, ಸಿದ್ಧನಾಗಿದ್ದೇನೆ. ನನಗೆ ಕೌರವನನ್ನು ತೋರಿಬಿಡು." ಎಂದು ಮರುನ್ನಂದನನು ರೋಹಿಣೀನಂದನನಿಗೆ ನುಡಿದು, ದ್ವಂದ್ವಯುದ್ಧಕ್ಕೆ ಧರ್ಮನಂದನಾದಿಗಳ ಮುಖವನ್ನು ನೋಡಿ, "ಹಗೆಗೆ ನಾನೇ ಮೊದಲಿಗನು. ಕೌರವನು ದೀರ್ಘಕಾಲದ

ಹಗೆ. ಅದಕ್ಕಾಗಿ ನೀವೆಲ್ಲ ದಾಯಿಗತನವನ್ನು ಇಲ್ಲಿ ತೋರತಕ್ಕದ್ದಲ್ಲ. ಮೊದಲಿಂದ ನನಗೆ ಸಮನಾಗಿದ್ದಾನೆ" ಎನ್ನಲಾಗಿ—

ಕುರುಕುಲವೆಂಬ ಅಚಲಕ್ಕೆ ಪ್ರಳಯಕಾಲದ ವಜ್ರಧರನೆನ್ನಿಸಿದ ಮಾರುತಿಗೂ ಪಾಂಚಾಲಿಯ ಕೊಂಕಿದ ಕೇಶಪಾಶವನ್ನು ಎಳೆದ ಪಾತಕ ಪ್ರಧಾನನಲ್ಲಿ ಹಿತವನ್ನಿಟ್ಟವನು ಎನ್ನಿಸಿದ ಫಣಿರಾಜಕೇತನನಿಗೂ ಧರ್ಮ ನಂದನಾದಿಗಳು ಇದ್ದು ಧರ್ಮಯುದ್ಧವನ್ನೇ ಏರ್ಪಡಿಸಿದಾಗ—ವನ ರುಹನಾಭನ ಬಲದೇವನ ಸಾಕ್ಷಿಯಲ್ಲಿದ್ದು ಕೌರವೇಶ್ವರನು ಆ ಭೀಮನ ಕೈಹೊಯ್ದರೆ, ಆ ಕುರುಪತಿಯು ಆದಟನ್ನು ಆ ದೇವತೆಗಳ ಗುಂಪು ಹೊಗಳಿದರು.

ಹಾಗೆ ಧರ್ಮಯುದ್ಧಕ್ಕೆ ಕೈಹೊಯ್ದಾಗ, ಎಷ್ಟು ಕುರುಕ್ಷೇತ್ರ ದಲ್ಲಿ ಅವಕಾಶವುಂಟೋ ಅಷ್ಟೂ ಬರಿದಿಲ್ಲದ ಹಾಗೆ ನೂರಾರು ಹೆಣ ಗಳಿಂದ ಒತ್ತಾಗಿ ತುಂಬಿಹೋಗಿರಲು, ಅನಿಲಸುತನು ರಣೋತ್ಸವದಿಂದ ತಾನೆ ಯುದ್ಧಭೂಮಿಯನ್ನು ಸವರಿದನು. ರಥವಿಲ್ಲದಿದ್ದರೂ ಜಂಘಾ ರಥದಿಂದ, ಸಹಾಯರು ಇಲ್ಲದಿದ್ದರೂ ಲೋಕಪ್ರಖ್ಯಾತವಾದ ಭುಜ ಬಲದ ಸಹಾಯದಿಂದ ಪೃಥ್ವೀಪತಿಯು ತಾನೆ ಕಾದಲು ಉದ್ಯುಕ್ತ ನಾದನು.

ಆಗ ಸುರರಾಜನೊಡನೆ ಅಷ್ಟದಿಕ್ಪತಿಗಳೂ ಮೂವತ್ತುಮೂರು ದೇವರುಗಳೂ ಪರಮಬ್ರಹ್ಮನೂ ಎಂಟು ನಾಗಕುಲದವರೂ ಚಂದ್ರ ಸೂರ್ಯರೂ ಪಾರ್ವತೀಶ್ವರನೂ ಷಣ್ಮುಖನೂ ಗಜೇಂದ್ರಮುಖನೂ ವಿದ್ಯಾಧರಾಧೀಶರೂ ಕುತೂಹಲದಿಂದ ಕೂಡಿದವರಾಗಿ ಗದಾಯುದ್ಧ ವನ್ನು ನೋಡಲು ನಭದಲ್ಲಿ ನೆರೆದಿದ್ದರು.

"ಹೊಂದಿಕೆಯಾದ ಏಕಾಂತದ ಕಾಳಗ ಉಂಟಾಯಿತು. ನಮ್ಮ ಈ ಗದಾಯುದ್ಧವನ್ನು ನೋಡುವುದಕ್ಕಾಗಿಯೇ ದೇವತೆಗಳು ಕೌತುಕ ದಿಂದ ನಭೋಭಾಗದಲ್ಲಿ ಬಂದಿರುವರು. ಮದಿಸಿದ ವೈರಿಯನ್ನು ಇಕ್ಕಿ, ಭೂವಲಯವನ್ನು ನಿಷ್ಕಂಟಕವಾಗಿ ಮಾಡುತ್ತೇನೆ" ಎಂದು ಕೌರವ ಕುಲವಿಲಯಕೇತುವಾದ ಸಾಹಸಭೀಮನು ಪ್ರತಿಜ್ಞೆಮಾಡಿ ಇದ್ದನು.

ಊರುಭಂಗ, ಕಿರೀಟಭಂಗ

ಹಾಗೆ ಸಮರದಲ್ಲಿ ಉತ್ಸುಕಚಿತ್ತನಾಗಿ ಸಾಹಸಭೀಮನು ದ್ರೋಣಾಚಾರ್ಯನಿಗೆ ಮನಸ್ಸಿನಲ್ಲಿ ನಮಸ್ಕಾರಮಾಡಿ, ದುರ್ಯೋಧನನು ಬಲದೇವನಿಗೆ ನಮಸ್ಕಾರಮಾಡಿ, ತಮಗೆ ಅನುರೂಪವಾದ ಉತ್ತಮ ಗದೆಗಳನ್ನು ಇಬ್ಬರೂ ಆಯ್ದುಕೊಂಡು, ಸ್ಥಿರವಾದ ಬದ್ಧಮತ್ಸರದಿಂದ ಭೀಕರವಾಗಿ ಹೆಣೆದ ಹುಬ್ಬುಗಳುಳ್ಳ ಅವರು, ಅಧಿಕವಾದ ಕೋಪದಿಂದ ಕೆಂಪಾದ ಕ್ರೂರನೇತ್ರಗಳುಳ್ಳವರು ಎನ್ನಿಸಿ ದೃಷ್ಟಿಯುದ್ಧ ಮಾಡಿದರು. ಅನಂತರ ಸ್ವಲ್ಪಸ್ವಲ್ಪ ಮುಂದೆ ಮೆಟ್ಟಿ, ಸ್ವಲ್ಪಸ್ವಲ್ಪ ತಮ್ಮ ಗದೆಗಳನ್ನು ನೀಡಿ, ಸ್ವಲ್ಪಸ್ವಲ್ಪ ತಿರುಗಿಸಿ, ಬಿಡದೆ, ಸ್ವಲ್ಪಸ್ವಲ್ಪ ತೂಗಿ ತೂಗಿ ನೂಕಿದರು. ಎಡದ ಅಡಿಯನ್ನು ಹೊಗಿಸುವ, ಬಲದ ಅಡಿಯನ್ನು ಹೊರಗಿಡುವ, ದಂಡೆಯನ್ನು ಚಾಚುವ, ಕೈನಡುಗದೆ ಗದೆಯನ್ನು ಬೀಸುವ ಆ ಭೀಮದುರ್ಯೋಧನರ ಬೆಡಗು ರಂಜಿಸಿತು. ಗದೆ ಗದೆಯನ್ನು ಘಟ್ಟಿಸಲು ಹುಟ್ಟಿದ ಕೆಂಡದ ಕಿಡಿಯ ಕುಂಡವು ಎಂಟು ದಿಕ್ಕುಗಳನ್ನೂ ತುಂಬಲು, ಪಾದದ ಧೂಳಿ ಗಗನದಲ್ಲಿ ಒದಗಲು, ಸುರರು ಬೆದರುವಂತೆ ಕಡುಗಲಿಗಳು ಕಾದಿದರು. ಅಡಿಯನ್ನು, ತೊಡೆಯನ್ನು, ಹಿರಿಯತೊಡೆಯನ್ನು, ಹಿಂಭಾಗವನ್ನು, ಎದೆಯನ್ನು, ಹೆಗಲನ್ನು, ಮುಡುಹನ್ನು, ಬೆನ್ನನ್ನು, ಕೊರಲನ್ನು, ನಡುನೆತ್ತಿಯನ್ನು ಒಬ್ಬರು ಒಬ್ಬರನ್ನು ಎತ್ತಿ ಹೊಯ್ದರು. ದಾರುಣವಾದ ರಕ್ತದ ಮುಖದ ಎರಡು ಸಿಂಹಗಳಿಗೆ, ಹೊಸದಾಗಿ ಚಿಗುರೊಡೆದ ಕಾಡಿನ ಎರಡು ಕಿಂಶುಕವೃಕ್ಷಗಳಿಗೆ, ಧಾತುಸಹಿತವಾದ ಎರಡು ಪರ್ವತಗಳಿಗೆ, ಸಿಂದೂರಿತವಾದ ಎರಡು ಗಂಧಸಿಂಧುರಗಳಿಗೆ ಎಣೆಯೆನ್ನುವಂತೆ ರಕ್ತದಲ್ಲಿ ನೆನೆದ ಮೂರ್ತಿಗಳಾದ ಕೌರವರಾಜನೂ ಕುರುಕುಲಾಂತಕನೂ ಪರಾಕ್ರಮದಿಂದ ಕಾದಿದರು.

"ಕರಿಯನ್ನು ನುಂಗಿ, ಕಳಿಂಗನನ್ನು ನೊಣೆದ ದರ್ಪಕ್ಕೆ—ಒಂದು ಕೋ. ನನ್ನ ಸಹೋದರರನ್ನು ಕೋಪದಿಂದ ತಿಂದುದಕ್ಕೆ—ಎರಡು ಕೋ. ದುಶ್ಶಾಸನನ ಉರಃಸ್ಥಲದಿಂದ ಚಿಮ್ಮಿದ ರಕ್ತಜಲವನ್ನು ಆರ್ದು

ಹೇರಿದ ಮುನಿಸಿಗೆ—ಮೂರು ಕೋ." ಎಂದು ಮತ್ಸರದಿಂದ ಲೆಕ್ಕಿಸದೆ ದುರ್ಯೋಧನನು ಗದೆಯನ್ನು ಎತ್ತಿ ಭೀಮನನ್ನು ಹೊಯ್ದನು

ಹಾಗೆ ಮುಟ್ಟಿ ಮೂದಲಿಸಲು, "ಇದು ಅರಗಿನ ಮನೆಯ ಉರಿಗೆ! ಇದು ವಿಷಮ ವಿಷಾನ್ನಕ್ಕೆ! ಇದು ಆ ನಾಡ ಜೂಜಿಗೆ! ಇದು ಪಾಂಚಾಲೀ ಪ್ರಪಂಚಕ್ಕೆ! ಇದು ಆ ಕೃತಕಸಭಾಲೋಕನ ಭ್ರಾಂತಿಗೆ!" ಎಂದು ಲಕ್ಷಿಸದೆ ಭೀಮಸೇನನು ಕೋಪದಿಂದ ಕಾಲ್ಗಳನ್ನು, ತೋಳ್ಗಳನ್ನು, ಅಗಲವಾದ ಎದೆಯನ್ನು, ಕೆನ್ನೆಯನ್ನು, ನೆತ್ತಿಯನ್ನು, ಐದು ದುರ್ನಯ ಗಳಿಗೆ ಐದು ಎಡೆಯನ್ನು ತನ್ನ ದೊಡ್ಡ ಗದಾದಂಡದಿಂದ ಹೊಯ್ದನು.

ಹಾಗೆ ಹೊಯ್ದು ಒಂದನ್ನೂ ಬಗೆಯದೆ, ಚರಣಗಳಿಂದ ಆಕ್ರಮಿ ಸಲ್ಪಟ್ಟ ಮಹೀಮಂಡಲವು ಅದಿರುವಂತೆ, ಭುಜಗಳಿಂದ ಆಕ್ರಮಿಸಲ್ಪಟ್ಟ ದಿಗ್ಗಜಗಳ ಗುಂಪು ದಿಕ್ಕುಗಳ ಗೋಡೆಯಿಂದ ಹಿಮ್ಮೆಟ್ಟುವಂತೆ, ಗದೆ ಯಿಂದ ಆಕ್ರಮಿಸಿಲ್ಪಟ್ಟು ಗಿರ್ರನೆ ತಿರುಗುವ ವಿದ್ಯಾಧರರ ಸಮೂಹವು ತಮ್ಮ ವಿಮಾನಗಳನ್ನು ದೂರದೂರವಾಗಿ ಇರಿಸುವಂತೆ, ಭೀಮ ದುರ್ಯೋ ಧನರ ಸಮರವು ಭೈರವಾಡಂಬರದಿಂದ ಕಲ್ಪದ ಕೊನೆಯವರೆಗೆ ನಡೆ ಯಿತು. ಇವರು ಸಮವಾದ ಕಾರ್ಯಮಾಡುವವರು, ಸಮವಾದ ಸತ್ತ್ವ ವುಳ್ಳವರು, ಸಮವಾದ ವಿದ್ಯೆಯುಳ್ಳವರು. ಸಮರದಲ್ಲಿ ಪರಸ್ಪರವಾದ ಭುಜವಿಕ್ರಮದವರು ಇವರು—ಎನ್ನುವಂತೆ ಚಕ್ರಭ್ರಮಣದಿಂದ ಒಬ್ಬರು ಒಬ್ಬರನ್ನು ಜಯಿಸಲಾರದೆ ಹೋದರು.

ಹಾಗೆ ನೆರಳಿನಲ್ಲಿ ಹೋರಾಟವಾಡುವಂತೆ ಒಬ್ಬರು ಒಬ್ಬರನ್ನು ಗೆಲ್ಲಲು ಆಗದಿರಲು, ದುರ್ಯೋಧನನು ತುಂಬಾ ಮುನಿದು, ಕುರು ರಾಜನು ವಿದ್ಯಾಧರಕ್ರಿಯೆಯಿಂದ ಅಂಬರಕ್ಕೆ ನೆಗೆದು, ಛತ್ರಾಕಾರದಿಂದ ಗದೆಯನ್ನು ಚಿತ್ರವಿಧವಾಗಿ ಬೀಸಲು, "ನಿನಗೆ ಜಗತ್ತು ಏಕಚ್ಛತ್ರವು" ಎಂದು ಮರುತ್ಪುತ್ರನಿಗೆ ತಿಳಿಸುವ ಹಾಗೆ ಆ ಕುರುಪುತ್ರನು ಇದ್ದನು.

'ಹಾಗೇ ಮೂದಲಿಸದೆ ಇರಿಯುವುದು ವೀರನ ಚರ್ಯೆಯಲ್ಲ' ಎಂದು ಮುಟ್ಟಿ ಮೂದಲಿಸಿ, ಅವಕಾಶವನ್ನು ಗಮನಿಸಿ, ಕುರುಪತಿಯು ಬರ ಸಿಡಿಲು ಎರಗುವ ಹಾಗೆ ಎರಗಿ ಹೊಯ್ದೊಡನೆ, ಪವನಜನು ಮೈಮರೆತು, ಅದೇಕೆ ಎಂದು ಅರಿಯದೆ ಮತಿವಿಕಲನಾಗಿ ಮೂರ್ಛೆಗೆ ಸಂದನು.

ಹಾಗೆ ವಜ್ರದ ದೊಡ್ಡ ಏಟಿನಿಂದ ನೀಲಾಚಲವೆ ಬೀಳುವ ಹಾಗೆ ಬಿದ್ದು ಮೂರ್ಛೆಹೋಗಿದ್ದ ಭೀಮಸೇನನ ಸ್ಥಿತಿಯನ್ನು ಕಂಡು, ಗಾಂಡೀವಿ ಕೋಪಾತುರಾಟೋಪವನ್ನು ತಾಳಿ, "ಎಲ್ಲಿಯ ಬಲದೇವ? ಮತ್ತೆ ಎಲ್ಲಿಯ ಸತ್ಯವ್ಯವಸ್ಥೆ? ದುರ್ಯೋಧನನನ್ನು ಕೊಲ್ಲದಿರೆನು!" ಎಂದು ಭಾರತಮಲ್ಲನು ಗಾಂಡೀವಕ್ಕೆ ಕೈಯನ್ನು ಚಾಚಿದನು . . . . "ಬಲರಾಮ ಮುನಿದು ಏನು ಮಾಡುತ್ತಾನೆ? ಕೃಷ್ಣನು ಮುನಿದು ಏನು ಮಾಡುತ್ತಾನೆ? ಧರ್ಮಜನು ಮುನಿದು ಏನು ಮಾಡುತ್ತಾನೆ? ಮುನಿದವರನ್ನು ಇಕ್ಕುವೆವು!" ಎಂದು ನಕುಲಸಹದೇವರುಗಳು ಇರಿಯಲು ಉಮ್ಮಳಗೊಂಡರು . . . "ಶತ್ರುವಿಗೆ ಅನುಕೂಲವಾಯಿತು. ಮರುತ್ ಸುತನಿಗೆ ಅಳಿವಾಯಿತು. ಅರ್ಜುನಾದಿಗಳು ಮೂವರೂ ಮುನಿದರು. ನನ್ನ ಸತ್ಯಕ್ಕೆ ಈಗ ಸೋಲಾಯಿತು" ಎಂದು ಧರ್ಮಜನು ಚಿಂತಿಸಿದನು. . . ಅರಳಿದ ಹಲಧರನ ಮುಖವನ್ನೂ ತಲೆಯನ್ನು ತಗ್ಗಿಸಿದ್ದ ಧರ್ಮತನಯನ ಮುಖವನ್ನೂ ಜಲರುಹನಾಭನು ಕಂಡು, ಎದೆಕಲಕಿ, ಕಣ್ಣಜರುಬಿನಿಂದ ಗಾಂಡಿವಿಯನ್ನು ಜರುಬಿದನು.

ಆ ಪ್ರಸ್ತಾವದಲ್ಲಿ ಧಾತುವಿನ ಜಲಪಾತದ ಪರ್ವತ ಬೀಳುವಂತೆ ಬಿದ್ದಿದ್ದ ಹಗೆಯನ್ನು ನೋಡಿ, "ಯುದ್ಧದ ಸಂದರ್ಭದಲ್ಲಿ ಬಿದ್ದವನನ್ನು ಇರಿಯಲಾಗದು ಎನ್ನುತ್ತಾರೆ, ಅಲ್ಲವೆ!" ಎಂದು ಪೊಡವೀಶನು ಅಂಬರ ತಲದಲ್ಲಿ ಗದೆಯನ್ನು ಎತ್ತಿ ತಿರುಗಿಸಿದನು. ಆ ಗದೆಯ ಗಾಳಿಯ ತಂಪು ಮೈಮರೆತ ಭೀಮನನ್ನು ಎಚ್ಚರಿಸಿತು.

ಹಾಗೆ ಮೂರ್ಛೆಯಿಂದ ಮಾರುತಿ ಎಚ್ಚತ್ತಾಗ, ಹೊಟ್ಟೆಯಲ್ಲಿ ಹೂವುಳ್ಳ ಆತನು ರಾಗದಿಂದ ತೊಡೆಯನ್ನು ಹೊಯ್ದು ಆರುವ ನೆವದಿಂದ "ಈತನಿಗೆ ಮರ್ಮ ಈ ಎಡೆ" ಎಂದು ತೋರಿಕೊಡಲು; ಪರಮ ಪಂಡಿತನಾದ ಪವನಸುತನು "ಮರ್ಮವು ಇಂಥದು'' ಎಂದು ಆಗ ತಿಳಿದು, ಕೈಯಿಂದ ನೆಲವನ್ನು ಮೀಟಿ, ಧರಾತಲದಲ್ಲಿ ಚಾಚಿದ್ದ ತನ್ನ ತೀವ್ರಗದೆಯನ್ನು ಕಂಡು ಎತ್ತಿಕೊಂಡು, ಅಂಬರಸ್ಥಲದಿಂದ ಸಿಡಿಲ ಏಳ್ಗೆಯಿಂದ ಎರಗಿ ಹೊಯ್ಯುವಾಗ—ಕಲಿಯಾದ ಸತ್ತಿಗನು ಮುನಿದು ಕುರುರಾಜನ ಕಠಿನವಾದ ಊರುದಂಡಗಳನ್ನು ಗದಾದಂಡದಿಂದ ಹೊಡೆದನು.

ತೊಡೆಯನ್ನು ಹೊಡೆದರೆ, ಮುರಿದು ನೆಟ್ಟನೆ ಬೀಳುತ್ತ, ನೆಲವನ್ನು ಕಚ್ಚಿ, "ನಾನು ಇದನ್ನು ಹೇಗೂ ಬಿಡೆನು" ಎಂಬ ರೀತಿಯಲ್ಲಿ ಕುಲಗಿರಿ ಬೀಳುವ ಹಾಗೆ ಬಿದ್ದು, ಕೌರವೇಂದ್ರನು ಮಡಿದನು.

ಹಾಗೆ ದಿಗ್ಗಜಗಳ ಸೊಂಡಿಲನ್ನು ಅನುಕರಿಸುವ ತನ್ನ ಭುಜಸ್ತಂಭಗಳಿಂದ ಕುರುಕುಲಮಹೀಶನ ಬಾಳೆಯ ಕಂಬಗಳನ್ನು ಅನುಕರಿಸುವ ತೊಡೆಗಳನ್ನು ಮುರಿದು, ಕ್ರಮವಿಲ್ಲದೆ ಧೂಳಿನಲ್ಲಿ ಹೊರಳಿಸಿ, ತಾನು ಮೊದಲು ನುಡಿದ ಊರುಭಂಗಪ್ರತಿಜ್ಞೆಯನ್ನು ತೀರಿಸಿ, ಮಕುಟಭಂಗದ ಪ್ರತಿಜ್ಞೆಯನ್ನು ತೀರಿಸಲೆಂದು ಮಹಾ ಉತ್ಸಾಹವನ್ನು ಹೊಂದಿ, "ಇದು ಲೋಕಾಧಿಪತ್ಯದ ಸ್ನಾನೋದಕದಿಂದ ಪವಿತ್ರವಾದುದಲ್ಲವೆ! ಹೀಗೆ ಇದು ಬಿಳಿಯ ಕೊಡೆಯ ನೆಳಲಿಗೆ ಗುರಿಯಾದುದಲ್ಲವೆ! ಹೀಗೆ ಇದು ಯಾರಿಗೂ ಬಾಗದು ಅಲ್ಲವೆ! ಈ ತಲೆಗೆ ತಕ್ಕುದನ್ನು ಈಗಲೇ ಮಾಡುವೆನು!" ಎಂದು ಕೋಪದಿಂದ ಒದೆಯುವುದಕ್ಕಾಗಿ ಹತ್ತಿರಬರಲು—

ಬಲದೇವಾದಿಗಳು "ಆಗದು! ಒದೆಯಲಾಗದು! ಏಕಾದಶ ಅಕ್ಷೋಹಿಣೀಬಲದ ಲಕ್ಷ್ಮೀಪತಿಯನ್ನು ಪರಾಭವಿಸದಿರು! ಛೀ! ತಕ್ಕುದಲ್ಲ!" ಎಂದು ಮಾರ್ಕೊಂಡರೂ ಬಿಡದೆ, ಕೌರವ್ಯರಾಜೇಂದ್ರನ ರತ್ನಮಂಡಲದ ರಶ್ಮಿಗಳನ್ನು ಪ್ರಕಟಿಸಿ ಜ್ವಲಿಸುವ ಮಕುಟವನ್ನು ಭೀಮಸೇನನು ವಾಮಾಂಘ್ರಿಯಿಂದ ಒದೆದನು. ಒದೆದ ಭರದಿಂದ ಉಜ್ವಲಿಸಿದ ದುರ್ಯೋಧನನ ಮಕುಟದ ಮಣಿಗಣವು ಇರಿವಬೆಡಂಗನ ವ್ಯಾಪಿಸಿದ ಕೋಪಾಗ್ನಿದಹನದ ತೋರಕಿಡಿಗಳ ಹಾಗೆ ಎಲ್ಲ ಕಡೆಗೂ ಕೆದರಿದುವು.

ಹಾಗೆ ಗುಣರತ್ನಾರ್ಣವನು ಪ್ರತಿಜ್ಞಾಪೂರ್ಣನೂ ಆಗಲು, "ತ್ರಿದಶೇಂದ್ರನು ದೈತ್ಯನಲ್ಲಿ ತಾಗಿ ಇರಿದ ಸಮರವನ್ನು ನೋಡಿದೆ. ರಾಮಚಂದ್ರನು ತ್ರಿದಶೇಂದ್ರನ ಶತ್ರುವಿನಲ್ಲಿ ತಾಗಿ ಇರಿದ ಸಮರವನ್ನು ನೋಡಿದೆ. ಗುರುತಿನ ಗಂಡನಾದ ಸಾಹಸಾಂಕನಿಗೆ ಎಣೆಯ ಸುಭಟರನ್ನು ನಾನು ಇದು ಮೊದಲು ಕಂಡಿಲ್ಲ" ಎಂಬುದಾಗಿ ಆ ನಭೋಭಾಗದಲ್ಲಿ ದೇವತೂರ್ಯಧ್ವನಿಗಳು ಎಸೆಯಲು ಬ್ರಹ್ಮಪುತ್ರನಾದ ನಾರದನು ಹಾಗೆ ಹೇಳಿದನು. ಸುರಾಂಗನೆಯರು ಹೂವಿನ ರಾಶಿಯನ್ನು

ಸುರಿದರು, ಸುರದುಂದುಭಿಗಳು ಮೊಳಗಿದುವು, ಸುರರೂ ಪರಮಾಶೀರ್ವಚನಪರಂಪರೆಯಿಂದ ಸತ್ತಿಗನನ್ನು ಮೆಚ್ಚಿ ಹೊಗಳಿದರು.

ಬಲದೇವನು, ಭೀಮನ ಭುಜಬಲದ ಮತ್ಸರವು ಮನಸ್ಸನ್ನು ಕದಡಲು, 'ಕುರುಪತಿಯನ್ನು ಎದುರಿಸಿ ಪರಿಭವಿಸಿದನು' ಎಂದು ಅಳತೆಯಿಲ್ಲದೆ ಮುಳಿದು, ಕೆರಳಿ, ಕಿಚ್ಚೆದ್ದು, ತನ್ನ ತಮ್ಮನನ್ನು ನೋಯಿಸಲಾರದೆಯೂ ದುರ್ಯೋಧನನಿಗೆ ಆದ ಅವಸ್ಥೆಯನ್ನು ನೋಡಲಾರದೆಯೂ ದ್ವಾರಾವತಿಗೆ ಹೋದನು.

ಅಷ್ಟರಲ್ಲಿ ಇತ್ತ, ಮರುತ್ಪುತ್ರನು ಭೂಪತಿಗೆ ತಿಳಿಸಿ, ಸುದ್ದಿಯನ್ನು ಕಳಿಸಿ, ಜಗತ್ತನ್ನು ಒಂದೆ ಕೊಡೆಯಲ್ಲಿ ಮಾಡಿಕೊಂಡ ಶತ್ರುವಿನ ಕ್ಷತ್ರಿಯ ಕುಲಕ್ಕೆ ಕಾಲರಾತ್ರಿಯಾದ ದ್ರೌಪದಿಯನ್ನು ತೋರಿಸುವುದಕ್ಕಾಗಿ ಕರೆಸಿ, "ಮುನಿಸಿನಿಂದ ನಂಜಿಕ್ಕಿ ಕೊಂದ, ಅಂದಿನ ಅರಗಿನ ಮನೆಯಲ್ಲಿ ಸುಟ್ಟ, ಮೋಸದಿಂದ ಭೂತಲವನ್ನು ಜೂಜಾಡಿ ಗೆದ್ದ, ಅಂದಿನ ನಿನ್ನ ಕಬರೀನೀವಿಬಂಧಗಳನ್ನು ಬಾಹುಬಲದಿಂದ ತಮ್ಮನಿಂದ ತೆಗೆಯಿಸಿ ನಡೆದ ನೀಚನ, ದ್ರೋಹನ, ಸಂಚಲನ, ಚಂಡಾಲನ, ಪಾತಕನ ಸ್ಥಿತಿಯನ್ನು ನೋಡು, ಪಂಕೇಜವಕ್ತ್ರೇ! . . . ಇಲ್ಲಿ ಅರಸನು ದೀಕ್ಷಿತನು. ನಾವು ನಾಲ್ವರೂ ಋತ್ವಿಜರು. ಯುದ್ಧವೆಂಬ ಯಜ್ಞದಲ್ಲಿ ಮುರಹರನು ತಾನು ಉಪದೇಶಕನು. ನೀನು ವ್ರತಾಚರಣವನ್ನು ಹಿಡಿದು ಬೆಳಸಿದವಳು. ನಿನ್ನ ಪರಿಭವವೇ ಸಂಚಾರಕವು. ಕೌರವೇಶ್ವರನಾದ ಈತನು ಪಶುವಾಗಲು, ಇವನನ್ನು ಕೋಪಾಗ್ನಿಯಿಂದ ಹೋಮಮಾಡಿದೆನು, ಅಗ್ನಿಜೇ! . . . ಕೌರವ್ಯನ ಹಸಿಯ ಮಾಂಸವೆಂಬ ಹವ್ಯದಿಂದ ನನ್ನ ಕೋಪವೆಂಬ ಹವ್ಯವಹಕ್ಕೆ ಒಳ್ಳೆಯ ಹೋಮವಾಯಿತು. ದುರ್ವಹನಾದ ದುರ್ಯೋಧನನ ದೇಹಪ್ರಹರಣದ ರಕ್ತದಿಂದ ಅವಭೃತಸ್ನಾನವಾಯಿತು." ಎಂದು ಭೀಮನು ಯಾಜ್ಞಸೇನಿಗೆ ಆದಿತ್ಯನ ಸಾರಥಿಯಿರುವಂತೆ ತನ್ನ ಎರಡು ತೊಡೆಗಳನ್ನು ಕಳೆದುಕೊಂಡಿದ್ದ ದುರ್ಯೋಧನನನ್ನು ತೋರಿ, "ಹಗೆ ಮಡಿಯಿತು. ಮುಡಿ" ಎನ್ನಲು; ನಗುಮುಖದಿಂದ ಪಾಂಚಾಲಿ "ಸತ್ತಿಗ! ಹಲವು ಕಾಲ ಅಭ್ಯಾಸವಿಲ್ಲದ್ದರಿಂದ ನಾನು ಮರೆತೆ. ಹಗೆಯನ್ನು ಮಡಿಯಿಸಿದೆ, ನೀನೆ ಮುಡಿಯಿಸಬೇಕು" ಎಂದು ತನ್ನ ಕೈಯನ್ನು ಹಿಡಿದು ತೆಗೆಯಲು, "ಹಾಗೇ ಮಾಡುವೆನು" ಎಂದು ಆಕೆಯ ವೇಣೀಸಂಹಾರವನ್ನು ತಾನೇ ಮಾಡಿ—

"ಕೃಷ್ಣೇ! ಇದರಲ್ಲಿ ಮೂರ್ಧಾಭಿಷಿಕ್ತರು, ಮಣಿಮುಕುಟಧರರು, ಬಾಹುಬಲದಲ್ಲಿ ಅಗ್ರ್ಯರಾದವರು, ಕದನದಲ್ಲಿ ಪ್ರೋಚ್ಚಂಡವಾದ ದಂಡಕ್ರಮದಿಂದ ರಿಪುಕ್ಷತ್ರಿಯರನ್ನು ಜಯಿಸಿದವರು, ವೀರಲಕ್ಷ್ಮಿಗೆ ಮನೆ

ಯಾದವರು, ಸೋಮಾಮೃತವನ್ನು ರುಚಿನೋಡಿ ಅನುಭವಿಸಿದ ಮುಖವುಳ್ಳವರು ಹಿಂದೆ ನಾಶವಾದರು. ನೋಡು, ಈ ನಿನ್ನ ಕೇಶಪಾಶವು ಕುರುಪತಿಗೆ ಯಮಪಾಶವಾಯಿತಲ್ಲವೇ !" ಎಂದು ಹೊಗಳಿ ಮಾಂಗಲ್ಯಮಾಲೆಯಿಂದ ಅಲಂಕಾರಮಾಡಿದನು.

ಆಗ ಹನ್ನೆರಡು ವರ್ಷ ಆಲಸದೆ ಭಂಗದ ಕೂಳುಂಡು, ಬದುಕಿ, ದುಃಖ ಹಿಂಗಿದೊಡನೆ, ಕಾಳಿಕೆ ಹಿಂಗಿದ ಹೊನ್ನಿನ ರೀತಿಯಂತೆ, ಆ ಕಾಂತೆ ಕಂಗೊಳಿಸಿದಳು.

ಹಾಗೆ ಇದ್ದ ಅಗ್ನಿಪುತ್ರಿಯ ಪಾರಿಜಾತಪಲ್ಲವದಂತೆ ಉಲ್ಲಾಸಗೊಂಡು ಹಿತವಾಗಿ ಕೋಮಲವಾದ ಕರತಲದ ಸ್ಪರ್ಶನದಿಂದಲೂ ಕಿವಿಯ ಕೊನೆಯಲ್ಲಿ ವಿಶ್ರಮಿಸಿ, ಅರಳಿದ ಸುಂದರವಾದ ಇಂದೀವರಕುಸುಮಮಾಲೆಯನ್ನು ಅನುಕರಿಸುವ ಕಟಾಕ್ಷದಿಂದಲೂ ಸಮರಪರಿಶ್ರಮವನ್ನು ಕಳೆದುಕೊಂಡವನಾಗಿ, ಗುರುಗಳ ಪಾದಾಂಬುರುಹಕ್ಕೆ ಬಗ್ಗಿ ನಮಸ್ಕರಿಸಿ ಹೇಳುತ್ತಾನೆ: "ಹರಿ, ಕೇಳು. ಧರ್ಮಜಾ ಕೇಳು. ಅರ್ಜುನ, ಕೇಳು. ಮಾದ್ರೀಸುತರುಗಳು ಇಬ್ಬರೂ ಕೇಳಿ. ಕೌರವನನ್ನು ಕೊಲ್ಲುವ ವ್ಯಾಪಾರದಲ್ಲಿ ದ್ರೋಹದುರ್ಧರನಾದ ದುಶ್ಶಾಸನನ ರಕ್ತಪಾನದ ವಿಧಿಯೂ ಪಾಂಚಾಲಿಯ ತಲೆಗೂದಲನ್ನು ಕಟ್ಟಿದ್ದೂ ಕುರುರಾಜನ ಊರು ಕಿರೀಟಭಂಗವೂ ಭೀಮನ ಪ್ರತಿಜ್ಞಾಕ್ಷರವು ಇಷ್ಟೂ ಆಯಿತಲ್ಲವೆ!" ಎಂದು ಭೇರಿಯನ್ನು ಬಾರಿಸಿದಂತೆ ಗಂಭೀರಧ್ವನಿಯಿಂದ ಗರ್ಜಿಸಲು—

ಹರಿಯೂ ಧರ್ಮಜನೂ ಅರ್ಜುನನೂ ಮಾದ್ರಿಯ ಮಕ್ಕಳೂ ಕೃಷ್ಣೆಯೂ ಆ ಭೀಮನ ಬಾಹುದಂಡವನ್ನು ಪರಮಾನಂದದಿಂದ ತೀರ್ಥಜಲದಿಂದ ತೊಳೆದು, ಕಸ್ತೂರಿ ಚಂದನ ಅಗುರು ಕೇಸರಿಗಳ ಕೆಸರಿನಿಂದ ತೊಡೆದು, ಕೇಯೂರವೇ ಮೊದಲಾದ ಭೂಷಣಗಳ ರಾಶಿಯಿಂದ ಅಲಂಕರಿಸಿ ಕಟ್ಟಿ ಪೂಜಿಸಿದರು.

ಆ ಪ್ರಸ್ತಾವದಲ್ಲಿ ಶತ್ರುಗಳ ಮಾಂಸದಿಂದ, ಅನ್ಯರ ರಕ್ತವೆಂಬ ಮಧುವಿನಿಂದ, ವಿದ್ವೇಷಿಗಳ ಶಿರೋಬ್ಜಗಳಿಂದ, ಅಸಮರಾದ ಅಮಿತ್ರರ ಕಠೋರವಾದ ದಂತಕುಲದಿಂದ, ರೌದ್ರವಾದ ಅರ್ಚನಾದ್ರವ್ಯದಿಂದ

ಪ್ರೀತಿಸಿ ಆಗ ಪ್ರದಕ್ಷಿಣೆ ಬಂದು, ಬಗ್ಗಿ ನಮಸ್ಕರಿಸಿ, ಯುದ್ಧಜಯದಲ್ಲಿ ಉದ್ದಂಡನಾದ ಸಾಹಸಭೀಮನು ತಾನೇ ಗದಾದಂಡವನ್ನು ಪೂಜಿಸಿದನು.

ಹಾಗೆ ಭುಜದಂಡವನ್ನೂ ಗದಾದಂಡವನ್ನೂ ಪೂಜಿಸಿ, ಉತ್ಸವಕ್ಕೆ ಸಂಬಂಧಿಸಿದ ಸ್ವನಗಳಿಂದ ರಮ್ಯವಾದ ತನ್ನ ಶಿಬಿರವನ್ನು ಅತ್ಯುತ್ಸಾಹದಿಂದ ಪ್ರವೇಶಿಸಿ, ಶ್ರೀಸೋಮವಂಶವೆಂಬ ಕಮಲಗಳಿಂದ ಬೆಳಗುವ ಸರಸ್ಸಿಗೆ ಹಂಸನಾದ ಸಾಹಸಭೀಮನು, ಶ್ರೀ ಸತ್ಯಸಿಲಯನು, ತನ್ನ ಅಗ್ರಜಾನುಜರೊಡನೆ ಅಧಿಕ ವಿಲಾಸದಿಂದ ಸುಖವಾಗಿದ್ದನು.

ಅಶ್ವತ್ಥಾಮನ ಅಸಾಧ್ಯಕ್ರೋಧ

ಅಷ್ಟರಲ್ಲಿ ಚಕ್ರಿ ತಾನು ಕಾಲಚಕ್ರವರ್ತಿಯಾದುದರಿಂದ ಅಸಮ ಸಾಹಸದಿಂದ ಉದ್ದಾಮನಾದ ಅಶ್ವತ್ಥಾಮನ ಬರವನ್ನು ಅರಿತು, ಅನಾಗತವಾದ ಬಾಧೆಯನ್ನು ಪರಿಚ್ಛೇದ ಮಾಡಲೆಂದು ಧೃಷ್ಟದ್ಯುಮ್ನ ಶಿಖಂಡಿ ಚೇಕಿತಾನ ಯುಧಾಮನ್ಯು ಉತ್ತಮೌಜಸ್ಸುಗಳನ್ನೂ ಶ್ರುತಸೋಮಕಪ್ರಮುಖರಾದ ಪಾಂಡವಸೂನುಗಳಾದ ಪಂಚಪಾಂಡವರನ್ನೂ ಬೀಡಿಗೆ ಕಾವಲುಹೇಳಿ, ಹಸ್ತಿ ಅಶ್ವ ರಥ ಪದಾತಿ ಬಲದೊಡನೆ ಹಸ್ತಿನಾಪುರಕ್ಕೆ ಕಳುಹಿ, ಪಾಂಡವರೈವರನ್ನೂ ಒಡಗೊಂಡು, ಸಕಲ ವನಚರ ಜಲಚರ ಕಂಜ ಕುಮುದ ಇಂದೀವರ ಮಾಲೆಗೆ ನಿಲಯವಾದ ನೀಲಾಚಲಕ್ಕೆ ನೀಲಾಂಗನು ಹೋದನು.

ಅಷ್ಟರಲ್ಲಿ ಇತ್ತ, ಗಾಂಗೇಯನು ತಿಳಿಸಲು, ಕೌರವೇಶ್ವರನು ಇದ್ದ ಎಡೆಯನ್ನು ಅಶ್ವತ್ಥಾಮನು ಅರಿತು—ಕೊರಳ ಕಪ್ಪು, ಶಿರದ ಚಂದ್ರ, ಹಣೆಯ ಉರಿಗಣ್ಣು, ಕೈಯಲ್ಲಿ ಹಿಡಿದ ಧನುಸ್ಸು, ವೃಷಭದ ಚಿಹ್ನ ಇವುಗಳುಳ್ಳವನು, ಕೃಪಕೃತವರ್ಮರೊಡನೆ ಅಶ್ವತ್ಥಾಮನು ಮುನಿದುಬಂದನು.

ಆಗ ಹೊಳೆಯುವ ಚಿನ್ನದ ಚಾಮರವೂ ಬಿಳಿಯ ಚಾಮರವೂ ಕೈಗಳಲ್ಲಿ, ಮನಸ್ಸು ಚಲಿಸಿ, ಮಾಸಿ ಕೆದರಿದ ಕುರುಳು, ತನ್ನ ಚಿಕ್ಕದಾದ ಮುಖದಿಂದ ವಿಲಾಸವು ಕಡಿಮೆಯಾಗಿರಲು—ವೃಷಭಲಕ್ಷಣನಾದ ಅಶ್ವತ್ಥಾಮನು ಮುಂದೆ ಅಲ್ಲಿ ಕಮಲಾಕ್ಷಿಯಾದ ಲಕ್ಷ್ಮಿಯನ್ನು ಕಂಡನು.

ಹಾಗೆ ಕುಂಭಸಂಭವಸಂಭವನು ಕಮಲನಾಭನ ಹೃದಯಭವನದ ಅಮೃತಾಬ್ಧಿಸಂಭವೆಯನ್ನು ಕಂಡು, "ನೀನು ಯಾರಿಗೆ? ಯಾವ ದೆಸೆಯಿಂದ ಬಂದೆ? ಎಲ್ಲಿಗೆ ಹೋಗುವೆ?" ಎಂದು ಬೆಸಗೊಳ್ಳಲು—

"ಅಮೃತಸಮುದ್ರದ ಮಂಥನದಿಂದ ಹುಟ್ಟಿದೆನು. ಅಬ್ಜಭವಾಂತರಾಳದಲ್ಲಿ ರಮಿಸುವ ಪದ್ಮನಾಭನ ವಕ್ಷದಲ್ಲಿ ನೆಲಸಿರುವ ಮಹಾನುಭಾವೆ ನಾನು. ಕಮಲೆಯಾದವಳು. ಇದುವರೆಗು ಕುರುಮಹೀಪತಿಯಲ್ಲಿ

ನೆಲಸಿದ್ದೆನು. ಈಗ ಉತ್ತಮನಾದ ಪುರುಷೋತ್ತಮನು ಬೆಸಸಲು ಪಾಂಡವರಲ್ಲಿ ನೆಲಸಲು ಹೋಗುತ್ತೇನೆ” ಎನ್ನಲಾಗಿ—

ದ್ರೋಣನಂದನನು “ನಾರಾಯಣನು ಬೆಸಸಲು ಹೋಗುವೆನು” ಎಂದ ಲಕ್ಷ್ಮಿಯ ಮಾತನ್ನು ಅವಧಾರಿಸಿ ಮುಗುಳ್ನಗೆ ನಕ್ಕು, “ಜಲಧಿಯಲ್ಲಿ ಹುಟ್ಟಿದವಳಾದುದರಿಂದ ನೀನು ಚಲಮತಿಯಾದೆ. ಸರೋಜಗಳ ಸಂಕುಲದ ರಜದಿಂದ ನೀನು ಕೂಡಿಕೊಂಡು ರಾಜಸದಲ್ಲಿ ನೆಲಸಿರುವೆ. ಗೋವುಗಳನ್ನು ಕಾದು ಸಾಮರ್ಥ್ಯ ನಾಶವಾದ ಕೃಷ್ಣನೊಡನೆ ಇದ್ದುದರಿಂದಲೇ ಗೋಪಿಯಾದೆ. ಅಗ್ಗಳದ ವಿವೇಕವಿಲ್ಲ ನಿನಗೆ. ಆ ಪುರುಷರ ಅಂತರಗಳನ್ನು ನೀನೆಲ್ಲಿ ತಿಳಿವೆ! . . . ಕಲಿ–ಹೇಡಿ ಎಂದು ಬಗೆಯದೆ, ಕುಲಜ–ಕುಲಹೀನ ಎಂದು ಬಗೆಯದೆ, ತರುಣ–ವೃದ್ಧ ಎಂದು ಬಗೆಯದೆ ನೆಲಸುವೆ! ನಿನಗಿಂತ ನಿಕೃಷ್ಟರಾದವರು ಇದ್ದಾರೆಯೆ! . . . . ತಂದೆಮಕ್ಕಳನ್ನು ಇರಿಯಿಸುವೆ. ಸೋದರರುಗಳನ್ನು ತಮ್ಮ ತಮ್ಮಲ್ಲಿ ಇರಿಯಿಸುವೆ. ಗುರುಶಿಷ್ಯರನ್ನು ಇರಿಯಿಸುವೆ. ಹೀಗೆ ಧರ್ಮವನ್ನು ಕೊಲೆಮಾಡುವ ನಿನಗಿಂತ ನಿಕೃಷ್ಟರಾದವರು ಇರುವರೇ! . . . ಅದಲ್ಲದೆಯೂ ಅಮೃತಸಮುದ್ರಮಂಥನದಲ್ಲಿ ಹುಟ್ಟುವಂದು ಐರಾವತದೊಡನೆ ಹುಟ್ಟಿದುದರಿಂದ ವಿಪರೀತವೃತ್ತಿಯೂ ಚಂದ್ರನೊಡನೆ ಹುಟ್ಟಿದುದರಿಂದ ವಕ್ರತೆಯೂ ಕೌಸ್ತುಭದೊಡನೆ ಹುಟ್ಟಿದ್ದರಿಂದ ಕಠಿನತೆಯೂ ವಾಗ್ದೇವಿಯೊಡನೆ ಹುಟ್ಟಿದ್ದರಿಂದ ವಾಚಾಳತೆಯೂ ಕಾಲಕೂಟದೊಡನೆ ಹುಟ್ಟಿದ್ದರಿಂದ ಕೊಲೆಯೂ ಕಳ್ಳೊಡನೆ ಹುಟ್ಟಿದ್ದರಿಂದ ಸೊಕ್ಕೂ ಅಪ್ಸರಸೆಯರೊಡನೆ ಹುಟ್ಟಿದ್ದರಿಂದ ಕೆಟ್ಟಕೆಲಸವೂ ನಿನಗೆ ಸಹಜವಾಗಿರುವುವು” ಎಂದು ಲಕ್ಷ್ಮಿಯನ್ನು ವಿಡಂಬನಮಾಡಿ, ಅಷ್ಟರಲ್ಲಿಯೂ ಬಿಡದೆ—

“ಹೋಗು! ಬಿಡು! ಧರ್ಮಜನಂತೆ! ಭೀಮನಂತೆ! ಅರ್ಜುನನಂತೆ! ಯಮಳರಂತೆ! ಸಂಗ್ರಾಮದಲ್ಲಿ ಅವರುಗಳು ಅಶ್ವತ್ಥಾಮನಿಗೆ ಆಪೋಶನಗೊಳ್ಳಲು ಸಾಕಾಗುವರೇ! . . . . ನಿನ್ನ ಮುರವೈರಿಯ ಸಾಮರ್ಥ್ಯವನ್ನೂ ನನ್ನ ಸಾಮರ್ಥ್ಯವನ್ನೂ, ಎಲೆಗೆ, ಕಾಣುವೆ. ಮೊದಲು ನಿನಗೆ ಪತಿಯಾಗಿದ್ದ ಕುರುಪತಿಯಿಂದ ನಿನ್ನನ್ನು ಅಗಲಿಸಲು ಕಪಟಗೋಪನು ಪ್ರಭುವೆ! . . . ಕುರುರಾಜನು, ರಾಜರಾಜನು, ಸಕಲ

ವಸುಮತೀಕಾಂತನು ಇದ್ದಂತೆ, ಯುದ್ಧದಲ್ಲಿ ಆದರವುಳ್ಳ ಈ ಸಾಹಸಾಂಕನು, ಕುರುಕುಲಪತಿ ಇದ್ದಂತೆ, ಬೆಪ್ಪಾಗಿ, ದಾಮೋದರನು ಹೇಳಿದ ಈ ಕಾರ್ಯದಲ್ಲಿ ನೀನು ಸಿಕ್ಕಿ, ಮರುಳೇ, ಬೆಂಡಾಗದಿರು. ನೀನು ಚೆಚ್ಚರದಿಂದ ಹೋಗು. ಅತ್ತ, ಇನ್ನೆತ್ತ ಹೋಗುವೆ? ಪರಿಭವಿಸುತ್ತೇನೆ! ನಿನ್ನನ್ನು ಇನ್ನು ಕಾಪಾಡುವವನಾವನು?"

ಎಂದು ಅಶ್ವತ್ಥಾಮನು ಉದ್ದಾಮವಾದ ಕೋಪಾಟೋಪದಿಂದ ಬದ್ಧವಾದ ಭ್ರುಕುಟಿಯುಳ್ಳವನೂ ತರಳತಾಮ್ರಲೋಚನನೂ ಆಗಲು, "ಅತ್ತ ಅಸುರಾರಿ ಬೆಸಸಿದನು. ಇತ್ತ ರುದ್ರಾವತಾರನು ಎಳೆದೊಯ್ಯುವನು!" ಎಂದು 'ಅತ್ತ ಹುಲಿ, ಇತ್ತ ದರಿ' ಎಂದು ಅತ್ತ ಇತ್ತ ಅಡಿಯಿಡದೆ ಲಕ್ಷ್ಮಿ ತಳವೆಳಗಾದಳು.

ಹಾಗೆ ತಳವೆಳಗಾದ ಲಕ್ಷ್ಮೀಕಾಂತೆಯು ಚಲಿಸುವ ಅಳಿಕುಲದಂತೆ ವಿನೀಲವಾದ ಕುಟಿಲಕುಂತಲಗಳನ್ನು ತಳವಾರೆ ಹಿಡಿದು, ಕುರುಕುಲ ಕುಟುಂಬನ ಘಟಚೇಟಿಯನ್ನು ಕೊಂಡುಹೋಗುವಂತೆ ಪುನಃ ಕೊಂಡು ಹೋಗಿ; ಭೀಮಸೇನನ ಗದಾಘಾತದಲ್ಲಿ ಊರುಭಂಗವೂ ಪದಾಘಾತದಲ್ಲಿ ಮಕುಟಭಂಗವೂ ಆಗಲು ಮುದುರಿಕೊಂಡು ಮುದ್ದೆಯಾಗಿ ಸುಯೋಧನನು ಇರಲು—ಕುರುರಾಜನು ತೊಡೆಯ ಬೇನೆಗೆ ನರಳಲೇ ಇಲ್ಲ. ಕುರುವಾದ ತೊಡೆಯ ಬೇನೆಗೆ ಕಂಡವರು ನರಳುವಂತೆ ನರಳದೆ, ಅರಸನು ವಿರೋಧದಿಂದ ಆದ ಮಾನಹಾನಿಗೆ ನೊಂದನು.

ಹಾಗಿದ್ದ ಕುರುರಾಜನಂದನನನ್ನು ಗುರುನಂದನನು ನೋಡಿ, "ಕುಳಿಕನ ಹಲ್ಲುಗಳನ್ನು ಮುರಿಯುವಂತೆ ಮೋದಿದವರಾರು? ಪರಾಕ್ರಮದಿಂದ ಸಿಂಹವನ್ನು ಮುಳಿಯಿಸಿ, ಹಲ್ಲುಗಳನ್ನು ಹಿಡಿದು ಕಿತ್ತವರಾರು? ಮದಹಸ್ತಿಯನ್ನು ಭಯವಾಗುವಂತೆ ನೆಲಕ್ಕೆ ಇಕ್ಕಿ ಕೋಡೆರಡನ್ನೂ ಕುಸಿಯುವಂತೆ ಒತ್ತಿದವರು ಯಾರು? ಸುರಾದ್ರಿಯಂತೆ ನಿಶ್ಚಲವೂ ನಿಬಿಡವೂ ಆದ ಊರುಮಂಡಲವನ್ನು ಯಾರು ಒಡೆದವರು, ಫಣಿರಾಜಕೇತನಾ? . . . ಹಾ! ಕುರುವಂಶವೆಂಬ ಮಹಾಕಮಲಾಕರದ ಕಲಹಂಸ! ಹಾ! ಸಕಲ ಸಮುದ್ರಾಂತ ಧರಿತ್ರೀಕಾಂತ! ಹಾ! ಫಣೀಂದ್ರಪತಾಕಾ! ವಿಧಿವಶದಿಂದ ನಿನಗೂ ಈ ಪರಿಯಾಯಿತೇ!"

ಎಂದು ಗುರುನಂದನನು ವಿಪ್ರಲಾಪಮಾಡಿ, ತನ್ನ ಉತ್ತರೀಯದ ಸೆರಗಿಂದ ಆತನ ತಲೆಯಮೇಲೆ ಕೆದರಿದ್ದ ಭೀಮಸೇನನ ಕಾಲುದೂಳನ್ನು ತೊಡೆದು ಕಳೆದು, "ನನ್ನನ್ನು ವಂಚಿಸಿ ಬಂದುದರಿಂದ ನಿನಗೆ ಇಷ್ಟು ಅವಸ್ಥೆಯಾಯಿತು, ಕುರುಪತಿ! ಇನ್ನಾದರೂ ಪತಿಕಾರ್ಯವನ್ನು ತಿಳಿದು ನನ್ನ ಶಕ್ತಿಯನ್ನೂ ಭಕ್ತಿಯನ್ನೂ ನೋಡು."

ಎಂದು ನುಡಿದ ಭಾರದ್ವಾಜತನೂಜನ ನುಡಿಗೆ ರಾಜರಾಜನು ಅವಧಾರಿಸಿ, "ಶತ್ರುವಿನ ಕಾಲಿನ ದೂಳು ಹತ್ತಿರಲು, ಕರಾಗ್ರದಿಂದ ವಸ್ತ್ರಾಂಚಲದಿಂದ ತೊಡೆದು ಕಳೆದೆ. ಗುರುನಂದನ, ನೀನು ನನ್ನ ಈ ಪರಿಭಾವದ ಪಾಂಸುವನ್ನು, ಹೇಳು, ಹೇಗೆ ಕಳೆಯುವೆಯೋ!" ಎಂದು ನುಡಿದು ಸುಯೋಧನನು "ಹರಿಯ ಅನುಬಲದಿಂದ ಪಾಂಡವರು ಗೆಲ್ಲಲು ಅಸಾಧ್ಯರು. ಅಶ್ವತ್ಥಾಮನು ಈಶ್ವರಾಂಗನು, ಪರಬಲಕ್ಕೆ ಅಜೇಯನು" ಎಂದು ನೃಪನು ಅಂತರಂಗದಲ್ಲಿ ಅಂತರವನ್ನು ಚಿಂತಿಸಿದನು. ಹಾಗೆ ಚಿಂತಿಸಿ, "ಇದನ್ನೂ ಇನ್ನೂ ನೋಡುತ್ತೇನೆ. ನನ್ನ ದೇಹದಲ್ಲಿ ಇನ್ನೂ ಈ ಪ್ರಾಣವಿರುವವರೆಗೆ ಪ್ರೀತಿಸದೆ ಕೌಂತೇಯರನ್ನು ಇಕ್ಕಿ, ಹಸಿಯ ತಲೆಗಳನ್ನು ತಂದಿಕ್ಕು. ಮೊದಲು ನನ್ನ ವಿಶ್ವಾಸವಿಲ್ಲದ ದಾಯಾದರ ವಿಕ್ಕ ಪಂದಲೆಗಳನ್ನು ಕಣ್ಣಾರೆ ಕಂಡು, ನನ್ನ ಚಿತ್ತದಲ್ಲಿ ಒಂದೂ ತೊದಳಿಲ್ಲವೆ. ನನ್ನ ಅಸುಗಣಕ್ಕೆ ಉತ್ಕ್ರಾಂತಿಯನ್ನು ಮಾಡುತ್ತೇನೆ." ಎನ್ನಲಾಗಿ—

"ಇದು ಯಾವ ಗಹನ! ಹಾಗೇ ಮಾಡುತ್ತೇನೆ!" ಎಂದು ಪ್ರತಿಜ್ಞೆ ಮಾಡಿ, ಭೂಕಾಂತೆಯನ್ನೂ ಶ್ರೀಕಾಂತೆಯನ್ನೂ ಕಂಗೆಡುವಂತೆ ಗದರಿಸಲು; ಉರಗೇಂದ್ರನ ಫಣಾಮಣಿಯೋ ನೂಪುರದ ಮಣಿ, ಜಲರಾಶಿಯೋ ರತ್ನಮೇಖಲೆ ಎನ್ನಿಸುವ ಆ ಕುರುಧರೆ ನಿಜರೂಪದಿಂದ ಬಂದು, ಇದಿರೆ ಆ ಗುರುಪುತ್ರನಿಗೆ ಅಳುಕಿ, "ಆಜ್ಞೆಯೇನು?" ಎಂದಳು.

"ಕುರುವಂಶದ ಭೂಪತಿಗೆ ಒಬ್ಬಳು ಕೊಡೆ ಹಿಡಿಯುವುದು, ಮತ್ತೊಬ್ಬಳು ಚಾಮರವನ್ನು ಇಕ್ಕುತ್ತಿರುವುದು. ನಾನು ಬರುವವರೆಗೆ ಇಬ್ಬರೂ ಹೀಗಿರುವುದು" ಎಂದು ಅಶ್ವತ್ಥಾಮನೆಂದನು.

ಹಾಗೆ ಇಬ್ಬರನ್ನೂ ನಿಯೋಜಿಸಿ, ಸೂರ್ಯ ಮುಳುಗುವವರೆಗೆ ಇದ್ದು, ತನ್ನ ಒಡೆಯನನ್ನು ಬೀಳ್ಕೊಂಡು, ಪ್ರಯಾಣಹೋಗಿ, ಹಸ್ತಿನಾಪುರವನ್ನು ಹೊಕ್ಕು, ಕಮಲವನದಂತೆ ಲಕ್ಷ್ಮೀರಂಜಿತವೂ ಚಿತ್ರಪತ್ರವೂ ಚಕ್ರಾಂಕದಿಂದ ವ್ಯಂಜಿತವೂ ಆದ ಬೀಡನ್ನು, ಮಂಜು ಇರಿಯುವಂತೆ, ಅಶ್ವತ್ಥಾಮನು ಇರುಳಿನಲ್ಲಿ ಇರಿದನು.

ಹಾಗೆ ಇರಿಯುವಾಗ, ಕೆಲವು ದಿವಸ ಕಾದು ಹಿರಿಯ ಪ್ರಯಾಣ ಬಂದು ಬಳಲಿ ನಿದ್ರೆಮಾಡಿದವರು ತಟಕ್ಕನೆ ನಿದ್ರೆಯಿಂದ ಎಚ್ಚೆತ್ತು, ಮುಟ್ಟಿಬಂದ ಆ ಕಳಕಳವನ್ನು ಕೇಳಿ, ಕರತಲದಿಂದ ಕಣ್ಣು ಹೊಸೆಯುತ್ತಾ ಎದ್ದು, ತಂತಮ್ಮ ತಲೆದೆಸೆಯಲ್ಲಿದ್ದ ಕರವಾಳವನ್ನು ಕೊಂಡು ಬರಲು; ಹೆಂಡಿರು ಮಕ್ಕಳೆನ್ನದೆ, ಒಂದು ಅಕ್ಷೋಹಿಣೀ ಬಲವೆಲ್ಲವನ್ನೂ ಹೇಳಲು ಹೆಸರಿಲ್ಲದಂತೆ ಕೊಂದು; ತನಗೆ ಕಟ್ಟಿದಿರಲ್ಲಿ ಇದ್ದ ಧೃಷ್ಟದ್ಯುಮ್ನನನ್ನೂ ಮುಟ್ಟಿ ಮೂದಲಿಸಿ, ತಮ್ಮ ತಂದೆಯನ್ನು ಪರಿಭವಿಸಿದ ಹಗೆಯನ್ನು ಕೊಂದು ದಿಗ್ಬಲಿಗೈದು, ಶಿಖಂಡಿ ಚೇಕಿತಾನ ಯುಧಾಮನ್ಯು ಉತ್ತಮೌಜಸ್ ಮುಂತಾದವರನ್ನು ಇಕ್ಕಿ, ಪಾಂಡವರೆಂಬ ಶಂಕೆಯಿಂದ ಶ್ರುತಸೋಮಕ ಮೊದಲಾದ ಪಂಚಪಾಂಡವರ ತಲೆಗಳನ್ನು ಕೊಂಡು, ತಳತಳನೆ ನೇಸರು ಮೂಡುವಾಗ ಬಂದು, "ಕೋ, ನಿನ್ನ ನಚ್ಚಿನ ಪಾಂಡವರ ತಲೆಗಳು ಇವು!" ಎಂದು ದುರ್ಯೋಧನನ ಮುಂದಿಕ್ಕಿದರೆ—

ಆ ಮಹಾನುಭಾವನು ಆ ತಲೆಗಳನ್ನು ದೀರ್ಘವಾಗಿ ಭಾವಿಸಿ ನೋಡಿ, "ಇದು ಪವನಜನ ಮುಖವಲ್ಲ. ಅವನ ಮುಖ ಆದರೆ ನನ್ನ ಮುಖವನ್ನು ಮುಟ್ಟವಾಗಿ ಇದ್ದು ನೋಡುವುದೇ? ಸುಮ್ಮನೆ ವ್ಯರ್ಥವಾಯಿತು ಅರಿವಿಲ್ಲದೆ ಹೋಯಿತು. ಇವು ಪಾಂಡವರ ಶಿರಗಳಲ್ಲ. ಇವು ಕೃಷ್ಣೆಯ ಮಕ್ಕಳಾದ ಪಂಚಪಾಂಡವರ ಶಿರಗಳು. ಇವನ್ನು ಚೆನ್ನಾಗಿ ವಿಚಾರಿಸದೆ, ಅಕಟಾ, ಕೊಂಡುಬರುವುದೇ! . . . ಪರಮೇಶ್ವರಾವತಾರನೆ! ಪರಮ ಜ್ಞಾನಿಯೆ! ವಿವೇಕ ವಿಕಳರ ಹಾಗೆ ಬಾಲರ ತಲೆಯನ್ನು ಕತ್ತರಿಸಿ ತಂದೆಯಲ್ಲಾ! ನಿನಗೆ ಬಾಲವಧವೆಂಬ ಪಾತಕ ದೊರೆಕೊಂಡಿತು!" ಎನ್ನಲು—

ರುದ್ರಾವತಾರನು ಪ್ರಳಯರುದ್ರನಂತೆ ರೌದ್ರ ಪ್ರಾಯಶ್ಚಿತ್ತ ಪ್ರವರ್ತನಕ್ಕಾಗಿ ಹಿಮವತ್ ಪರ್ವತಕ್ಕೆ ಹೋಗಲು—

ಚಿತ್ತವನ್ನು ಸಮಾಧಾನಮಾಡಿ, ಉಚಿತವಾದುದನ್ನು ನೆನೆದು, ಸುರಲೋಕವನ್ನು ಸಾಧಿಸುವೆನೆಂದು ಅಶ್ವತ್ಥಾಮಾದಿಗಳನ್ನು ವಿಸರ್ಜಿಸಿ, ಆ ದಿವಸದ ಅವಸಾನಸಮಯದಲ್ಲಿ ದುರ್ಯೋಧನನು ಪ್ರಾಣವಿಸರ್ಜನಕ್ಕೆ ಉನ್ಮುಖನಾದನು.

ಹೀಗೆ, ಪಂಕಜವೂ ಸುಹೃದ್ವದನ ಪಂಕಜವೂ ಮುಗಿಯುತ್ತಿರಲಾಗಿ, ಉಗ್ರವಾದ ತೇಜಸ್ಸು ಕೆಡುತ್ತಿರಲಾಗಿ, ತನ್ನ ಕರಗಳನ್ನು ಅಂದು ಉಡುಗುತ್ತಾ ಇದ್ದು, ಚಕ್ರಾಂಕವು ಅಗಲುವಂತೆ ಕ್ರಮದಿಂದ ಅಂಬರವನ್ನು ಬಿಸುಟು, ಉಬ್ಬಿದ ಅಂಧಕಾರವು ಕವಿಯುತ್ತಿರುವಷ್ಟರಲ್ಲಿ ಕುರುಕುಲಾರ್ಕನೂ ಅರ್ಕನೂ ಅಸ್ತಹೊಂದಿದರು.

ಭೀಮನ ಪಟ್ಟಾಭಿಷೇಕ

ಮೊದಲಲ್ಲಿ ಶಂತನುಸೂನು ಹತ್ತು ದಿವಸ, ಚಾಪಾಗಮಾಚಾರ್ಯನು ಐದುದಿನ, ಭಾಸ್ಕರನಂದನನು ಎರಡುದಿನ, ಶಲ್ಯನು ಉತ್ಸಾಹದಿಂದ ಅರ್ಧದಿನ, ಉಳಿದ ಅರ್ಧದಿನ ಈ ಗದಾಯುದ್ಧ– ಹೀಗೆ ಪರಿಚ್ಛಿನ್ನವಾದ ಹದಿನೆಂಟು ದಿನಗಳಿಂದ ರೌದ್ರಾವಹವಾದ ಭಾರತವು ನಡೆಯಿತು. ಅದರ ಕಡೆಯ ಅಮಾವಾಸ್ಯೆಯ ದಿವಸದಲ್ಲಿ ಕೌರವವಂಶವು ನಿರ್ಮೂಲವಾಯಿತು.

ಆಗ, ಧರಣೀಕಾಂತೆಯು ಸಂತೋಷದಿಂದ ಬಂದು ಹರಸಲು, ಶ್ರೀ ಕಾಂತೆಯೂ ಬಂದು ಪರಮಾನಂದದಿಂದ ಅಕ್ಷತೆಯಿಕ್ಕಿ ಹರಸಲು, ತಾನು ಅದನ್ನು ತಾಳಿಕೊಂಡು, ಆಗ ಆದರದಿಂದ ದಕ್ಷಿಣಬಾಹುದಂಡದಲ್ಲಿ ಜಯಶ್ರೀಕಾಂತೆಯನ್ನು ತಾಳಿ, ಭೀಮನು ಆ ಮೂವರು ಕಾಂತೆಯರನ್ನೂ ಮೆಚ್ಚಿಸಿದನು.

ಆಗ ಸಮರವಿಜಯಿಯಾದ ಮುರಾಂತಕನು ಸಾಹಸಭೀಮನ ಸಾಹಸಕ್ಕೆ ಮೆಚ್ಚಿ, "ಕೋಪಗೊಳಿಸಿದ ಶತ್ರುವನ್ನು ಕೊಲ್ಲುವೆನೆಂದು ಪ್ರತಿಜ್ಞೆಮಾಡಿದ ಹಾಗೆ ಪ್ರತಿಜ್ಞೆ ತಪ್ಪದೆ ಕೊಲ್ಲಲು ನೀನು, ನಿನಗಲ್ಲದೆ ಹೀಗೆ ತೀರುವುದೆ, ಇರಿವಬೆಡಂಗಾ!" ಎಂದು ನಾರಾಯಣನು ಅವನ ಶೂರಕೃತ್ಯಗಳನ್ನು ಹೊಗಳುತ್ತಿರಲಾಗಿ—

ಆಗ ಧೃತರಾಷ್ಟ್ರನೂ ಗಾಂಧಾರಿಯೂ ಬರಲು, ಧರ್ಮನಂದನನು ನಮಸ್ಕರಿಸಿ, "ನಮಗೆ ಐದುಗ್ರಾಮವನ್ನು ಕೊಡದೆ, ನನ್ನ ಸಂಧಿಯನ್ನು ಒಲ್ಲದೆ, ನಿಮ್ಮ ಗಾಂಗೇಯರ ಮಾತು ಕೇಳದೆ, ಕುರುರಾಜನು ಅಳಿದನು. ಅದಕ್ಕಾಗಿ ದುಃಖದಿಂದ ಬಾಯಿಸೋಲುವುದು ಬೇಡ. ನಿಮಗೆ ನಾನು ಮಗನಲ್ಲವೆ? ನೀವೇ ತಂದೆಯೂ ತಾಯೂ ಎನ್ನಬೇಕು, ಇನ್ನು ನಮಗೆ ಪಾಂಡುಮಹೀಪತಿಗಿಂತ ನೀವೇ ಶ್ರೇಷ್ಠ" ಎನ್ನಲಾಗಿ—

ಆ ಪ್ರಸ್ತಾವದಲ್ಲಿ ದುರ್ಯೋಧನನ ಮಹಾದೇವಿಯರಾದ ಭಾನುಮತಿಯೂ ಚಂದ್ರಮತಿಯೂ ಮೊದಲಾದ ಅತಿರಥ ಮಹಾರಥ ಅರ್ಧರಥ ಪ್ರಮುಖ ಸಾಮಂತ ಮಾಂಡಲಿಕರ ಅಂತಃಪುರ ಕಾಂತೆಯರು ಒಂದಾಗಿ

ತಂತಮ್ಮ ಜೀವಿತೇಶ್ವರರನ್ನು ಸಂಗ್ರಾಮರಂಗದಲ್ಲಿ ಅರಸುತ್ತಾ ಬಂದು ಕಾಣದೆ, ಕೌರವಸಿತಂಬಿನಿಯರು ಗಾಂಧಾರೀ ಧೃತರಾಷ್ಟ್ರರ ಕಾಲಮೇಲೆ ಕವಿದು ಬಿದ್ದು, "ಕುರುಮಹೀಪತಿ ಎಲ್ಲಿದ್ದಾನೆ? ಎಲ್ಲಿದ್ದಾನೆ? ಮಹೀ ವಲ್ಲಭನು ಎಲ್ಲಿದ್ದಾನೆ? ಎಲ್ಲಿದ್ದಾನೆ? ಇಂದುವಂಶ ತಿಲಕಾಹ್ವಯನು ಎಲ್ಲಿದ್ದಾನೆ? ಎಲ್ಲಿದ್ದಾನೆ? ಫಣೀಂದ್ರಪತಾಕನು ಎಲ್ಲಿದ್ದಾನೆ? ಎಲ್ಲಿದ್ದಾನೆ? ನಮ್ಮ ಮನಃಪ್ರಿಯನಾದ ಸುಯೋಧನನು ಎಲ್ಲಿದ್ದಾನೆ? ಎಲ್ಲಿದ್ದಾನೆ?" ಎಂದು ಕರುಣದಿಂದ ಆಕ್ರಂದನಗಯ್ಯಲಾಗಿ—

ಆಗ ಅದನ್ನು ಕಂಡು, ಧರ್ಮನಂದನನು ಅಂಧರಾಜನಿಗೂ ಗಾಂಧಾರಿಗೂ ನಮಸ್ಕರಿಸಿ, "ನಿಮಗೆ ಬೆಸಕೈಯುತ್ತೇನೆ. ನಮ್ಮಿಂದ ಕ್ರಮವಾಗಿ ಬೆಸಕೈಸಿಕೊಂಡು ನೆಲವನ್ನು ಪೂರ್ವಕ್ರಮದಿಂದ ನೀವು ಆಳಬೇಕು. ನೀವು ನಿಮ್ಮ ಮಕ್ಕಳನ್ನು ಮರೆತು, ನಮ್ಮನ್ನೂ ಇಷ್ಟು ನೋಡಿ" ಎಂದು ಧರ್ಮನಂದನನು ನುಡಿಯಲು—

ಧೃತರಾಷ್ಟ್ರನು ಅವಧಾರಿಸಿ, "ನಿಮಗೆ ನಮಗೆ ಇನ್ನೂ ಮನಸ್ಸಿನ ವಿರೋಹವಿಲ್ಲ. ನಮಗೆ ಬೇಕಾದುದನ್ನು ನೀನು ಇಷ್ಟು ಕೇಳು, ಯಮನಂದನ, ಜೀವತೆತ್ತ ಅರಸುಮಕ್ಕಳನ್ನು ಅವರ ವನಿತೆಯರಿಗೆ ಈಗ ಕೊಡುವುದು" ಎನ್ನಲು—

"ಇದು ಯಾವ ಗಹನ? ಅವರುಗಳಿಗೆ ಸಂಸ್ಕಾರವಿಧಿಯಿಂದ ಸಂಸ್ಕಾರವನ್ನು ಮಾಡುವೆನು" ಎಂದಾಗ—

ಕುಂತಿ ತನ್ನ ಚೊಚ್ಚಲಮಗನಾದ ಕರ್ಣನ ಕಳೇಬರವನ್ನು ತಬ್ಬಿ ಕೊಂಡು ಗೋಳಾಡಲು ತನ್ನ ತಾಯಿಯನ್ನು ಕಂಡು, ಪಾಂಡುನಂದ ನನು ಇದೇನೆಂದು ಕೇಳಲು—

"ವನಜಾತಕ್ಕೆ ಪ್ರಿಯಬಂಧುವಾದ ಸೂರ್ಯನಿಗೆ ಅಂಗಪತಿಯನ್ನೂ ಧರ್ಮನಿಗೆ ನಿನ್ನನ್ನೂ ಹುತಾಶನಮಿತ್ರನಿಗೆ ಬಕಾರಿಯನ್ನೂ ವಜ್ರಾ ಯುಧದವನಿಗೆ ಗಾಂಡೀವಿಯನ್ನೂ ಹೆತ್ತೆನು. ಆ ಸೂರ್ಯನ ಮಗನು ನನ್ನ ಚೊಚ್ಚಲಮಗನು. ಕರ್ಣನು ನಿಮ್ಮ ಅಗ್ರಜನು. ಇಷ್ಟನ್ನೂ ನಿಮ್ಮ ಮೋಹದಿಂದ ಉಸಿರದೆ ಇದ್ದೆನು. ನಾನೇ ಕೊಂದೆನು, ಧರ್ಮಜಾ!" ಎನ್ನಲಾಗಿ—

ಧರ್ಮನಂದನಾದಿಗಳು ಅತ್ಯಂತ ದುಃಖಿತರಾಗಿ ಇಂತೆಂದರು: “ಇಷ್ಟೊಂದು ದೊಡ್ಡ ಅವಿವೇಕವನ್ನು ಮಾಡಿದಿರಲ್ಲಾ! ಅಂದೇ ಏಕೆ ಇಷ್ಟನ್ನು ಹೇಳದೆ ಇದ್ದಿರಿ? ಹೇಳಿದ್ದರೆ, ಇದೇಕೆ ಕೂಡುತ್ತಿತ್ತು? ನಮ್ಮ ಅಣ್ಣನಾದ ಕರ್ಣನಿಗೆ ಭೂಮಿಯನ್ನು ಕೊಟ್ಟು, ಅವನು ಅರಸನಾದ ಬಳಿಕ ನಾವು ಆಳಾಗಿ, ಇರಬಹುದಿತ್ತು. ಸೋದರ್ಯದ ಆ ಸ್ಥಿತಿಯನ್ನು ಕೆಡಿಸಿದಿರಿ” ಎಂದು ಕುಂತೀಸುತರು ಕುಂತಿಯನ್ನು ಆಕ್ಷೇಪಿಸಿದರು.

ಹಾಗೆನ್ನಲಾಗಿ, ನಾರಾಯಣನು “ಕ್ಷತ್ರಿಯ ಧರ್ಮದ ಮರ್ಮದಿಂದ ಆದುದನ್ನು ಸೈರಿಸುವುದು” ಎಂದು ಅವರನ್ನು ಶೋಕಹೋದವರನ್ನಾಗಿ ಮಾಡಿ, ದುರ್ಯೋಧನ ಮೊದಲಾದವರ ಹೆಣಗಳನ್ನು ಒಂದೆಡೆಯಲ್ಲಿಟ್ಟು, ದ್ವಿಜರಿಂದ ಸಂಸ್ಕಾರಕರ್ಮವನ್ನು ಮಾಡಿಸಿ, ಕರ್ಣನ ಕಳೇಬರವನ್ನು ಬ್ರಾಹ್ಮಣರಿಂದ ತಾವೇ ಸಂಸ್ಕಾರಮಾಡಿ, ಸಮಸ್ತರಿಗೂ ಜಲದಾನಕ್ರಿಯೆಗಳನ್ನು ತೀರಿಸಲು, ಅದರ ಅನಂತರ ಕುಂತಿಯೂ ಗಾಂಧಾರಿಯೂ ಧೃತರಾಷ್ಟ್ರನೂ ಕುರುನರೇಂದ್ರನ ಅರಸಿಯರು ಮೊದಲಾಗಿ ಎಲ್ಲರೂ ಅನಶನದೀಕ್ಷೆಯನ್ನು ಕೈಕೊಂಡು ಉತ್ತಮಮೋಕ್ಷವನ್ನು ತಾಳಿದರು.

ಇತ್ತ ಧರ್ಮಜನು ಮುಕುಂದನಿಗೆ ಕೈಮುಗಿದು, “ಇಷ್ಟೊಂದು ಉಗ್ರವಾದ ಸಮಸ್ತಭಾರತ ಮಹಾಭಾರಾತಿಯುದ್ಧವು, ಮುಕುಂದ, ನಿನ್ನ ಅನುಗ್ರಹದಿಂದ ಆಯಿತು. ಪಾರ್ಥನು ಕಿರಿಯನು. ನನಗೆ ಭೂಮಿಯ ಮೋಹವಿಲ್ಲ. ಈತನು ಕುರುವಂಶಕ್ಕೆ ಜಯವನ್ನು ಪಡೆದಿರುವನು, ಈ ಭೀಮನಿಗೆ ನೀನು ಪಟ್ಟಬಂಧನವನ್ನು ಮಾಡುವುದು. ಅದಕ್ಕೆ ಹಸ್ತಿನಪುರಕ್ಕೆ ಪ್ರಸ್ಥಾನಮಾಡೋಣ” ಎನ್ನಲಾಗಿ---

“ಭೀಮನಿಗೆ ಪಟ್ಟಬಂಧವನ್ನು ಮಾಡುವುದು” ಎಂದು ವಾಸುದೇವನು ಮುಂತಾಗಿ ಸಹದೇವನು ನಿರೂಪಿಸಿದ ಶುಭಮುಹೂರ್ತದಲ್ಲಿ ಹಸ್ತಿನಪುರವನ್ನು ಹೊಕ್ಕು, ಹೊಡೆದ ಮಹಾ ಭೇರೀರವವು ದಿಕ್ಕುಗಳನ್ನು ದಟ್ಟವಾಗಿ ತುಂಬಲು, ವಿಪ್ರರು ಎಂಟು ದಿಕ್ಕುಗಳಲ್ಲಿ ವೇದನಿನಾದದಿಂದ ಹರಸಲು, ಕಮಲಾಕ್ಷಿಯರು ಕೂಡಿ ಸಂತೋಷದಿಂದ

ಆಕ್ಷತೆಯಿಕ್ಕಲು, ಪಾಂಡವಬಲಪ್ರಾಕಾರವೀರನಾದ ಸಾಹಸಭೀಮನಿಗೆ ಕೃಷ್ಣನು ಮನೋಮುದದಿಂದ ಪಟ್ಟವನ್ನು ಕಟ್ಟಿದನು.

ಹಾಗೆ ಭೀಮಸೇನನಿಗೆ ಪಟ್ಟವನ್ನು ಕಟ್ಟಿ, ತಾವು ಐವರೂ ಹಿಮದಿಂದ ಸೇತುವಿನವರೆಗೆ ಮಹಾಮಂಡಲಿಕರಿಂದ ಬೆಸಕೈಸಿಕೊಂಡು ಸುಖದಿಂದ ರಾಜ್ಯವಾಳುತ್ತಿದ್ದರು.

ರನ್ನನ ಗದಾಯುದ್ಧ ಮುಗಿಯಿತು.

ಅರ್ಥಕೋಶ

(ಆರಂಭದ ಸಂಖ್ಯೆಗಳು 'ರಸಘಟ್ಟಿ'ಯ ಪುಟಗಳನ್ನು ತೋರಿಸುತ್ತವೆ)

೧. ಈಶ್ವರ—ಒಡೆಯ, ಕಥಾನಾಯಕ. ಅಲಂಕೃತಿಯಾದ—ಅಲಂಕಾರಗಳಿಂದ ಕೂಡಿದ. ಜಯೋದ್ದಾಮ—ಜಯವನ್ನು ಪಡೆದು ಶ್ರೇಷ್ಠನಾದವನು. ಬದ್ಧವಿರೋಧ—ಮೊದಲಿನಿಂದಲೂ ಒಂದೇ ಸಮನಾದ ವೈರ. ಸಿಂಹಾವಲೋಕನ—ಸಿಂಹವು ಮುಂದೆ ಮುಂದೆ ಹೋದ ಹಾಗೆಲ್ಲಾ ಹಿಂದೆ ತಿರುಗಿ ತಾನು ನಡೆದು ಬಂದ ದಾರಿಯನ್ನು ಮತ್ತೆ ನೋಡುತ್ತದಂತೆ. ಅದರಂತೆ ರನ್ನನು ಇಲ್ಲಿ ಗದಾಪರ್ವದ ಕಥೆಯನ್ನೇ ಹೇಳಿದರೂ, ಅಲ್ಲಲ್ಲೇ ಹಿಂತು ಆದಿಪರ್ವದಿಂದ ಗದಾಪರ್ವದ ವರೆಗಿನ ಕಥಾಭಾಗಗಳನ್ನೂ ಜ್ಞಾಪಿಸಿಕೊಡುತ್ತಾನೆ. ಪುರಾತನ ಕವಿಪುಂಗವರು—ಹಿಂದಿನ ಕಾಲದ ಕವಿಶ್ರೇಷ್ಠರು. (ಪುಂಗವ ಎಂದರೆ ವೃಷಭ, ಗೂಳಿ.) ಕಾವ್ಯರೀತಿ—ಕಾವ್ಯವು ಹಿಡಿದು ಹೋಗಿರುವ ಹಾದಿ. ಇಮ್ಮು—ಆತುರಪಡದೆ ನಿಧಾನವಾಗಿ ವಿಮರ್ಶೆಮಾಡಿ.

೨. ಭೀಮಪ್ರತಿಜ್ಞೆ—ಭಯಂಕರವಾದ ಪ್ರತಿಜ್ಞೆ. ಕೌರವ್ಯರು—ಕುರುವಂಶದಲ್ಲಿ ಹುಟ್ಟಿದವರು. ಘಟ್ಟಿಸಿದವನು—ಬಲವಾಗಿ ತಾಕಿಸಿದವನು, ಒದ್ದವನು. ಅಭಿವರ್ಣಿಸು—ಪುನಃಪುನಃ ವರ್ಣಿಸು. ಸಂಧಿ—ಅಂಗಕ್ಕೆ ಅಂಗ ಸೇರುವ ಸ್ಥಳ. ಮಥಿಸಿದವನು—ಕೊಂದವನು. ಕೃಷ್ಣರಕ್ತ—ಕಪ್ಪಾದ ರಕ್ತ. ಊರು—ತೊಡೆ. ನಿಷ್ಠುರಶಿಲಾಸ್ತಂಭ—ದೃಢವಾದ ಕಲ್ಲಿನ ಕಂಬ. ಹಿಡಿಂಬಾಂತಕ—ಭೀಮ. ಉಗ್ರಾಂತಕ—ಕೆರಳಿದ ಯಮ. ಪ್ರಸ್ತಾವ—ಸಂದರ್ಭ. ದೃಷ್ಟಾದೃಷ್ಟ ಪರಂಪರೆ—ಕಾಣಲಾಗದುದು ಅನೇಕವನ್ನು ಕಂಡವಳು. ಮೇಳದ ಕೆಳದಿ—ಜೊತೆಯ ಸ್ನೇಹಿತೆ. ಕರಗ—ಮಂಗಲಕಲಶ. ಅನವರತ—ಎಡೆಬಿಡದೆ. ಪಲ್ಲವನೇತ್ರೆ—ಚಿಗುರಿನಂಥ ಕಣ್ಣುಳ್ಳವಳು. ಪರಿಭವ—ಅವಮಾನ, ಸೋಲು. ವೇದಿ—ಯಜ್ಞದಲ್ಲಿ ಅಗ್ನಿಯನ್ನು ಇಟ್ಟಿರುವ ಜಗಲಿ. ಪಾಂಚಾಲರಾಜತನೂಜೆ—ದ್ರುಪದನ ಮಗಳು, ದ್ರೌಪದಿ. ಪವಮಾನತನೂಜ—ಗಾಳಿಯ ಮಗ, ಭೀಮ.

೩. ಕೌರವಾಂತಕ—ಕುರುಗಳ ಪಾಲಿಗೆ ಯಮನಾದವನು. ಅಹಿತರು—ಶತ್ರುಗಳು. ಮರುನ್ನಂದನ—ವಾಯುವಿನ ಮಗ, ಭೀಮ. ಅನುಜ—ತಮ್ಮ (ಇಲ್ಲಿ ದುಶ್ಶಾಸನ). ಕಬರಿ—ಬಾಚಿ, ಎತ್ತಿ ಕಟ್ಟಿದ ತಲೆಕೂದಲು. ಧಾತ್ರಿ—ಭೂಮಿ. ಹುತಾಶನಪುತ್ರಿ—ಬೆಂಕಿಯ ಮಗಳು, ದ್ರೌಪದಿ. ಅನಿಲಸುತ—ವಾಯುವಿನ ಮಗ, ಭೀಮ. ಪರವಶರು—ಮೈಮೇಲೆ ಪ್ರಜ್ಞೆ ಇಲ್ಲದವರು. ಪರಾರ್ಜಿತಪ್ರಾಣರು—ಇತರರು ಸಂಪಾದಿಸಿಕೊಂಡ ಪ್ರಾಣವುಳ್ಳವರು, ಸತ್ತವರು. ನರ—ಅರ್ಜುನ. ವಿನಯ—ಹಿರಿಯರ ಮಾತಿಗೆ ಬಾಗುವುದು. ವಿಕ್ರಮ—ಶೌರ್ಯ. ಬಗೆ—ಯೋಚಿಸು,

ಮನಸ್ಸುಮಾಡು. ಸಮ್ಮೋಹನ—ತುಂಬಾ ಮಂಕನ್ನು ಉಂಟುಮಾಡತಕ್ಕದ್ದು. ವಿಲಯದ ಜ್ವಾಲೆ—ಪ್ರಳಯಕಾಲದ ಬೆಂಕಿ. ಪ್ರಳಯಕಾಳೆ—ಪ್ರಳಯಕಾಲದಂಥವಳು. ವದನ—ಮುಖ.

೪. ನಳಿನಾನನೆ—ಕಮಲದಂತೆ ಕೋಮಲವಾದ ಮುಖವುಳ್ಳವಳು. ಕಲಿಭೀಮ—ವೀರನಾದ ಭೀಮ. ಜಗತ್ಸ್ತುತ್ಯ ಕೃತಕೃತ್ಯ—ಮಾಡಬೇಕಾದ ಕೆಲಸವನ್ನು ಮಾಡಿ, ಲೋಕದಿಂದ ಹೊಗಳಿಸಿಕೊಂಡವನು. ಸತ್ಯಾಶ್ರಯ—ಆಡಿದ ಮಾತಿಗೆ ಅವಕಾಶಕೊಟ್ಟು ನಡೆಸಿದವನು. ಅಗ್ನಿಪುತ್ರಿ—ಬೆಂಕಿಯ ಮಗಳು, ದ್ರೌಪದಿ. ಕೃಷ್ಣೆ—(ಬೆಂಕಿಯಲ್ಲಿ ಹುಟ್ಟಿದುದರಿಂದ) ಕಪ್ಪಾದವಳು, ದ್ರೌಪದಿ. ಆಕರ್ಷಣ ಮಾಡು—ಎಳೆದುಕೊ. ಪರಿಣತ—ಸಮರ್ಥ, ಶಕ್ತ. ಕಾಲಹಸ್ತ—ಯಮನ ಕೈ. ಕೇಶಹಸ್ತ—ದಟ್ಟವಾದ ತಲೆಗೂದಲು. ನೆತ್ತರು—ರಕ್ತ. ಮಕುಟ—ಕಿರೀಟ. ವೇಣೀಸಂಹಾರ—ತಲೆಗೂದಲನ್ನು ಕೂಡಿಸಿ ಕಟ್ಟುವಿಕೆ. ವೃಕೋದರ—ತೋಳದಂತೆ ತೆಳುವಾದ ಹೊಟ್ಟೆಯುಳ್ಳವನು, ಭೀಮ. ತಳೋದರಿ—ಒಂದು ಕೈಯಲ್ಲಿ ಅಡಕವಾಗುವಷ್ಟು ಕೃಶವಾದ ಹೊಟ್ಟೆಯುಳ್ಳವಳು, ಇಲ್ಲಿ ದ್ರೌಪದಿ. ಕಚಬಂಧಬಂಧುರತೆ—ತಲೆಕೂದಲನ್ನು ಕಟ್ಟುವುದರಿಂದ ಆಗುವ ಸೊಗಸು. ಶಿಲಾತಲದ—ಕಲ್ಲಿನ ಮೇಲೆ (ಕೆತ್ತಿದ). ಆಕಾಶನದಿಯ ಮಗ—ಭೀಷ್ಮ. ಅಜ್ಜ—ಭೀಷ್ಮ. ದಂಡ—ಉದ್ದವಾದ ದಪ್ಪ ದೊಣ್ಣೆ. ವಿಭೀಷಣ—ವಿಶೇಷವಾಗಿ ಭಯಂಕರವಾದ.

೫. ಬಡಬಾಗ್ನಿ—ಸಮುದ್ರವನ್ನು ನುಂಗಿಬಿಡಲು ಸಮರ್ಥವಾದ ಬೆಂಕಿ. ದಾವಾಗ್ನಿ—ಕಾಡುಗಿಚ್ಚು. ಅಂಬುಜ—ತಾವರೆ. ಕಂಠೀರವ—ಸಿಂಹ. ಕಾಲಾನಲ—ಪ್ರಳಯಕಾಲದ ಬೆಂಕಿ. ಪ್ರಳಯಾರ್ಣವ—ಪ್ರಳಯಕಾಲದಲ್ಲಿ (ಮಿತಿ ಮೀರಿ ಉಕ್ಕುವ) ಸಮುದ್ರ. ಅವಲಂಬನ—ಒತ್ತಾಸೆ, ಸಹಾಯ. ನಿಬಿಡ—ಒತ್ತಾದ. ಫಣಿಕೇತನ—ಹಾವಿನ ಬಾವುಟದ ದುರ್ಯೋಧನ. ಕುಂಭ—ಆನೆಯ ತಲೆಯಮೇಲೆ ಉಬ್ಬಿರುವ ಭಾಗ. ಮರುಳು—ಭೂತ.

೬. ಗಂಡರು—ವೀರರು. ಇರಿವಬೆಡಂಗಾ—ಇರಿಯುವ ಬೆಡಗುಳ್ಳವನೇ. ವ್ರಣ—ಗಾಯ. ಮೂದಲಿಸಿ—ಹೀಯಾಳಿಸಿ. ಕೊರಳಲ್ಲಿ ಕೊಂಕು—ಮಾತಿನಲ್ಲಿ ವಕ್ರತೆ, ಆಡಿ ತಪ್ಪುವುದು. ವಾಕ್ಸಾರರು—ಕೇವಲ ಮಾತಿನವರು. ಸ್ಥಿತಿಸಾರ—ಆಡಿದುದನ್ನು ದೃಢವಾಗಿ ಹಿಡಿದು ಮಾಡುವವನು. ಅನುಮತ—ಒಪ್ಪಿಗೆ. ನರ್ಮಸಚಿವ—ರಾಜನ ಅಂತರಂಗದ ಸ್ನೇಹಿತ. ಡಾವರಡಾಕಿನಿ—ಕಲಹಪ್ರಿಯಳಾದ ರಾಕ್ಷಸಿ.

೭. ಗಹನ—ಗೋಜಾದದ್ದು, ಬಿಡಿಸಲು ಕಷ್ಟವಾದದ್ದು. ಚಾರುಹಾಸಿನಿ—ಮನೋಹರವಾದ ನಗುವುಳ್ಳವಳು. ನಿವಾಸ—ಮನೆ.

೮. ವಿಷಾದ—ವ್ಯಸನ. ತನೂಜ—ಮಗ. ನಂದನ—ಮಗ. ವಸುಂಧರೆ—ಭೂಮಿ. ಅವತರಿಸಿ—ಇಳಿದುಬಂದು. ದೇವವ್ರತಿ—ಶ್ರೇಷ್ಠವಾದ ಬ್ರಹ್ಮಚರ್ಯದ ವ್ರತವುಳ್ಳವನು. ಸ್ವೇಚ್ಛಾಮೃತ್ಯು—ಇಷ್ಟ ಬಂದಾಗ ಮರಣ ಹೊಂದಬಲ್ಲವನು. ಭೀಷ್ಮ—ಭಯಂಕರ. ಶರಶಯನ—ಬಾಣಗಳ ಹಾಸಿಗೆ. ವಿಪತ್ತಿ—ಕೇಡು. ವಿಯೋಗ—ಅಗಲುವಿಕೆ. ಧೃಷ್ಟ—ವಿನಯವಿಲ್ಲದವನು. ಪಂಚತ್ವ—ಸಾವು.

೯. ಅಂಗವಿಷಯ—ಅಂಗದೇಶ. ಕಾರ್ಮುಕ—ಬಿಲ್ಲು. ಕರ್ಣಧಾರ—ನಾವೆಯನ್ನು ನಡಸಿಕೊಂಡು ಹೋಗುವ ನಾವಿಕ. ವ್ಯಾಘ್ರಕೇತನ—ಬಾವುಟದಲ್ಲಿ ಹುಲಿಯುಳ್ಳವನು. ಶಲ್ಯ—ಚುಚ್ಚಿಕೊಳ್ಳುವ ಆಯುಧ. ಅಗ್ರಜನ್ಮ—ಅಣ್ಣ. ಪನ್ನಗಪತಾಕ—ಹಾವಿನ ಬಾವುಟದವನು. ಛಲದಂಕಮಲ್ಲ—ಛಲವನ್ನೇ ಗುರುತಾಗಿ ಉಳ್ಳ ವೀರ.

೧೦. ಬ್ರಹ್ಮರು—ಬ್ರಾಹ್ಮಣಜಾತಿಯಲ್ಲಿ ಹುಟ್ಟಿದವರು. ಭೋ—ಸ್ವಾಮೀ ಎಂಬಂತೆ ಸಂಬೋಧನೆ. ಧೋ—ಅಯ್ಯೋ. ವಿರಸವಾಗಿ—ವಿಶ್ವಾಸವಿಲ್ಲದೆ. ನಗರಾಜ—ಪರ್ವತರಾಜ, ಹಿಮಾಲಯ. ಪಿಂಗಾಕ್ಷ—ಕಂದುಬಣ್ಣದ ಕಣ್ಣುಳ್ಳ ದುರ್ಯೋಧನ. ವಿರೂಪಾಕ್ಷ—ಈಶ್ವರ. ಅಕಾರ್ಯನಾದ—ಮಾಡಬಾರದುದನ್ನು ಮಾಡುವ. ಅಹಿಕೇತನ—ಹಾವಿನ ಬಾವುಟದವನು.

೧೧. ಶೀರ್ಷಕ—ತಲೆಯನ್ನು ಕಾಪಾಡುವ ತೊಡಿಗೆ. ಅಕ್ಷಯ—ನಾಶವಿಲ್ಲದ್ದು. ಊರ್ಜಿತ—ಅಡ್ಡಿಯಿಲ್ಲದೆ ಬೆಳೆದ. ಬಿಲ್ಲೋಜ—ಬಿಲ್ಲು ಕಲಿಸುವ ಗುರು. ಗಾಂಡೀವಿ—ಗಾಂಡೀವವುಳ್ಳ ಅರ್ಜುನ. ಶರಾಸಾರ—ಬಾಣದ ಸತ್ತ್ವ. ಸಮುಚಿತ—ಯುಕ್ತ. ಸಿಂಧುಪುತ್ರ—ನದಿಯ ಮಗ, ಭೀಷ್ಮ. ಕಳಶಾರೋಹಣ—ಕಳಶ ಏರಿಸಿದ್ದು. ಆಕ್ರಂದನಮಾಡು—ಕೂಗಿಕೊ. ನಿಚ್ಚಣಿಕೆ—ಏಣಿ.

೧೨. ಕುರುಪ್ರಭವ—ಕುರುವಂಶದಲ್ಲಿ ಹುಟ್ಟಿದವರು. ಅಂಜನಾತನಯ—ಆಂಜನೇಯ. ಅಳುಕಿ—ಹೆದರಿ. ಒಟ್ಟಿದ—ರಾಶಿಮಾಡಿದ. ಭದ್ರಮನನಾದ—ಒಳ್ಳೆಯದರಲ್ಲಿ ಮನಸ್ಸುಳ್ಳ. ಏಕಾಂಗವಿಜಯ—ಒಂಟಿಯಾಗಿ ಸಾಧಿಸಿದ ಗೆಲವು. ಹೆರರು—ಇತರರು. ಪುಟಭೇದನ—ನಗರ. ಪಟುತರ—ಹೆಚ್ಚು ಸಮರ್ಥ. ಕವಾಟಪುಟ—ಮುಚ್ಚಿದ ಬಾಗಿಲು.

೧೩. ಆಘಾತ—ಏಟು. ವಿಘಾತ—ವಿಶೇಷವಾದ ಏಟು. ಕಾರಿದ—ತಿಂದುದನ್ನು ವಾಂತಿಮಾಡಿಕೊಂಡ. ಅದಟ—ವೀರ. ಬಾಹುವಿಕ್ರಮ—ತೋಳುಬಲ. ಯಮಳರು—ಅವಳಿಗಳು, ನಕುಲಸಹದೇವರು. ಅಮಲರು—ಶುದ್ಧರು.

೧೪. ಕುರುಕುಲಾಂಬರಭಾನು—ಕುರುಕುಲವೆಂಬ ಆಕಾಶದಲ್ಲಿ ಸೂರ್ಯನಂತಿರುವ ದುರ್ಯೋಧನ. ಅಟ್ಟಹಾಸ—ಮಿತಿಮೀರಿದ ಕೇಕೆನಗು. ಪೃಥಾತನ

ಯರು—ಕುಂತಿಯ ಮಕ್ಕಳು. ಉದ್ಧತರು—ವಿನಯವಿಲ್ಲದವರು. ಆಕರ್ಷಣ—ಎಳೆಯುವಿಕೆ. ಸಿಡಿಲ್ದು—ಸಿಡಿಲಿನಂತೆ ಕೋಪಗೊಂಡು. ಪೃಥೆ—ಕುಂತಿ.

೧೫. ಅಂಗಪತಿ—ಅಂಗರಾಜ, ಕರ್ಣ. ಕೋದು—ಪೋಣಿಸಿ. ಗಂಡು ಮೊತ್ತು—ಗಂಡುವಾಸ. ಕಾನನ—ಕಾಡು. ವಲ್ಕಲ—ನಾರುಮಡಿ. ಮತ್ಸ್ಯ—ಮತ್ಸ್ಯದೇಶದ ವಿರಾಟ. ಭವ—ಜನ್ಮ. ಸಾಹಸಧನ—ಸಾಹಸವನ್ನೇ ಐಶ್ವರ್ಯವನ್ನಾಗಿ ಉಳ್ಳವನು. ಪಂಚವಲ್ಲಭೆ—ಐವರು ಗಂಡಂದಿರುಳ್ಳವಳು. ಮೋದು—ಎರಗಿ ಹೊಡೆ. ಮಿಳ್ಮಿಳನೆ—ಪಿಳಿಪಿಳನೆ ಕಣ್ಣುಬಿಟ್ಟು. ಹೆಮ್ಮಾತು—ದೊಡ್ಡ ಮಾತು. ಗಂಡು—ಪರಾಕ್ರಮ. ಸುಭಟಾಲಾಪ—ವೀರರು ಆಡುವ ಮಾತು.

೧೬. ಸಂಕ್ರಂದನ—ಇಂದ್ರ. ಪಾಕಶಾಸನ—ಇಂದ್ರ. ಕೇತುದಂಡ—ಧ್ವಜದ ಕಂಬ. ಪ್ರಧ್ವಂಸಿ—ನಾಶಮಾಡುವವನು. ಸೂತಾವತಾರ—ರಥ ನಡಸುವವನ ಅವತಾರ.

೧೭. ಪದ್ಮೋದರ—ಕೃಷ್ಣ. ನಿರಾಕರಿಸು—ಅಲಕ್ಷ್ಯದಿಂದ ಕಾಣು. ಸಮುದ್ಯೋಗ—ಯುದ್ಧದ ಪ್ರಯತ್ನ. ಪ್ರತಿನೃಪ—ಶತ್ರುರಾಜ. ಅಸಹಾಯ—ಸಹಾಯ ಬೇಕಿಲ್ಲದವನು. ವಾಕ್ಯಾರ್ಥ—ಚರ್ಚೆ. ದೈವಾಯತ್ತ—ದೈವದಿಂದ ಬಂದದ್ದು. ಪುರುಷಕಾರ—ಪುರುಷಪ್ರಯತ್ನ. ಅಂತು—ಹೋಗಿ ತಾಗಿ. ಆಳ ವಡಿಸಿಕೊ—ಸೇರಿಸಿಕೊ. ಮಾರ್ಕೊಂಡು—ಎದುರಾಗಿ. ನರ, ನರನ ಮಗ—ಅರ್ಜುನ, ಅಭಿಮನ್ಯು. ಮತ್ಸ್ಯನ ಮಗ—ಉತ್ತರ. ಶಿಖಂಡಿ—ದ್ರುಪದನ ಮಗ.

೧೮. ವೃಷಸೇನ—ಕರ್ಣನ ಮಗ. ಪರುಷ—ಕಠಿಣವಾದ. ಕರ್ಕಶತನು—ಕಠಿನವಾದ ಮೈ.

೧೯. ಕೈಗೆಮಾಡು—ವಶಪಡಿಸಿಕೊ. ಕುಡಿ—ಬಳ್ಳಿಯ ತುದಿ. ಮಿಡಿ—ಹೀಚುಕಾಯಿ. ಹಲಿ—ಹಲಾಯುಧನಾದ ಬಲರಾಮ. ಕಾನೀನ—ಕನ್ನಿಕೆಯಾಗಿದ್ದ ಕುಂತಿಗೆ ಹುಟ್ಟಿದ ಮಗ, ಕರ್ಣ. ಅಳಿದ—ಸತ್ತ.

೨೦. ಬೀಡು—ಪಾಳೆಯ, ತಂಗಿದ ವಾಸಸ್ಥಾನ. ಸಕಲಾವನಿ—ಸಮಸ್ತ ಭೂಮಿ. ಸರಸಿಜಬಾಂಧವತನಯ—ಕಮಲಕ್ಕೆ ಬಂಧುವಾದ ಸೂರ್ಯನ ಮಗ. ಅಂಧನರೇಂದ್ರ—ಕುರುಡು ದೊರೆ, ಧೃತರಾಷ್ಟ್ರ. ಪ್ರಸ್ತಾಪ—ಸಂದರ್ಭ. ಸರ್ವಾಂಗ ವಿಕಲ—ಎಲ್ಲಾ ಅಂಗಗಳನ್ನೂ ಕಳೆದುಕೊಂಡಿದ್ದ.

೨೧. ಬಲವಿಕಲ—ಸೈನ್ಯವನ್ನು ಕಳೆದುಕೊಂಡವನು. ಸಮಾಲಿಂಗಿತನಾಗಿ—ಹೊಂದಿದವನಾಗಿ. ಶೋಕಾಕುಲೀಕೃತಚಿತ್ತರು—ದುಃಖದಿಂದ ಕದಡಿಹೋದಂತಹ ಮನಸ್ಸುಳ್ಳವರು. ಮೂರ್ಧಾಭಿಷಿಕ್ತ—ತಲೆಗೆ ಅಭಿಷೇಕ ಹೊಂದಿದವನು. ಪ್ರಲಾಪಿಸು—ಗೋಳಾಡು. ಗೋತ್ರ—ತನ್ನ ವಂಶ, ಪರ್ವತ. ಸಿಗ್ಗು—ನಾಚಿಕೆ.

ವಿಧಾತ್ರ—ವಿಧಿ. ಕೌಂತೇಯರು—ಕುಂತಿಯ ಮಕ್ಕಳು. ಬಾಷ್ಪೋದ್ರೇಕ—ಕಣ್ಣೀರಿನ ಅಧಿಕ್ಯ. ಶಿಶಿರ—ಶೀತವಾದ, ತಂಪಾದ. ಇರವು—ಸ್ಥಿತಿ. ಅಳುಕಿ ಬಳುಕಿ—ಹೆದರಿ ನಡುಗಿ.

೨೨. ಉರಗ—ಹಾವು. ಅನಿಮಿತ್ತರಿಪು—ಕಾರಣವಿಲ್ಲದೆ ಶತ್ರುವಾದವನು. ಪಾಶಪಾಣಿ—ಯಮ. ತಾಡಿತ—ತಾಗಿಸಲ್ಪಟ್ಟ. ದ್ವಂದ್ವ—ಎರಡು. ಆಕ್ರಂದನ ಮಾಡು—ಗಟ್ಟಿಯಾಗಿ ಕೂಗಿಕೊ. ವಿಪ್ರಲಾಪ—ಅತಿಯಾದ ಗೋಳು. ಉಪಸಂಹರಿಸು—ಕೊನೆಗಾಣಿಸು. ತಳಿಯುವ—(ಮೂರ್ಛೆಗೊಂಡವರ ಮೇಲೆ) ಚಿಮುಕಿಸುವ. ಲಜ್ಜಾಭರ—ಹೆಚ್ಚಾದ ಲಜ್ಜೆ.

೨೩. ನಮಿಸಿದ—ಬಗ್ಗಿಸಿದ. ಉತ್ತಮಾಂಗ—ತಲೆ. ಅವಧರಿಸು—ಗಮನಿಸು. ತೆಬ್ಬರಿಸು—ಕೈಯಿಂದ ತಟ್ಟಿ ಎಚ್ಚರಗೊಳಿಸು. ಅಂಧ—ಕುರುಡ. ಅನುಬಂಧ—ಸೇರುವಿಕೆ. ಪರಿಣತ—ಹಣ್ಣಾಗಿ ಪಕ್ವವಾದ. ಅಲಂಘನೀಯ—ಮೀರಿ ಹೋಗಬಾರದ್ದು. ಸಮರದ ವ್ಯಾಪಾರ—ಯುದ್ಧದ ಕೆಲಸ.

೨೪. ಮರುಕೊಳಿಸು—ಪುನಃ ಮೇಲೇಳು. ಅಭಿಮುಖನಾಗು—ಎದುರಿಗೆ ಮುಖಕೊಟ್ಟು ನಿಲ್ಲು. ಪೂರ್ವಪಕ್ಷ—ವಾದದಲ್ಲಿ ಮೊದಲು ಆಡಿದ ಮಾತು, ಪಾಂಡವರಿಗೆ ರಾಜ್ಯ ಕೊಡುವುದಿಲ್ಲವೆಂಬುದು. ಸಿದ್ಧಾಂತ—ನಿಶ್ಚಯ. ಹೆಸರ—ಪ್ರಸಿದ್ಧರಾದ. ನಿವೇದಿಸು—ಒಪ್ಪಿಸು. ಕೀಳಾಸೆ—ತುಚ್ಛವಾದ ಆಸೆ.

೨೫. ಅನುಬಂಧ—ಜೋಡಣೆ.

೨೬. ಅಡಿಗಡಿಗೆ—ಹೆಜ್ಜೆಹೆಜ್ಜೆಗೆ. ಎಡೆ—ಅವಕಾಶ. ದಡಿಗ—ದೊಡ್ಡ. ಕಬಂಧ—ತಲೆ ಇಲ್ಲದ ಮುಂಡ. ಹಲ—ನೇಗಿಲು. ವಿಲಾಸಿತ—ವಿಲಾಸಗೊಂಡ, ಕಾಂತಿಯುಕ್ತವಾದ.

೨೭. ಮಾನಸ್ತಂಭ—ಕಂಬದಂತೆ ಕದಲದ ಮಾನವುಳ್ಳವನು. ನಸುಮುರಿದ—ಸ್ವಲ್ಪ ಮುರಿದ. ಅರುಣಜಲ—ಕೆಂಪುನೀರು, ರಕ್ತ. ಬೀಭತ್ಸ—ಅಸಹ್ಯವನ್ನು ಉಂಟುಮಾಡುವ. ಪಡೆ—ಸೈನ್ಯ. ಏರಿದವರು—ಉತ್ಸಾಹದಿಂದ ಎದ್ದವರು. ಉಚ್ಚಿದ—ಒರೆಯಿಂದ ತೆಗೆದ. ಭೀರು—ಭಯಗೊಂಡವನು. ನಿರತೆ—ಆಸಕ್ತಿ. ಸಿಮಿರಿಸು—ಹೆಚ್ಚಿಸು. ಪರಿಣತ—ಸಮರ್ಥ.

೨೮. ಅಭಿನವ—ಹೊಸ. ನೆತ್ತರು—ರಕ್ತ. ಹುಲುಮರುಳು—ಅಲ್ಪವಾದ ಭೂತ. ಜಗುಳಿದ—ಜಾರಿದ. ಇಳೇಶ್ವರ—ಭೂಮೀಶ್ವರ. ಊರುಭಂಗ—ತೊಡೆ ಒಡೆಯುವುದು. ಪುರುಳು—ಸಾರ. ಧೂರ್ಜಟಿ—ಈಶ್ವರ.

೨೯. ಜರ್ಜರಿತಗಾತ್ರತ್ರಾಣ—ಸಡಿಲವಾದ ದೇಹವೂ ತ್ರಾಣವೂ ಉಳ್ಳವನು. ಪಿನಾಕಪಾಣಿ—ಈಶ್ವರ. ಹುಡಿ—ನೆಲದ ಧೂಳು.

೩೦. ಪಿನಾಕ—ಶಿವನ ಧನುಸ್ಸು. ಒಡಲು—ದೇಹ. ದಿಕ್ಚಕ್ರ—ಸುತ್ತಲೂ ಇರುವ ದಿಕ್ಕುಗಳು. ಹರಪಾದಾಂಬುಜಯುಗ್ಮ—ಈಶ್ವರನ ಎರಡು ತಾವರೆಯಂಥ ಪಾದಗಳು. ಚಾಪಾಗಮ—ಬಿಲ್ವಿದ್ಯೆ. ಉಪೇಕ್ಷಿಸು—ಅಸಡ್ಡೆಯಿಂದ ಕಾಣು. ಅರೆ ಮುಗಿದ—ಅರ್ಧಮುಚ್ಚಿದ. ಅಸುರತರ—ಹೆಚ್ಚು ಕ್ರೂರ. ಪ್ಯೆಗಲಿ—ಕಾದುವ ವೀರ. ಅಸಮಬಲ—ತನಗೆ ಸಮಾನರಾದ ಬಲಶಾಲಿಗಳಿಲ್ಲದವನು. ಅಸಂಭವ—ಉಂಟಾಗಲಾರದ್ದು. ಏಕದೇಶ—ಒಂದು ಅಂಶ.

೩೧. ಸಾಹಸಧನ—ಸಾಹಸವೇ ಧನವಾಗಿ ಉಳ್ಳವನು. ಜಲಾಂಜಲಿ—ಬೊಗಸೆ ನೀರು, ತರ್ಪಣ. ಕ್ರಮ ವಿಪರ್ಯಯ—ಸರದಿಯನ್ನು ಹಿಂದುಮುಂದು ಮಾಡುವುದು. ವೃಷಸೇನ—ಕರ್ಣನ ಮಗ. ಕೋಪಾನಲ—ಕೋಪವೆಂಬ ಬೆಂಕಿ. ಕವಳವಾದ—ತುತ್ತಾದ. ರೂಕ್ಷ—ಕ್ರೂರ.

೩೨. ಚೂಡಾಮಣಿ—ತಲೆಯೊಡವೆ, ಶ್ರೇಷ್ಠ. ಅಕ್ಷಯ—ಕೊನೆಯಿಲ್ಲದ. ಪ್ರಹರಣ—ಏಟು. ಗಜಘಟೆ—ಆನೆಗಳ ಗುಂಪು. ಭೂಮಿಸುತ—ಭಗದತ್ತ. ಹಿಡಿಂಬರಿಪು—ಭೀಮ. ಕೆಳಗಿವಿ ಕೇಳು—ಕೇಳಿಯೂ ಕಿವಿಗೆ ಹಾಕಿಕೊಳ್ಳದಿರು. ಸೆರೆ—ರಕ್ತನಾಳ.

೩೩. ಕಪಾಲ—ತಲೆಬುರುಡೆ. ನಿಶಾಚರಿ—ರಾತ್ರಿ ತಿರುಗಾಡುವ ರಾಕ್ಷಸಿ. ಪಂಚತ್ವ—ಸಾವು. ಸೋಮಾಮೃತ—ಯಜ್ಞಕಾಲದಲ್ಲಿ ಕುಡಿಯುವ ಸೋಮರಸ. ಉಲ್ಲಂಘನ—ಮೀರುವಿಕೆ. ಭಂಗ—ಅವಮಾನ, ಹಾನಿ. ಪಿಂಗಾಕ್ಷ—ಕಂದುಬಣ್ಣದ ಕಣ್ಣುಳ್ಳವನು, ದುರ್ಯೋಧನ. ಕಳೇಬರ—ಜೀವವಿಲ್ಲದ ದೇಹ. ಕರಾಳ—ಭಯಂಕರ. ಅಂಗ—ಶರೀರ.

೩೪. ವಿಹ್ವಲ—ಕದಡಿಹೋದ. ಭೂತಲೇಶ್ವರ—ರಾಜ. ದಕ್ಷಿಣಮುಷ್ಟಿ—ಬಲಗೈಯ ಮುಷ್ಟಿ. ಕೇತುದಂಡ—ಬಾವುಟದ ಕಂಬ. ಜೀಯ—ಸ್ವಾಮಿ. ದಾನವರಿಪು—ಅಸುರಾರಿ, ಕೃಷ್ಣ.

೩೫. ಪೀಳಿಗೆ—ಸಂತತಿ. ಹುರಿಗಣೆ—ಅಮೋಘವಾದ ಬಾಣ. ಇನನಂದನ—ಸೂರ್ಯನ ಮಗ. ಸಜ್ಜನಿಕೆ—ಸುಜನನ ಗುಣ. ಪರಶುಧರ—ಕೊಡಲಿ ಹಿಡಿದ ರಾಮ. ಚಕ್ರಧರ—ಕೃಷ್ಣ.

೩೬. ವಿಧಾತ್ರ—ವಿಧಿಯೇ. ರಾಧಾನಂದನ—ರಾಧೆಯ ಮಗ, ಕರ್ಣ. ಓಲಗ—ರಾಜನ ಸಭೆ. ಮುಕ್ತಿ—ಬಿಡುಗಡೆ. ಅನ್ಯಮಂಡಲ—ಶತ್ರುಗಳ ಗುಂಪು. ವಾಕ್ಜಲ—ಮಾತೆಂಬ ನೀರು. ಜಲದಾನ—ತರ್ಪಣ. ದರ್ಪಣ—ಕನ್ನಡಿ. ಮಂಡನ—ಅಲಂಕಾರ. ಅವಧಾರಿಸಿ—ಮನಸ್ಸಿನಲ್ಲಿ ತಾಳಿ. ಹಾಸ—ನಗು.

೩೭. ಕಟ್ಟಾಯ—ಕಠಿಣವಾದ ಸಂದರ್ಭ. ಮೇಳದಾಳು—ಜೊತೆಯವನು. ಪಡೆ—ಸೈನ್ಯ. ಐತರು—ಬರು, ಬಾ.

೩೮. ಶರಶಯನಗತ—ಬಾಣದ ಹಾಸಿಗೆಗೆ ಹೋದವನು. ಕುರುಕುಲೋತ್ತಂಸ—ಕುರುಕುಲಕ್ಕೆ ತಲೆಯೊಡವೆ, ಶ್ರೇಷ್ಠ.

೩೯. ದಿಕ್ಕರಿ—ದಿಗ್ಗಜ. ಕರ—ಸೊಂಡಿಲು. ಗೇಯ—ಹಾಡು. ಕೌರವಧವಳ—ಶುಭ್ರನಾದ ಕೌರವ. ಬರವು—ಬರುವಿಕೆ. ಮೃಗೇಂದ್ರಾಸನ—ಸಿಂಹಾಸನ. ವಧೂಜನ—ಸ್ತ್ರೀಯರು. ಭಾವಿತಾತ್ಮರು—ಆತ್ಮದ ಗುಣಗಳನ್ನು ಬೆಳೆಸಿದವರು. ಕಮಲನಾಭ—ವಿಷ್ಣು. ನಳಿನ—ಕಮಲ. ಮನಸ್ಸಂಭವ—ಮನಸ್ಸಿನಲ್ಲಿ ಹುಟ್ಟಿದ. ಭರತಾನ್ವಯ—ಭರತವಂಶ.

೪೦. ಅವಿಚ್ಛಿನ್ನ—ನಡುವೆ ಬಿಡದೆ ಒಂದೇ ಸಮನಾದ. ಗೋತ್ರಕಲಹ—ಒಂದೇ ವಂಶಕ್ಕೆ ಸೇರಿದವರಲ್ಲಿ ಜಗಳ. ಪೂರ್ವಕ್ರಮ—ಹಿಂದಿನ ರೀತಿ. ಅಹಿತರು—ಶತ್ರುಗಳು, ಆಗದವರು.

೪೧. ವಾರವನಿತೆಯರು—ವೇಶ್ಯೆಯರು. ಅಂತಕಾತ್ಮಜ—ಯಮನ ಮಗ. ಬಿಲ್ಲಗುರು—ದ್ರೋಣ. ಧವಳಾತಪತ್ರ—(ರಾಜನ) ಬಿಳಿಯ ಕೊಡೆ. ಅಖಂಡಿತ—ಚೂರಾಗದ, ಪೂರ್ಣವಾದ. ನಿರ್ವ್ಯಾಜ—ಬೇರೆ ಕಾರಣವಿಲ್ಲದ, ಒಂದೇ ಸಮನಾದ. ಅಕುಲಿತ—ವ್ಯಾಪಿಸಿ ಕಲಕಿದ.

೪೨. ಉದ್ಧತಿ—ಅವಿನಯ. ಆಯತ—ವಿಸ್ತಾರವಾದ. ಕ್ಷಿತಿಪಾಲ—ಭೂಪಾಲ, ರಾಜ. ಗದಾಪರಿಘ—ಗಡಹಾರೆಯಂತೆ ಉದ್ದವಾದ ಗದೆ. ನುಗ್ಗಾಗೆ—ನುಗ್ಗಾಗುವಂತೆ. ವಸುಂಧರಾ—ಭೂಮಿ. ಈಯನು—(ಅವಕಾಶ) ಕೊಡುವುದಿಲ್ಲ. ಪತಾಕೆಯ ಪಟ—ಬಾವುಟದ ಬಟ್ಟೆ. ಕುರುವಂಶ—ಬಿದಿರಿನಂತೆ ಎತ್ತರವಾಗಿ ಬೆಳೆದ ಕುರುಗಳ ಮನೆತನ. ಕಲಂಕ—ಕೆಟ್ಟ ಹೆಸರು.

೪೩. ಆಜ್ಞಾಲಂಘನ—ಹೇಳಿದ ಮಾತು ಮೀರುವಿಕೆ. ಆಗ್ರಹ—ಕೋಪ. ವಿಸ್ಮಯ—ಆಶ್ಚರ್ಯ. ಅಶೇಷ—ಒಂದುಳಿಯದೆ ಎಲ್ಲಾ. ಸುಭಟಾನೀಕ—ವೀರರ ಸೈನ್ಯ. ನಿಃಶ್ಶೇಷ—ಒಂದೂ ಉಳಿಯದ ಹಾಗೆ. ವಿಶೇಷಕ—ವಿಶಿಷ್ಟವಾದ ಗುಣಗಳುಳ್ಳ. ಚಲಿತ—ಕದಲಿದವನು.

೪೪. ಅವಧಾರಿಸಿ—ಗಮನಿಸಿ. ಎಡೆ—ಸ್ಥಳ. ಗುರುಜನರು—ಹಿರಿಯರು. ಅಭ್ಯರ್ಥನೆ—ಪ್ರಾರ್ಥನೆ. ಐದಿಬರು—ಸಮೀಪಿಸು. ಉರ್ಚು—ಹಿಡಿದು ಎಳೆ.

೪೫. ದುರ್ನಯ—ಕೆಟ್ಟ ನಡತೆ. ಸಿರಾಕರ—ಸಿರಿಗೆ ಆಶ್ರಯಸ್ಥಾನ. ಕಮಲಾಕರ—ತಾವರೆಯ ಕೊಳ. ನಿಷೇಧಿಸು—ತಡೆ. ಕೋಕ—ಚಕ್ರವಾಕ.

ಮರಾಳ—ಹಂಸ. ವಿಹಂಗಮ—ಆಕಾಶದಲ್ಲಿ ಹೋಗುವ ಪಕ್ಷಿ. ಜಲಜಾಕರ—ಕಮಲಾಕರ, ತಾವರೆಯ ಕೊಳ.

೪೬. ಗರುಡಧ್ವಜ—ವಿಷ್ಣು. ಕುರುಕುಲಾಂತಕ—ಭೀಮ. ಉತ್ಸುಕ—ಕಾತುರನಾದ. ಬೃಹದ್ಗಾತ್ರ—ಗಾತ್ರದಲ್ಲಿ ದೊಡ್ಡದಾದ. ಶೈಲ—ಪರ್ವತ. ವಿಕಟ ಲಲಾಟ—ವಿಕಾರವಾದ ಹಣೆ. ಶಿಲಾಪಟ್ಟ—ಕಲ್ಲಿನ ಹಲಗೆ. ವಿಪುಲವಾದ—ಹೆಚ್ಚಾದ. ಅವಸರಿಸಿ—ಆತುರಗೊಂಡು. ವಸುಮತಿ—ಭೂಮಿ.

೪೭. ಭುಜಗಧ್ವಜ—ಹಾವಿನ ಬಾವುಟದವನು. ಹಿರಣ್ಯಗರ್ಭ—ಬ್ರಹ್ಮ. ಸಂದ—ಸಿದ್ಧನಾದ. ಅಜಾತಶತ್ರು—ಯುಧಿಷ್ಠಿರ. ನವೆ—ಕೃಶನಾಗು. ಉರ್ವೀ—ಭೂಮಿ. ಹರಿಯಲು—ಹಾವು ಮುಂದೆ ಸಾಗಲು. ತೊಕ್ಕರಿಸು—ಪಟ್ಟಿನಲ್ಲಿ ಸಿಕ್ಕಿಸಿಕೊಂಡು ಉಸಿರು ಕವಿಯು. ಅನಲಜೆ—ಬೆಂಕಿಯಲ್ಲಿ ಹುಟ್ಟಿದ ದ್ರೌಪದಿ.

೪೮. ಹಾಸೂ ಹೊಕ್ಕೂ—ನೇರವಾಗಿಯೂ ಅಡ್ಡವಾಗಿಯೂ. ಪಕ್ಷರಕ್ಷೆ—ಪಕ್ಷಗಳನ್ನು ಕಾಪಾಡುವ ಸಾಧನ. ಕೋಡು—ಕೊಂಬು. ಹಾದುಕಟ್ಟು—ಸ್ಥಿತಿ ಕಟ್ಟು. ಸಿಂಧುರ—ಆನೆ. ಕುತ್ತಿನೋಡು—ತಿವಿದುನೋಡು. ಚರಣಸಂಘಟ್ಟ—ಕಾಲಿನ ತುಳಿತ. ಮುಕುಟ—ಕಿರೀಟ. ಶೋಧಿಸು—ಹುಡುಕು. ತೊಳಲಿ—ಅಲೆದಾಡಿ. ಬಣಬೆ—ರಾಶಿ. ಅಟ್ಟೆ—ಮುಂಡ. ಇಟ್ಟೆಡೆ—ಇರುಕಾದ ಸ್ಥಳ.

೪೯. ಪಿಕ್ಕೆ—ಕಣ್ಣುಮಗು. ಮೂತಿ—ಮೇಲೆಪ್ಪು. ಅರಸಿ—ಹುಡುಕಿ. ಬಿಟ್ಟಬೀಡು—ತಂಗಿದ್ದ ವಾಸಸ್ಥಾನ. ಬಗೆ—ಮನಸ್ಸು ಮಾಡು. ರಾಜಕಪೋತ—ಅಪಶಕುನದ ಪಕ್ಷಿ. ಈ ಪಕ್ಷಿ ಹೊಕ್ಕ ಅರಮನೆ ಹಾಳು. ಕೇತು—ನಾಶಕಾರಣ.

೫೦. ಶತ್ರುವಿನ ತಾಯಿ—ಗಾಂಧಾರಿ. ಭ್ರಮಿಸು—ತಿರುಗು. ಅಭ್ರವಿಭ್ರಮ—ಗಗನದಲ್ಲಿ ಮೆರೆಯುತ್ತಿರುವ. ನೀಳ್ದು—ಉದ್ದವಾಗಿ ನೀಡಿ. ಬಳುಕು—ನಡುಗು. ಪಾಂಡವಬಲಪ್ರಾಕಾರ—ಪಾಂಡವರ ಸೈನ್ಯವನ್ನು ರಕ್ಷಿಸುವ ಸುತ್ತುಗೋಡೆ. ಬಿಲ್ಲುಂಬೆರಗಾಗು—ಬಿಲ್ಲಿನಂತೆ ನಿಶ್ಚೇಷ್ಟಿತನಾಗು. ಸಮುಚಿತಾಚಾರ—ಯುಕ್ತವಾದ ನಡತೆ. ಉರಸ್ಥಲ—ಎದೆಯ ಎಡೆ. ಸೇಕ—ಚಿಮುಕಿಸಿದ್ದು. ಅಪರಾಧಶತ—ನೂರು ತಪ್ಪು. ಬದ್ಧಾಂಜಲಿಯಾಗಿ—ಕೈ ಮುಗಿದು.

೫೧. ಆಮ್ನಾಯದ—ಹಿತ. ಸಂಸೂಚಿತ—ಚೆನ್ನಾಗಿ ತೋರಿಸಲ್ಪಟ್ಟ. ಪರಿಭಾಷೆ—ಸುತ್ತುಮುತ್ತಿನವರ ಮಾತು.

೫೨. ಸಿಗ್ಗು—ನಾಚಿಕೆ. ಸಾರಸ—ಕೊಳದ ಬಳಿಯ ಬಿಳಿಯ ಪಕ್ಷಿ. ರವ—ಧ್ವನಿ. ಅಭ್ಯಾಗತ—ಮನೆಗೆ ಬಂದವನು. ಅರ್ಘ್ಯ—ಕೈಗೆ ನೀರು. ಮನ ನನ್ನು ಕೊಳ್ಳು—ಮನೋಹರನಾಗು. ಹಗೆವನು—ಶತ್ರು. ದಿಗ್ವಲಯ—ಸುತ್ತಲೂ ಇರುವ ದಿಕ್ಕುಗಳು. ಮರುದನಿ—ಪ್ರತಿಧ್ವನಿ. ಗಜರು—ಗದರು.

[illegible]—[illegible]. [illegible]—[illegible] ಹೆಗಲು. [illegible]—[illegible]. [illegible]—[illegible]. [illegible]—[illegible] ಮಾತಾಡು. [illegible]—[illegible]. [illegible]—[illegible] ಆಯುಧ.

೫೩. [illegible]—[illegible]. [illegible]—[illegible]. [illegible]—ವಂಶದ [illegible]. ಕದಡಿದೆ—ಕೆಣಕಿದೆ.

೫೪. [illegible]—[illegible]. ಕೌರವೇಂದ್ರ[illegible]—ಕೌರವೇಂದ್ರ[illegible] [illegible] ಮಹಾಯುದ್ಧ[illegible]. [illegible]—[illegible] ಅಧಿಕವಾದ [illegible]. [illegible]—[illegible]. ಅಳವು—[illegible]. [illegible]—[illegible].

೫೫. [illegible]—[illegible]. [illegible]—[illegible]. [illegible]—[illegible]. [illegible]—[illegible] [illegible] ಮಾಡು. [illegible]—[illegible]. ಗಂಡು—ಪರಾಕ್ರಮ.

೫೬. [illegible]—[illegible]. [illegible]—[illegible]. [illegible]—[illegible]. [illegible]—[illegible] ಬಟ್ಟೆ. [illegible]—[illegible].

೫೭. [illegible]—[illegible]. [illegible]—[illegible]. [illegible]—[illegible]. [illegible]—[illegible]. [illegible]—[illegible], [illegible].

೫೮. [illegible]—ಯುಕ್ತವಾದ ಮಾತು. ಗೋತ್ರ—ವಂಶ. [illegible]—[illegible], [illegible]. [illegible]—[illegible]. ವಸನ—ಬಟ್ಟೆ. ಸಂಕರ್ಷಣ—ಬಲರಾಮ. ಜಂಗಮ—ನಡೆದಾಡುವ.

೫೯. ಅಗ್ರಜಾತ—ಮೊದಲು ಹುಟ್ಟಿದವನು, ಅಣ್ಣ. [illegible]—[illegible]. [illegible]—[illegible]. ದ್ವಂದ್ವಯುದ್ಧ—ಇಬ್ಬರಿಗೆ ನಡೆಯುವ ಯುದ್ಧ.

೬೦. [illegible]—[illegible]. ವಜ್ರಧರ—ಇಂದ್ರ. [illegible]—[illegible]. ಅಳವು—ಪರಾಕ್ರಮ. [illegible]—[illegible].

೬೧. [illegible]—[illegible]. [illegible]—[illegible]. [illegible]—[illegible]. [illegible]—[illegible]. [illegible]—[illegible]. ಆದುರ—ವಿಕಾರವಾಗಿ ತಿರಿಚಿಕೊಂಡು.

೬೨. ಭೈರವಾಡಂಬರ—ಪ್ರಳಯರುದ್ರನ ಆಟೋಪ. ಚಕ್ರಭ್ರಮಣ—ಗುಂಡಾಗಿ ಮಂಡಲ ಸುತ್ತುವಿಕೆ. ಅವಕಾಶ—ಬಿಡುವಿನ ಸಮಯ. ಮತಿವಿಕಲನಾಗಿ—ಬುದ್ಧಿ ಕಳೆದುಕೊಂಡು.

೬೩. ಉಮ್ಮಳ—ಉದ್ವೇಗ. ಅಳಿವು—ನಾಶ. ಜರುಜು—ಜಬರ್ು, ದರ್ಪ. ಘಾತು—ಲೋಹದ ಅದಿರು. ಮಾರುತಿ—ಭೀಮ. ಹೊಟ್ಟೆಯಲ್ಲಿ ಹೂವುಳ್ಳ ಅತ—ಕೃಷ್ಣ. ಮರ್ಮ—ಮುರಿಯುವುದಕ್ಕೆ ಸುಲಭವಾದ ಸ್ಥಳ. ಸತ್ತಿಗ—ರಾಜನ ಛತ್ರವುಳ್ಳ ಭೀಮ.

೬೪. ಏಕಾದಶ—ಹನ್ನೊಂದು. ಮಾರ್ಕೊಂಡರೂ—ಎದುರಿಗೆ ಅಡ್ಡವಾದರೂ. ವಾಮಾಂಘ್ರಿ—ಎಡದ ಕಾಲು. ಉಜ್ಜ್ವಲಿಸಿದ—ಮೇಲಕ್ಕೆ ಚಿಮ್ಮಿದ. ತೋರಕಿಡಿ—ದೊಡ್ಡ ಕೆಂಡ. ತ್ರಿದಶ—ಸ್ವರ್ಗ. ಗುರುತಿನ—ಪ್ರಸಿದ್ಧನಾದ. ತೂರ್ಯ—ವಾದ್ಯ. ಸುರಾಂಗನೆ—ಅಪ್ಸರೆ.

೬೫. ವೇಣೀಸಂಹಾರ—ತಲೆಗೂದಲನ್ನು ಕಟ್ಟುವಿಕೆ. ಕಬರೀನೀವಿಬಂಧ—ತಲೆಯ ಕೂದಲಿನ, ನಡುವಿಗೆ ಸುತ್ತಿದ ಸೀರೆಯ, ಗಂಟು. ವಕ್ತ್ರೀ—ಮುಖವುಳ್ಳವಳು. ಋತ್ವಿಜರು—ಮಂತ್ರ ಹೇಳುವವರು. ಸಂಚಾರಕ—ಪ್ರೇರಕ, ನಡಸಿಕೊಂಡು ಹೋಗುವ ಶಕ್ತಿ.

೬೭. ಭಂಗ—ಅವಮಾನ. ಕಾಳಿಕೆ—ಕೊಳೆ. ಕರತಲ—ಕೈಯ ಒಳಭಾಗ. ಇಂದೀವರ—ಕನ್ನೈದಿಲೆ. ದ್ರೋಹದುರ್ಧರ—ತನ್ನ ದ್ರೋಹದಿಂದ ಸಹಿಸಲು ಕಷ್ಟವಾದವನು. ಕೇಯೂರ—ತೋಳಲ್ಲಿ ಧರಿಸುವ ಒಡವೆ.

೬೮. ಸ್ವನ—ಧ್ವನಿ. ಅಗ್ರಜಾನುಜರು—ಅಣ್ಣತಮ್ಮಂದಿರು.

೬೯. ಚಕ್ರಿ—ಕೃಷ್ಣ. ಅನಾಗತ—ಇನ್ನೂ ಬಾರದ, ಮುಂದೆ ಬರುವ. ಪರಿಚ್ಛೇದಮಾಡು—ಸುತ್ತಲೂ ಕತ್ತರಿಸು. ಮಂಥನ—ಕಡೆಯುವಿಕೆ.

೭೦. ಅಗ್ಗಳದ—ಬೆಲೆಯುಳ್ಳ. ಅಂತರ—ವ್ಯತ್ಯಾಸ. ನಿಕೃಷ್ಟ—ಹೀನ. ವಿಪರೀತವೃತ್ತಿ—ವ್ಯತಿರಿಕ್ತವಾದ ನಡತೆ. ವಿಡಂಬನಮಾಡು—ಮೂದಲಿಸು.

೭೧. ಬೆಂಡಾಗು—ಸಾರವನ್ನು ಕಳೆದುಕೊ. ಚೆಚ್ಚರ—ಜಾಗ್ರತೆ. ಭ್ರುಕುಟಿ—ಹುಬ್ಬು. ತರಳ—ಚಂಚಲವಾದ. ತಾಮ್ರ—ಕೆಂಪಾದ. ದರಿ—ಅಗಾಧವಾದ ಹಳ್ಳ, ಪ್ರಪಾತ. ತಳವೆಳಗಾಗು—ಕಳವಳಗೊಳ್ಳು. ಅಳಿಕುಲ—ದುಂಬಿಯ ಗುಂಪು. ನಿನೀಲ—ತುಂಬ ಕಪ್ಪು. ಕುಟಿಲಕುಂತಲ—ಕೊಂಕಿದ ತಲೆಗೂದಲು. ತಳವಾರೆ—ಬುಡಸಹಿತ. ಘಟಚೇಟಿ—ಗಡಿಗೆ ಹೊರುವ ದಾಸಿ. ಕುಳಿಕ—ವಿಷದ ಹಾವು. ಮೋದು—ಹೊಡೆ.

೭೨. ಉತ್ತರೀಯ—ಮೇಲೆ ಹೊದೆದ ವಸ್ತ್ರ. ವಸ್ತ್ರಾಂಚಲ—ಬಟ್ಟೆಯ ಸೆರಗು. ಪಾಂಸು—ಧೂಳು. ಅನುಬಲ—ಬೆಂಬಲ. ಪಂದಲೆ—ಆಗ ತಾನೆ ಕತ್ತರಿಸಿದ ಹಸಿಯ ತಲೆ. ತೊದಳು—ಭ್ರಮೆ. ಅಸುಗಣ—ಜೀವಗಳ ಗುಂಪು. ಉತ್ಕ್ರಾಂತಿ—ಮೇಲೆ ಹೋಗುವಿಕೆ. ಗಹನ—ಕಷ್ಟಸಾಧ್ಯ. ನೂಪುರ—ಕಾಲು ಗೆಜ್ಜೆ. ಮೇಖಲೆ—ಡಾಬು. ಅಳುಕು—ಭಯಪಡು.

೭೩. ನಿಯೋಜಿಸಿ—ಕಾರ್ಯಕ್ಕೆ ಹಚ್ಚಿ. ವ್ಯಂಜಿತ—ಸುಂದರವಾದ, ವ್ಯಕ್ತವಾದ. ಕರತಲ—ಅಂಗೈ. ಕರವಾಳ—ಕತ್ತಿ. ನೇಸರು—ಸೂರ್ಯ. ಅರಿವು—ಜ್ಞಾನ. ವಿವೇಕವಿಕಳ—ವಿವೇಕವಿಲ್ಲದವನು.

೭೪. ವಿಸರ್ಜನ—ಬಿಡುವಿಕೆ. ಉನ್ಮುಖ—ಮುಖವೆತ್ತಿದವನು. ಸುಹೃದ್ವದನ—ಸ್ನೇಹಿತನ ಮುಖ. ಕರ—ಕೈ, ಕಿರಣ. ಚಕ್ರಾಂಕ—ಚಕ್ರವಾಕ, ಚಕ್ರವರ್ತಿ. ಕ್ರಮದಿಂದ—ಕ್ರಮವಾಗಿ, ಕಾಲಿನಿಂದ. ಅಂಬರ—ಆಕಾಶ, ಬಟ್ಟೆ. ಅರ್ಕ—ಸೂರ್ಯ.

೭೫. ಪರಿಚ್ಛಿನ್ನ—ಸುತ್ತ ಕತ್ತರಿಸಿದ. ರೌದ್ರಾವಹ—ರೌದ್ರವನ್ನು ತಂದ.

೭೬. ನಿತಂಬಿನಿ—ಸ್ತ್ರೀ. ಬೆಸಕೈ—ಹೇಳಿದಂತೆ ನಡಸು. ಪೂರ್ವಕ್ರಮ—ಹಿಂದಿನ ರೀತಿ. ವನಿತೆ—ಸ್ತ್ರೀ. ಕಳೇಬರ—ಜೀವಹೋದ ದೇಹ.

೭೭. ಸೋದರ್ಯ—ಸೋದರಭಾವ. ಅನಶನ—ಊಟ ಇಲ್ಲದಿರುವಿಕೆ. ಪಟ್ಟಬಂಧನ—ಪಟ್ಟ ಕಟ್ಟುವಿಕೆ. ಪ್ರಸ್ಥಾನಮಾಡು—ಹೊರಡು.

ಮೂಲದ ಕೆಲವು ಭಾಗಗಳು

[ಪ್ರವೇಶದ ಪದ್ಯಗಳು—ಪುಟ ೧]

1-32 ಕೃತಿ ನೆಗೞ್ದ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ
ಕೃತಿಯುಂ ವಿರಚಿಸಿದನಲಂ
ಕೃತಿಯಂ ಕವಿರತ್ನನೆಂದೊಡೇವಣ್ಣಿಪುದೋ

1-33 ಮೊದಲೊಳ್ ಬದ್ಧವಿರೋಧದಿಂ ನೆಗೞ್ದ ಕುಂತೀಪುತ್ರರೊಳ್ ಭೀಮನಂ
ಕನ ಗಾಂಧಾರಿಯ ಪುತ್ರರೊಳ್ಮೊದಲಿಗಂ ದುರ್ಯೋಧನಂ ಧರ್ಮಯು
ದ್ಧದೊಳಂತಾತನನಿಕ್ಕಿ ಕೊಂದನದಱಂ ಭೀಮಂ ಜಯೋದ್ದಾಮನೆಂ
ಬುದನೆಂಬಂತಿದು ವಸ್ತು ಯುದ್ಧಮೆನಿಸಲ್ಪೇೞ್ದಂ ಗದಾಯುದ್ಧಮಂ

1-45 ಒಳಪೊಕ್ಕು ನೋಡೆ ಭಾರತ
ದೊಳಗಣ ಕಥೆಯೆಲ್ಲಮೀಗದಾಯುದ್ಧದೊಳಂ
ತೊಳಕೊಂಡತ್ತೆನೆ ಸಿಂಹಾ
ವಳೋಕನಕ್ರಮದಿನಱಪಿದಂ ಕವಿರನ್ನಂ

1-47 ಕವಿಗಳೊಳಾಪುರಾಣಕವಿಪುಂಗವರೊಳ್ಳಿವರೀಗಳಿಲ್ಲ ಸ
ತ್ಕವಿಗಳಿನಲ್ಲದೇಡವರ ಪೋದೊಡನಂದಿರ ಕಬ್ಬಮಿನ್ನುಮಿ
ರ್ಪವು ಗುಣದೋಷಮಂ ನಿಕಷಮಿಟ್ಟು ಪರೀಕ್ಷಿಸಿ ನೋಡೆ ತಾನೆ ಪೇ
ೞವೆ ಬುಧರಿರ್ದ ನೋೞ್ಪುದು ಪುರಾತನನೂತನಕಾವ್ಯರೇಖೆಯಂ

[ರಸಘಟ್ಟಿಯ ಆರಂಭ—ಪುಟ ೨]

1-52 ಕುರುಭೂಭೃನ್ನಳಕೂಲತೂಲಪವನಂ ಕೌರವ್ಯಗಂಧೇಭಕೇ
ಸರಿ ದುಶ್ಶಾಸನರಕ್ತರಕ್ತವದನಂ ದುರ್ಯೋಧನೋರುಕ್ಷಮಾ
ಧರವಜ್ರಂ ಕುರುರಾಜರತ್ನಮಕುಟೋತ್ಕೂಟಾಂಘ್ರಿಸಂಘಟ್ಟನಂ
ಗರನೆಂದೆಂದಭಿವರ್ಣಿಸೆಂ ರಣಯಶಶ್ರೀರಾಮನಂ ಭೀಮನಂ

ಕರಮಿಂದಾದು ಹಿಡಿಂಬಬಕರಾ
ಸುರರ ಜರಾಸಂಧಸಂಧಿಗಳುಮಂ ಬಕಸಂ
ಹರಣಂ ಕೀಚಕಮಥನಂ
ನಿರಸ್ತಮಿತ್ರವೈರಿನಿವಹಗಜಸಿಂಹಬಲಂ 4-31

ವಿಳಯದುಶ್ಶಾಸನವಕ್ಷಸ್ಥಲೋಹಿತಜಲಾಶ್ಲಿಷ್ಟಂ ಕುರುಪೃಥ್ವೀಧ್ರವ P2
ಪ್ರಳಯಜ್ವಾಲಿ ಸುಯೋಧನೋರುಮಕುಟೋದ್ಘಟ್ಟಪ್ರತಿಜ್ಞಾಕ್ಷರಾ
ವಳಿವಿನ್ಯಸ್ತವಿಶಾಲನಿಶ್ಚಳಶಿಲಾಸ್ತಂಭಂ ಕುರುಕ್ಷೇತ್ರದೊಳ್
ಪ್ರಳಯೋಗ್ರಾಂತಕನಂತಗುರ್ವನೊಳಕೊಂಡಿರ್ದಂ ಹಿಡಿಂಬಾಂತಕಂ 1-53

[ದ್ರೌಪದಿಯು ಜೊಂದ ಮುಡಿ—ಪುಟ ೪]

ವಿಳಯದುಶ್ಶಾಸನವಕ್ಷ
ಸ್ಥಳಶೋಚ್ಚಲತ್ಕೋಷ್ಣರಕ್ತಜಲದಿಂ ಕೋಪಾ
ನಳನಂ ಮುಟ್ಟಿಸದಿನ್ನುಂ
ಗಳ ಗಳಿತಸಕೋಪನಿರ್ದ ತೆಜದಿಂದಿರ್ಪೈ 1-57

ಸಮವಾಯಮುಹಿತರೊಳ್ಸಂ
ಧಿಮಾಡಿ ಯಮಸೂನು ಪೇೞೆ ವನವಾಸವೆ ದಲ್
ನಿಮಗೆ ಶರಣೆನಗಮುಂದ
ಗ್ನಿಮುಖದೆ ಪುಟ್ಟಿದುದಱಿಂದೆ ಶರಣಗ್ನಿಮುಖಂ 1-58

[ಭೀಮನ ಪ್ರತಿಜ್ಞಾವಚನ—ಪುಟ ೮]

ಸತ್ಯಪ್ರತಿಜ್ಞನೆನೆ ಕುರು
ಪತ್ಯೂರುಕಿರೀಟಭಂಗಮಂ ಕಡೆದು ಜಗತ್
ಸ್ತುತ್ಯಕೃತಕೃತ್ಯನೆನಿಸದೆ
ಸತ್ಯಾಶ್ರಯನೆನಿಸನೇ ಮಯ್ಯಾನಾಂಪನೆ ಭೀಮಂ 1-64

ಸೀನಗ್ನಿಪುತ್ರಿಯೈ ಪವ
ಮಾನತನೂಭವನೆ ನಾನಣಂ ಕೂಡೆ ಸುಸಂ

ಧ್ಯಾನಮುಮಿನ್ನು ಪದೊಳಿಂತನ
ಲಾನಿಲಸಂಯೋಗಮುಮಪವರ್ಗನೆ ಪಗೆಯಂ 1-68

ಕುರುನಂದನರಂ ಕೊಂದೆಂ
ಕುರುರಾಜಾನುಜನ ನೆತ್ತರಂ ಕುಡಿದೆಂ ಪ್ರಾ
ಜ್ಞೆರಡಂ ತೀರ್ಚಿದೆನಿರ್ದಪು
ದೆರಡುಮನಂ ತೀರ್ಚ ತೀರ್ಚದಿರ್ದನೆ ಪಗೆಯಂ 1-69

ಊರುಗಳನುಡಿವೆನೊದೆವೆಂ
ಕೌರವಪತಿನಿಧನ ಮಕುಟಮಂ ವೇಣೀಸಂ
ಹಾರಂಮಾಡುವೆನದಱಿಂ
ಘೋರಮೆನಿತಲ್ಲದೆನ್ನ ಪರಿಭವಭಾವಂ 1-70

ದಂಡಿತನ್ನೆರ ವೈರಿಬಲಲೋಹಿತಬಂಧುರದಂಡಮೀಭುಜಾ
ದಂಡಮನುನ್ಮಾದಭೀಕರವಿರೋಧಿವಿದಾರಣದಂಡಮೀಗದಾ
ದಂಡಮನುಗ್ರಪನ್ನಗವಿಭೀಷಣಮಾತನವಂದಮೀಧನು
ರ್ದಂಡಮನುಮ್ಮಳಿಸಂ ನೃಪನಂದನೆ ಸಂಧಿಯನಾಗಲೀವೆನೇ 1-71

[ದುರ್ಯೋಧನನ ವಿಷಾದ— ಪುಟ ೯, ೧೯]

ಅಸುಹೃತ್ಸೇನೆಗೆ ಸಾಲ್ವನೊರ್ವನೆ ಗಡಂ ರುದ್ರಾವತಾರಂ ಗಡಂ
ನೊಸಲೊಳ್ಕಣ್ಣೆಡೆಯೆಂದು ನಚ್ಚಿ ಪ್ರೀತಿದೆಂ ತಾನಕ್ಕೆ ತಮ್ಮನ್ಮನ
ತ್ಯಸಲಂಬಂ ತಿರುವಾಯ್ದು ತಂದಜಾಗದೇ ತಾವಿರ್ದರುಂ ಕಯ್ಯುವಂ
ಬಿಸುಟಿರ್ದ ಜೋಳದ ಪಾಳಿಯಂ ಬಗೆಯದಿಲ್ಲಾ ದ್ರೌಣಿಯುಂ ದ್ರೋಣನ 2-

ತ್ರಿದಶನದೀಸುತನಿಂ ತೀ
ರದ ಕಜ್ಜಂ ಮುನ್ನ ಕಳಶಸಂಭವನಿಂ ತೀ
ರದ ಕಜ್ಜಮಿನಜನಿಂ ತೀ
ರದ ಕಜ್ಜಂ ದ್ರೋಣಪುತ್ರನಿಂ ತೀರ್ದಪುದೇ 3-

ಕಾನೀನಂ ದ್ರೋಣನದೀ
ಸೂನುಗಳಾದಿಂಬಳಿಕ್ಕೆ ಪೆಱಿನಗಿಲ್ಲಂ

ದಾನಿ ಗಳಿತಾಶ್ರುಜಲದಿಂ
ಸೇನಾಪತ್ಯಾಭಿಷೇಕಮಂ ಮಾಡಿದನೇಂ   3-46

[ಮುದುಕರುಗಳ ಬುದ್ಧಿ—ಪುಟ ೨೮, ೨೯]

ಗುರುವಿನ ನೆತ್ತರಂ ಕುಡಿವೆನಲ್ಲದೊಡಂ ದ್ವಿಜವಂಶಜಂ ಪಿತಾ
ಮಹನ ನೆತ್ತರಂ ಕುಡಿವೆನಲ್ಲದೆ ಭೀಮನೆ ಪೇಳ್ದನೆನ್ನ ಭೀ
ಷ್ಮರ ಬಿಸುನೆತ್ತರಂ ಕುಡಿವುದಿನ್ನುವೊಳಂ ಕುರುರಾಜ ಪಿತ್ತ ನೆ
ತ್ತರ ಸವಿನೋಡ್ಪನಂ ಬಗೆದು ಬೇಡಿದನೆಂದುದನೊಂದು ಪುಲ್ಲರಾ 4-43

ಅದಂ ಕೇಳುತ್ತುಂ ಬರೆವರೆ—

ಕದನದೊಳಶ್ವಥಾಮನುಳಿ ಕರ್ಣನುದಗ್ರ ಗುರುಪ್ರಿ ರಾಜ ಪೋ
ಪ್ಪುದುದೊಡಪಿದ್ದ ನಂಜಯಮಿಳ್ಕೆನ್ನರನಂ ಬಿಡಿದನುರುಭಂಗಮಾ
ಗದೆ ವಲಮೊಂದೊರಾಗದೆ ಪುಲ್ಲರಕೊಂದೆಡೆವೋಗಿ ಭೀಮನೊ
ಪದೆ ಪಿಸಗೂರುಭಂಗಭಯಮಾಗದೆ ಪೋಕುಮೆ ಕೌರವೇಶ್ವರಾ 4-41

ಎಂದ ಮರುಳಮಾತು ತನಗೆ ಕರ್ಣಕಠೋರಮಾಗೆ ಪೆರೆಪೆರೆದು ಮನದೊಳ್ ಬೆಬ್ಬಕಡೆದು ತಾಂ ಮಹಾಸತ್ತ್ವನಪ್ಪುದರಿಂದಮೊಂದುಮಂ ಬಗೆಯದೆ ಮರುಳ ಮಾತಿನೊಳ್ಪುರುಳಿಲ್ಲೆಂದರಸಂ ಪೋಗೆವೋಗೆ—

ಅರಗಿನ ಮಾಡದೊಳ್ಪಸದ ಬಿಜ್ಜಗೆಯೊಳ್ಕೊಲಲೆಂದು ಬಂಧುಮಿ
ತ್ರರದೊಳ್ ವೈರಮಂ ಪಡೆದು ಭೀಮನನಿಕ್ಕಿದ ತಕ್ಕ ತಂದ ಪೆಂ
ಮರುಳರೊ ಭೂತಕೋಟಿವೆರಸಾ ಸಮರಂಗದೊಳಾಡುತಿರ್ಪ ತಾಂ
ಮರುಳರೊ ನೋಡ್ಪೊಡಿವರ ಮರುಳ್ತನಮಂ ಧರೆರಾಜಶೇಖರಾ 4-45

ಎನೆ ಸುಯೋಧನಂ ಕೇಳ್ದಿನಗೇಳ್ದು ಮರುಳ ಮಾತಿನೊಳ್ ಪುರುಳಿಲ್ಲೆಂದು ಕಿರುನಗೆಯಂ ಪೋಗೆವೋಗೆ—

ಮಡಿಯದೆ ಪೋಗಲೀಯೆನೆಲೆ ಪೋದೊಡೆ ಧೂರ್ಜಟಿಯಾಣೆ ಮಾರ್ಪೊ
ದೊಡೆ ಕಲಿಭೀಮನಾಣೆಯೆನೆ ಧೂರ್ಜಟಿಯಾಣೆಗೆ ಸಿಂದು ಭೀಮನಿಂ

ಪೊಡೆವ ಮುಗಿಲಟ್ಟೆ ಕುಟ್ಟೆಲರ್ಗಂ ಗದೆಗೊಂಡೊಡೆ ಭೂತಳಕ್ಕೊಳ್ಪುಯು
ಬಡಿಗೊಳೆ ಕಂಜಯುಂ ನಮುದೆ ಬಗ್ಗಿಸಿದಂ ಫಣಿರಾಜಕೇತುವಂ

[ಅಭಿಮನ್ಯು ಆರಾಧನ—ಪುಟ ೩೦, ೩೧]

ಅರೆಮುಗಿದಿರ್ದ ಕಣ್ಗಳುಮಲರ್ದ ಮೊಗಂ ಕಡಿವೋದ ಕೆಯ್ಯುಮಾ
ಸುರತರಮಾಗೆ ಕರ್ಚಿದವುಡುಂ ಬೆರಸಿರ್ಪ ಶರಪ್ರಹಾರದ
ಪರಿತರವೀರನಾಗ ನವಲೋಹಿತವಾರ್ಧಿಯೊಳಿರ್ಪ ಬಾಲನಂ
ಕುರುಪತಿ ನೋಡಿ ಕಂಡನಭಿಮನ್ಯುಕುಮಾರನನಾಜಿವೀರನಂ

ಅಂತಾತನನಚೇತನನಂ ನೋಡಿ

ಗುರು ಪಣ್ಣಿದ ಚಕ್ರವ್ಯೂ
ಹರಚನೆ ಪೆಱರ್ಗರಿದು ಪುಗಲಿದಂ ಪೊಕ್ಕು ರಣಾ
ಜಿರದೊಳರಿನೃಪರನಿಕ್ಕಿದ
ನರಸುತ ನಿನ್ನೊರೆಗೆ ದೊರೆಗೆ ಗಂಡರುಮೊಳರೇ

ಅಸಮಬಲ ಭವದ್ವಿಕ್ರಮ
ಮಸಂಭವಂ ಪೆಱರ್ಗೆ ನಿನ್ನನಾನಿನಿತಂ ಪಾ
ರ್ಥಸುತನೆನಭಿಮನ್ಯು ನಿಜಸಾ
ಹಸೈಕದೇಶಾನುಕರಣಮೆಮಗಕ್ಕೆ ಗಡಾ

ಎಂದಾತ್ಮಗತದೊಳೆ ಬಗೆದು ಅಭಿಮನ್ಯುಕುಮಾರನ ಸಾಹಸಕ್ಕೆ ಮೆಚ್ಚಿ ಈತನಲ್ತೆ ಸಾಹಸಧನನೆಂದು ಕೆಯ್ಮುಗಿದನಂದಭಿಮನ್ಯು ಕೌರವೇಶ್ವರಂ

[ದುಶ್ಶಾಸನ ದರ್ಶನ—ಪುಟ ೩೩]

ನಿಜಜೀವಂ ಪರಲೋಕದೊಳ್ ಜಮನಾನಾಮಾಂಸಂ ಪಿಶಾಚಾಸ್ಯದೊಳ್
ನಿಜರಕ್ತಂ ರಿಪುಕುಕ್ಷಿಯೊಳ್ ನಿಜಶಿರಂ ನಕ್ತಂಚರೀಹಸ್ತದೊಳ್
ನಿಜಕಾಯಂ ಕುರುಭೂಮಿಯೊಳ್ ನೆಲಸೆ ಗಾಂಧಾರೀಜ ಮುಯೋ
ನುಜ ದುಶ್ಶಾಸನ ಭೀಮಭೀಮಗದೆಯಿಂ ಪಂಚತ್ವಮಂ ಪೊರ್ದಿದೈ

ಜನನೀಸ್ತನ್ಯಮನುಂಡೆನಾಂ ಬೞಿಕ ನೀಂ ಸೋಮಾಮೃತಂ ದಿವ್ಯಭೋ
ಜನಮೆಂಬಿಂತವನುಂಡೆನಾಂ ಬೞಿಕ ನೀಂ ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ ಮರಣಕ್ಕೆನ್ನಿಂದೆ ನೀಂ ಮುಂಚಿದಯ್
ಮೊನೆಯೊಳ್ ಸೂೞ್ತಡಮಾಯ್ತಿದೊಂದೆಡೆಯೊಳಂ ಹಾ ವತ್ಸದುಶ್ಶಾಸನಾ 5-7

[ಪ್ರಿಯಸಖ ಕರ್ಣನ ದರ್ಶನ—ಪುಟ ೩೪, ೩೬]

ನೆಗಪಿ ವರೂಥಮಂ ವಸುಧೆ ನುಂಗಿದುದಂ ಸಮಪಾದದಾಸನಂ
ಬಗೆಗೊಳೆ ತನ್ನ ಮುಂ ತೆಗೆದ ದಕ್ಷಿಣಮುಷ್ಟಿಯೆ ಕರ್ಣಮೂಲದೊಳ್
ಸೊಗಯಿಸೆ ಪಾಳಿಯಂ ನೆಱಪದಾಳ್ದನ ಕಜ್ಜಮನೊಕ್ಕು ಸತ್ತರಂ
ನಗುವವೊಲಿರ್ದನಂಗಪತಿ ನೆಮ್ಮಿ ನಿಜೋನ್ನತಕೇತುದಂಡಮಂ 5-10

ಅಂತಿರ್ದ ದಿನಕರತನೂಜನಂ ರಾಜಾಧಿರಾಜಂ ನೋಡಿ ಬಾಷ್ಪವಾರಿಧಾರಾಪೂರಿತಲೋಚನಂ ಮನ್ಯೂದ್ಗತಕಂಠನುಮಸಹ್ಯಶೋಕಾನಲದಹ್ಯಮಾನಾಂತಃಕರಣನುಮಾಗಿ

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕೞಿದ ಬೞಿ
ಕ್ಕಾನುಂ ನೀನೆ ದಲೀಗಳ್
ನೀನುಂ ಮಗುೞ್ದಿತ್ತ ಪೋದೆಯಂಗಾಧಿಪತೀ 5-11

ನಿನ್ನ ಮಗಂ ವೃಷಸೇನಂ
ತನ್ನ ಮಗಂ ಸತ್ತನಣ್ಮ ಲಕ್ಷ್ಮಣನುಂ ನೀ
ನೆನ್ನಂ ಸಂತೈಸುವುದಾಂ
ನಿನ್ನಂ ಸಂತೈಸೆ ಬಂದೆನಂಗಾಧಿಪತೀ 5-13

ಅೞಿಯೆಸಿದಂ ನಿನ್ನಿಂದಿನ
ತೆಱನಂ ನೀನೆನಗೆಯೇಕೆ ಮುಳಿದಿರ್ಪೆಯೊ ಮೇಣ್
ಮಱುಮಾತುಗುಡದೆ ರವಿಸುತ
ಮಱವಿಂದಿರ್ಪೆಯೊ ಮೇಣ್ಬಲ್ಬಿರ್ಪೆಯೋ 5-15

ನಿನ್ನ ಕೆಳೆಯಂ ಸುಯೋಧನ
ನನ್ನೀಡದೆ ನುಡಿಯುದನ್ನೆ ಕೊಳ್ವುದೆ ಬೆಸನೇ
ನೆನ್ನದೆ ಜೀಯೆನ್ನದೆ ದೇ
ವೆನ್ನದೆಯೇ ಕುಸಿರದಿರ್ದೆಯಂಗಾಧಿಪತೀ 5-16

ಅನೃತಂ ಲೋಭಂ ಭಯಮುಂ
ಮೆನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮುಗ್ರಂ
ಮೆನಿತರ್ಕಂ ನೀನೆ ನೊತ್ತನೊಂದಲಿಗನಾದೈ 5-17

ಆನಱಿವೆಂ ಕೃಷ್ಣೆಯುಮಱಿವಳ್
ದಾನವರಿಪುವಱಿವನರ್ಜುನನಱಿವಂ ದಿವ್ಯ
ಜ್ಞಾನಿ ಸಹದೇವನಱಿವಂ
ನೀನಾಗೆಂದಾಡುನಱಿಯದಂಗಾಧಿಪತೀ 5-18

ಒಡವುಟ್ಟಿದನೆಂದಱಿದೊಡೆ
ಕುಡುಗುಂ ರಾಜ್ಯಮನೆ ಧರ್ಮತನಯಂ ನಿನಗಾಂ
ಕುಡಲಾರ್ತೆನಿಲ್ಲ ರಾಜ್ಯ
ಕ್ಕೊಡೆಯನನಱಿಯುತ್ತುಮಿರ್ದೆನಂಗಾಧಿಪತೀ 5-19

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟೈ 7-5
ನೀನುಳ್ಳೊಡುಂಟು ಪೀಱಂಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ 5-2

ಇನಸುತ ಗಾಂಡೀವಿ ಸಂನೋ
ಹನಾಸ್ತ್ರದಿಂದೆಚ್ಚು ನಿದ್ರೆಯಂ ಮಾಡಿದನಂ
ದಿನ ಗೋಗ್ರಹಣದೊಳೀಗಳ್
ನಿನಗಿಂತೀ ದೀರ್ಘನಿದ್ರೆಯಂ ಮಾಡಿದನೇ 5-2

ಮೂಲದ ಕೆಲವು ಭಾಗಗಳು

ಪಸುವಂ ದ್ವಿಜನ್ಮದಾನದೆ
ಪೊಸಜನ್ಮನನುಂ ಸ್ವದಾರಸಂತೋಷದೆ ನಿ
ನ್ನಸುವಂ ಪತಿಕಾರ್ಯದೆ ವ
ಚ್ಚಿಸಿದ್ದೆ ನಿನ್ನನ್ನರಾವನಂಗಾಧಿಪತೀ 5-22

ಹರಿ ಬೇಡೆ ಕವಚಮಂ ನೀ
ನಿರದಿತ್ತೈ ಕೊಂತಿ ಬೇಡೆ ಬಗೆದದೆ ಕೊಟ್ಟೈ
ಪುರಿಗಣೆಯುಮಂ ನಿನಗೆಣೆ ಕಸ
ವರಗಲಿ ಮೆಯ್ಗಲಿಯುಮಾವನಂಗಾಧಿಪತೀ 5-23

ನಯನದೊಳಮೆರ್ದೆಯೊಳಂ ನಿ
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ
ನ್ನಯ ಕಿವಿಯೊಳಗಿನನಂದನ
ವಿಯೋಗಮೆಂತಾದುದಱುಮೆನಂಗಾಧಿಪತೀ 5-24

ನಿನ್ನಂ ಕೊಂದ ಕಿರೀಟಿಯು
ಮೆನ್ನನುಜನನಿಕ್ಕಿ ಕೊಂದ ಭೀಮನುಮೆಳನಾ
ನಿನ್ನನೊಳೆಂ ಗಡ ಸಾಲದೆ
ನಿನ್ನಯ ಕೂರ್ಮೆಗಮದೆನ್ನ ಸೌಧರ್ಮಿಕೆಗಂ 5-25

ಕೆಳೆಯಂಗಾಯ್ತುಮನೋಕ್ಷಮಾಗದೆನಗಂ ಬಾಷ್ಪಾಂಬುವೋಕ್ಷಂ ಧರಾ
ತಳಮಂ ಕೊಟ್ಟೆನೆ ನಿಮಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲನ್ನವಂ
ಡಳಮಂ ಸುಟ್ಟೆನೆ ನಿಮಂ ಪ್ರತಾಪಶಿಖಿಯಿಂದಾನೀತನಂ ಸತ್ತ್ವದಾ
ನಳನಿಂ ಸುಟ್ಟೆನುಮಿಲ್ಲ ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ 5-31

ದರಹಾಸಪೇಶಲಂ ದಿ
ಕ್ಕರಿಗಮನಂ ಕನಕಪರ್ವತಪ್ರಾಂಶು ದಿನೇ
ಶ್ವರಸುತನ ರೂಪು ಚಿತ್ರಂ
ಬರೆದಂತಿರ್ದಪುದು ಚಿತ್ತಭಿತ್ತಿಯೊಳೆನ್ನಾ 5-34

ಗುರು ದೀಕ್ಷಾವಿಧಿಗಳ್ಗೆ ಮಂತ್ರಿ ಹಿತಕಾರ್ಯರ್ಗಾಲೋಚನಕ್ಕಾಳ್ದನು
ರ್ವರೆಯುಂ ಕಾವ ಗುಣಕ್ಕೆ ನರ್ಮಸಚಿವಂ ಕ್ರೀಡಾರಸಕ್ಕಾನೆಯೊಳ್
ಗುರುಭಾರಕ್ಕೆಱುವಾಳ್ಪಣಕ್ಕೆ ತುಲಾಲಾಳ್ಪಟ್ಟಾಯುದೊಳ್ಕೆಯ್ದಾಳ್
ಪರಿಹಾಸಕ್ಕೆನಿಸಿರ್ದನೆಂತು ಮಱೆವಂ ದುರ್ಯೋಧನಂ ಕರ್ಣನಂ 5

[ಭೀಷ್ಮರ ಶರಶಯನ—ಪುಟ ೩೮]

ನರಶರಕೋಟಿ ಜರ್ಜರಿಸೆ ತನ್ನ ಶರೀರಮನಸ್ತ್ರವೇದನಾ
ಪರವಶನಾಗಿಯುಂ ಮಱೆವನಿಲ್ಲ ಮುಕುಂದನನೇಕಚಿತ್ರದಿಂ
ಸ್ಮರಿಯಿಸುತಿರ್ದನಿತ್ತ ಕುರುಭೂಪತಿಗೀಗಳಿದೆಂತುಟಾದುದೇ
ಕುರುಪತಿಗೆಂದನಾ ಪರಮಯೋಗಿಗೆ ದೇಹದ ಮೋಹಮಾಗದೇ 5-38

[ದುರ್ಯೋಧನನ ಛಲ—ಪುಟ ೯೧, ೯೨]

ನಿಮಗೆ ಪೊಡಮಟ್ಟು ಪೋಪೀ
ಸಮಕಟ್ಟಿಂ ಬಂದೆನಹಿತರೊಳ್ ಸಂಧಿಯನೇಂ
ಸಮಕೊಳಿಸಲೆಂದು ಬಂದೆನೆ
ಸಮರದೊಳೆನಗಣ್ಣ ನೀಟಿಮಾಪ್ಪುದು ಕಜ್ಜಂ 5-45

ಛಲಮುಂಗಂಡುಮನಪ್ಪುಕೆಯ್ವನಗಮಾ ಕೌಂತೇಯರೊಳ್ ಸಂಧಿಯೇ

ನೆಲಕಿಱುವೆನೆಂದು ಬಗೆದಿರೆ
ಛಲಕಿಱುವೆಂ ಪಾಂಡುಸುತರೊಳೀನೆಲನಿದು ಪಾ
ಬಿಸಿಲನೆನಗೆ ದಿನಪಸುತನಂ
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ಪೆನೇ 5-47

ಖಂಡಿತಮೆನಿಪ್ಪ ಪರಮಹಿ
ಮಂಡಲಧವಳಾತಪತ್ರಸಂಪದಮೆನಗೇ
ಭಂಡಮುದನೊಲ್ಲೆ ನೊಲ್ಲೆನ
ಖಂಡಿತಮಭಿಮಾನಮದನೆ ಬಳ್ವಿಡಿವಿಡಿನೆಂ 5-53

[ಕೃಪಾಚಾರ್ಯರ ನೀತಿ—ಪುಟ ೪೩]

ಜತುಗೇಹಾನಲದಿಂ ಜಲಾಗ್ರವಿಷಸಂಚಾತಾಂಕುರಂ ಕ್ರೀಡೆಯಿಂ ದ್ಯೂತಕ್ಕೆ ದ್ಯೂತವಿನೋದದಕ್ಷವಚಯಮಂ ಪಾಂಚಾಲರಾಜಾತ್ಮಜಾ ಯುತಕೇಶಗ್ರಹಪುಷ್ಪವಮುಂ ಬಳೆದುದಾಸ್ಯದಸ್ತ್ರಮಂ ಕೌರವ ಕ್ಷಿತಿಪಾಲೋರುಕಾರೋರುಭಂಗಭಯಮಂ ಪೇಳ್ವೊಡದೇಂ ಪೋಕುಮೇ 7-41

[ಭೀಷ್ಮನು ಬರೆದಟ್ಟಿದ ಪತ್ರ—ಪುಟ ೪೨]

ಶರಮೊಂದಂ ತೆಗೆದು ನಿಜೋ
ದರದಿಂ ಲೆಕ್ಕಣಿಕೆಮಾಡಿ ಗಜಮದಮಸಿಯಿಂ
ತರಿಸಿ ಪತಾಕಾಪಟದೊಳ್
ಬರೆದಟ್ಟಿದನಂಧನೃಪತಿಗಾ ಸಿಂಧುಸುತಂ 6-2

ಅಂತು ನಿಜನಾಮಾಂಕಿತಲೇಖನಮಂ ಬರೆದು ಪೊಸಮ್ಮಿಂ ಮುಡಿದ ಮುಡಿಯನೆಂತುಮೊಡಂಬಡುವನಲ್ಲಂ ನೀನುಂ ಗಾಂಧಾರಿಯುಮಿರ್ದು ಕುರುಕುಲಪ್ರದೀಪ ದುರ್ಯೋಧನನಂ ಕೌಂತೇಯರೊಳೆತ್ತಾನುಂ ಸಂಧಿಯಂ ಮಾಡಿ ಪೂರ್ವಕ್ರಮದೊಳ್ ನಡೆವಂತು ಮಾಳ್ಪುದೆಂದು ಸಂಜಯನ ಕೆಯ್ಯೊಳಟ್ಟಿಂ 6-2x

[ಭೀಷ್ಮೋಪದೇಶ—ಪುಟ ೪೪]

ಮಗನೆ ನೀನೆಂತುಮೆಮ್ಮ ಪೇಳ್ದುದಂ ಕೈಕೊಳ್ಳದೆ ಛಲಮನೆ ಕೈಕೊಂಡು ಪಾಂಡುನಂದನರೊಳ್ ಕಾದಿದಲ್ಲದಿರೆನೆಂಬೆಯಪ್ಪೊಡೆ ತೀರ್ಥಯಾತ್ರೆಗೆ ಪೋದ ಬಲದೇವಂ ಬರ್ಪನ್ನೆಗಂ ನೀನಿರ್ದೆಡೆಯನಱಿಯದಂತು ಮೆಯ್ಗರೆದು ಅಶ್ವತ್ಥಾಮ ಕೃಪ ಕೃತವರ್ಮರ್ ಬರ್ಪನ್ನೆಗಂ ಕಾಲವಂಚನೆಗೆಯ್ವುದು ಮೇಣ್ ಜಲಮಂತ್ರವಿದ್ಯಾಭ್ಯಾಸಮಂ ಕೆಯ್ಕೊಂಡು ಕುರುಕ್ಷೇತ್ರದುತ್ತರ ದಿಶಾಭಾಗದೊಳಿರ್ಪ ವೈಶಂಪಾಯನ ಸರೋವರಮಂ ಪೊಕ್ಕಿರ್ದು ಇಂದಿನೊಂದಿರುಳಂ ಕಳಿಪಿ ನಾಳೆ ನಿಮ್ಮ ನೆಗಳ್ದುದಂ ನೆಗಳ್ವುದು 67x

[ಭೀಮನ ಸಿಂಹಗರ್ಜನೆ—ಪುಟ ೪೯]

ಧೃತರಾಷ್ಟ್ರಾಪತ್ಯ ಕಂಜಪ್ರಿಯಸುತಸಖನೇಕಾದಶಾಕ್ಷೋಹಿಣೀಶಂ
ಕೃತಕದ್ಯೂತಪ್ರನಾಥೀಕೃತಯಮಸುತಭೀಮಾರ್ಜುನಂ ದ್ರೋಣ ಭೀಷ್
ಚಿತವಾಕ್ಯದ್ವೇಷಿ ಕೃಷ್ಣಾಂಬರಕಬರಿಹರಂ ಶೋಕತೀವ್ರಾಗ್ನಿದಗ್ಧಂ
ಸುತಶೋಕಾಕ್ರಾಂತನೆಲ್ಲಿರ್ದನೊ ನೃಪತಿಲಕಂ ನಿಮ್ಮ ರಾಜಾಧಿರಾಜಂ 6-31

[ಭೀಮನ ಮೂದಲೆ—ಪುಟ ೫೪]

ಜಳದೊಳ್ ಮೀನಿರ್ಪವೊಲ್ನೀಂ ಕೊಳದೊಳೆ ಮುಳುಗಿರ್ದಕ್ಕುಟಾಕೋಟಿ
ಗೊಳಗಾದೈ ನಿನ್ನ ದುರ್ಯೋಧನನೆನಗಿದು ಲಜ್ಜಾಕರಂ ತೋಱದೈ ನಿ
ನ್ನಳವಂ ಭೀಃ ಕ್ಷತ್ರರೇಂ ಪುಟ್ಟರೆ ಪೊಱಮಡು ನೀಂ ಕೈದುಗೊಳ್ ಕೌರವೇಂ
ಚಳವಜ್ರಂ ಬಂದನೀಗಳ್ ಕುರುಕುಲಮಥನೋದ್ರೇಕರಂ ಭೀಮಸೇನಂ 7-

ಹರಿ ಸಂಧಾನಕ್ಕೆ ವಂದಂದವಗಡಿಸಿದಹಂಕಾರಮೆಲ್ಲಿತ್ತೊ ಕೃಷ್ಣಾಂ
ಬರಕೇಶಾಕೃಷ್ಟಿಯಂ ಮಾಡಿಸಿದ ಮದಮದೆಲ್ಲಿತ್ತೊ ಕೌಂತೇಯರಂ ನು
ಚ್ಛ್ರದಿಂ ಕಾಂತಾರದೊಳ್ತಿಜನೆ ತಿರಿಪಿದ ಸೊರ್ಕೇಗಳೇನಾದುದೆಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮಭೀಮ 7-

ಎನಿತುಂ ಪೊಕ್ಕಿರ್ದಪೈ ನೀಂ ಪೊಱಮಡು ಕೊಳದಿಂ ದ್ರೌಪದೀದ್ರೋಹ
ಪನದುಷ್ಟಕ್ಷೇಪ ಭೀಷ್ಮಪ್ರಮುಖನಿಖಿಲಬಂಧುಕ್ಷಯೋತ್ಪನ್ನದುಃಖ
ಧ್ವನಿವಾರಿಟ್ಟಿನ್ನಧೈರ್ಯದ್ಯುಮ ಯಮಸುತನಿಷ್ಕಾರಣದ್ವೇಷಿ ಭೀಮ
ಧ್ವನಿಯಂ ಕೇಳ್ದಿನ್ನುಮಿರ್ದೈ ಕುರುಕುಲನಿಲಯೋತ್ಪಾತನೋತ್ಪಾತಕೇ 7-

[ದುರ್ಯೋಧನನ ನಿರ್ಗಮನ—ಪುಟ ೫೪, ೫೫]

ಆ ರವಮಂ ನಿರ್ಜಿತಕಂ
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದಂ ಚಿಮಂತ್ರನುರಗಪತಾಕಂ 7-22

ರಸೆಯಿಂ ಕಾಲಾಗ್ನಿರುದ್ರಂ ಪೊಱಮಡುವವೊಲಂತಾಸರೋಮಧ್ಯದಿಂ ಸ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟಿಲ್ಲಿದಂ ಭೀಮನೆಂದೆ

[illegible]
[illegible] 7-30

[[illegible]]

[illegible]
[illegible]
[illegible]
[illegible] 8-20

[illegible]
[illegible]

[illegible]
[illegible]
[illegible]
[illegible] 8-26

[[illegible]]

[illegible]
[illegible]
[illegible]
[illegible] 8-31

[[illegible]]

[illegible]
[illegible]
[illegible]
[illegible] 8-35

ತಿಳಿದಾಗಳ್ಕೆಱಸಿಂತುಟೆಂದು ನೆಲನಂ ಮಾಱುದ್ದಿ ಕೆಯ್ಯಿಂ ಧರಾ
ತಳದೊಳ್ ಸಾಸಿದ ತನ್ನ ತೀವ್ರಗದೆಯಂ ಕಂಡೆತ್ತಿಕೊಂಡಂಬರ
ಸ್ಥಳದಿಂದಂ ಸಿಡಿಲೇಟ್ಟಿಗೆಯಿಂದೆಱಗಿ ಪೊಯ್ವಾಗಳ್ ಗದಾದಂಡದಿಂ
ಮುಳಿದಿಟ್ಟಂ ಕಲಿ ಸತ್ತಿಗಂ ಕುರುಕುಳಪ್ರಚಂಡೋರುದಂಡಂಗಳಂ 8-36

ಇಡೆ ತೊಡೆಯುನುಡಿದು ನೆಟ್ಟನೆ
ಕೆಡೆಯುತ್ತುಂ ಕರ್ಚಿ ನೆಲನನಾನಿದನೆಂತುಂ
ಬಿಡೆನೆಂಬ ತೆಱದೆ ಕುಲಗಿರಿ
ಕೆಡೆವಂದದೆ ಕೆಡೆದು ಕೌರವೇಂದ್ರಂ ಮಡಿದಂ 8-37

ಅಂತು ದಿಕ್ಕರಿಕರಾನುಕಾರಿಗಳಪ್ಪ ನಿಜಭುಜಸ್ತಂಭಂಗಳಿಂ ಕುರುಕುಲಮಹೀಶನ ಕದಳೀಸ್ತಂಭಂಗಳನನುಕರಿಸುವ ತೊಡೆಗಳನುಡಿದು ಅಶ್ರಮದೊಳ್ ಪುಡಿಯೊಳ್ ಪೊರಳ್ಚಿ ತನ್ನ ಮುನ್ನ ನುಡಿದೂರುಭಂಗ ಪ್ರತಿಜ್ಞೆಯಂ ತೀರ್ಚಿ ಮಕುಟಭಂಗಪ್ರತಿಜ್ಞೆಯಂ ತೀರ್ಚಲೆಂದು ಕೋಪದಿನೊವೆಯಲ್ಕೆ ಸಾರ್ತರೆ 8-37ಗ

ಬಲದೇವಾದಿಗಳಾಗದಾಗದೊದೆಯಲ್ಕೇಕಾದಶಾಕ್ಷೋಹಿಣೀ
ಬಲಲಕ್ಷ್ಮೀಪತಿಯಂ ಪರಾಭವಿಸದಿರ್ ಚಿಃ ತಕ್ಕುದಲ್ಲೆಂದು ಮಾ
ಕೋರ್ಳಲುಂ ಮಾಣದೆ ಭೀಮಸೇನನೊದೆದಂ ವಾಮಾಂಘ್ರಿಯಿಂ ರತ್ನಮ
ಡಳರಶ್ಮಿಪ್ರಕಟಜ್ವಲನ್ಮಕುಟಮಂ ಕೌರವ್ಯರಾಜೇಂದ್ರನಾ 8-39

[ದ್ರೌಪದಿಯ ಕೇಶಪಾಶ—ಪುಟ ೬೬, ೬೭]

ಇದಱೊಳ್ಮೂರ್ಧಾಭಿಷಿಕ್ತರ್ಮಣಿಮುಕುಟಧರರ್ ಕೃಷ್ಣೆ ಬಾಹಾಬಳಾಗ್ರ
ಕದನಪ್ರೋಚ್ಚಂಡದಂಡಕ್ರಮವಿಜಿತರಿಪುಕ್ಷತ್ರಿಯರ್ ವೀರಲಕ್ಷ್ಮೀ
ಸದನರ್ಸೋಮಾನ್ವಯಾಸ್ವಾದನರುಚಿವದನರ್ ಮುನ್ನಮಱ್ಕಾಡಿದರ್ ನೆ
ಡಿದು ನಿನ್ನೀ ಕೇಶಪಾಶಂ ಕುರುಪತಿಗಾಯ್ತುಲ್ತೆ ಕೀನಾಶಪಾಶಂ 8-47

[ಲಕ್ಷ್ಮೀವಿಡಂಬನ—ಪುಟ ೭೦, ೭೧]

ದ್ರೋಣನಂದನಂ ನಾರಾಯಣಂ ಬೆಸಸೆ ಪೋದಪೆನೆಂದ ಲಕ್ಷ್ಮಿಯು ಮಾತನವಧಾರಿಸಿ ಮುಗುಳ್ನಗೆ ನಕ್ಕು

ಚಳಮತಿಯಾದೆ ನೀಂ ಜಡಧಿಸಂಭವೆಯುಪ್ಪುದಱಿಂ ಸರೋಜಸಂ
ಕುಳರಜದಿಂದೆ ನೀಂ ಪೊರೆದು ರಾಜಸದೊಳ್ ನೆಲಸಿರ್ಪೆ ಗೋವುಗಾ
ದಳವಱಿದಿರ್ದ ಕೃಷ್ಣನೊಡಸಿರ್ದುದಱಿಂದವೆ ಗೋವಿಯಾಡೆಯು 9-5
ಗ್ಗಳದ ವಿವೇಕಮಿಲ್ಲ ನಿನಗೆತ್ತಱಿವಾ ಪುರುಷಾಂತರಂಗಳಾ

ಕಲಿ ಪಂದೆಯೆಂದು ಬಗೆಯದೆ
ಕುಲಜಂ ಕುಲಹೀನನೆಂದು ಬಗೆಯದೆ ತರುಣಂ
ಸಲೆ ವೃದ್ಧನೆಂದು ಬಗೆಯದೆ
ನೆಲಸುವೆ ನಿನ್ನಿಂ ನಿಕೃಷ್ಟರೆಂಬರುಮೊಳರೇ 9-6

ಇಱಿಯಿಸುವೆ ತಂದೆಮಕ್ಕಳ
ನಿಱಿಯಿಸುವೈ ಸೋದರರ್ಕಳಂ ತಮ್ಮೊಳ್ತ
ಬ್ತಿಱಿಯಿಸುವೈ ಗುರುಶಿಷ್ಯರ
ನಱುಗುಲಿ ನಿನ್ನಿಂ ನಿಕೃಷ್ಟರಾದರುಮೊಳರೇ 9-7

ಕುರುರಾಜಂ ರಾಜರಾಜಂ ಸಕಲವಸುಮತೀಕಾಂತನಿರ್ದಂತೆ ಯುದ್ಧಾ
ದರನೀ ಸಾಹಸಾಂಕಂ ಕುರುಕುಳಪತಿಯಿರ್ದಂತೆ ಪೆಳ್ಪಟ್ಟು ದಾಮೋ
ದರನೆಂದೀಕಜ್ಜದೊಳ್ನೀಂ ತೊಡರ್ದು ಮರುಳೆ ಬೆಂಡಾಗದಿರ್ಪೋಗು ನೀಂ ಚೆ
ಚ್ಚರಮತ್ತಿನ್ನೆತ್ತವೋಪೌ ಪರಿಭವಿಸಿದಪೆಂ ನಿನ್ನನಿಂ ಕಾವನಾವೊಂ 9-15

ಎಂದಶ್ವತ್ಥಾಮನುದ್ದಾಮಕೋಪಾಟೋಪಬದ್ಧಭ್ರುಕುಟಿತರಳತಾಮ್ರ
ಲೋಚನನುಮಾಗೆ

ಅತ್ತಲಸುರಾರಿ ಬೆಸಸಿದ
ನಿತ್ತಲ್ ರುದ್ರಾವತಾರನೆಱಿದುಯ್ದಪನೆಂ
ದತ್ತ ಪುಲಿಯಿತ್ತ ದರಿಯೆಂ
ದತ್ತಿತ್ತಡಿಯಿಡದೆ ಲಕ್ಷ್ಮಿ ತಳಪೆಳಗಾದಳ್ 9-16

[ಪಾಂಡವಬಾಲವಧ—ಪುಟ ೭೩]

ಅಶ್ವತ್ಥಾಮಂ ಪಾಂಡವರ ಶಂಕೆಯಿಂ ಶ್ರುತಸೋಮಕ ಪ್ರಭೃತಿ
ಗಳಪ್ಪ ಪಂಚಪಾಂಡವರ ತಲೆಗಳಂ ಕೊಂಡು ತಱತಱನೆ ನೇಸಮೂರ್ಡು

ವಾಗಳ್ ಬಂದು ಕೊಳ್ ನಿನ್ನ ನೆಚ್ಚಿನ ಪಾಂಡವರ ತಲೆಗಳಿವೆಯೆಂದ ದುರ್ಯೋಧನನ ಮುಂದಿಕ್ಕಿದೊಡಾ ಮಹಾನುಭಾವನಾ ತಲೆಗಳಂ ನೀಡು ಭಾವಿಸಿ ನೋಡಿ

ಪವನಜನಾಸ್ಯಮಲ್ತಿದವನಾನನಮಪ್ಪೊಡೆ ಮಟ್ಟಮಿರ್ದುದೇ ನೋ
ಡುವುದೆ ಮನೀಯವಕ್ತ್ರಮನೆ ಕೆಮ್ಮನೆ ಪೋಯ್ತು ಜೀವಿಲ್ಲದಾಯ್ತು ಪಾಂ
ಡವರ ಶಿರಂಗಳಲ್ಲಿವು ಕೃಷ್ಣೆಯ ಸೂನುಗಳಪ್ಪ ಪಂಚಪಾಂ
ಡವರ ಶಿರಂಗಳಂ ನೆಜಂ ವಿಚಾರಿಸದಕ್ಕಟ ಕೊಂಡು ಬರ್ಪುದೇ

ಪರಮೇಶ್ವರಾವತಾರನೆ
ಪರಮಜ್ಞಾನಿಯೆ ವಿವೇಕವಿಕಳರವೋಲ್ ಬಾ
ಲರ ತಲೆಯನರಿದು ತಂದೆಯೊ
ದೊರೆಕೊಂಡುದು ನಿನಗೆ ಪಾತಕಂ ಬಾಲವಧಂ 9-34

[ದುರ್ಯೋಧನನ ಪ್ರಾಣವಿಸರ್ಜನ—ಪುಟ ೭೯]

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಮುಗ್ರತೇ
ಜಂ ಕಿಡುತಿರ್ಪಿನಂ ನಿಜಕರಂಗಳನಂದುಡುಗುತ್ತಮಿರ್ದು ಚ
ಕ್ರಾಂಕಮಗಲ್ವಿನಂ ಕ್ರಮದಿನಂಬರಮಂ ಬಿಸುಟುರ್ಬಿನಂಧಕಾ
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೈಯ್ದಿದರ್ 9-35

[ಭೀಮನ ಪಟ್ಟಬಂಧೋತ್ಸವ—ಪುಟ ೭೭, ೭೮]

ದೆಸೆಯಂ ತೆಕ್ಕನೆ ತೀವೆ ತಾಟಿತಮಹಾಭೇರೀರವಂ ವಿಪ್ರರ
ಶ್ಶೀಸೆಯೊಳ್ವೇದನಿನಾದದಿಂ ಪರಸೆ ಪಂಕೇಜಾಕ್ಷಿಯರ್ಕರ್ಪಡಿ ಸಂ
ತಸದಿಂ ಸೇಸೆಯನಿಕ್ಕೆ ಪಾಂಡವಬಲಪ್ರಾಕಾರವೀರಂಗೆ ಸಾ
ಹಸಭೀಮಂಗೆ ಮನೋಮುದಂಬೆರಸು ಕೃಷ್ಣಂ ಕಟ್ಟಿದಂ ಪಟ್ಟಮಂ

10-24

ಬಿ. ಬಿ. ಡಿ. ಪವರ್ ಪ್ರೆಸ್, ಅಕ್ಕೀಪೇಟೆ, ಬೆಂಗಳೂರು ನಗರ.

‘ಗದಾಯುದ್ಧ’ದಲ್ಲಿ ಪ್ರೌಢವಾದ ದೀರ್ಘ ಸಂಸ್ಕೃತ ಸಮಾಸಗಳೂ ಈಗ ಬಳಕೆಯಲ್ಲಿಲ್ಲದ ಹಳಗನ್ನಡವೂ ತುಂಬಿವೆ. ಈ ‘ರಸಘಟ್ಟಿ’ಯಲ್ಲಿ ಆ ಸಮಾಸಗಳನ್ನು ಸುಲಭವಾಗುವಂತೆ ಬಿಡಿಸಿಕೊಟ್ಟು, ಆ ಕಾಲದ ಹಳಗನ್ನಡಕ್ಕೆ ಸಮನಾದ ಈ ಕಾಲದ ಹೊಸಗನ್ನಡಗಳನ್ನು ತಂದು, ಈ ಪುಸ್ತಕವನ್ನು ರಚಿಸಿದೆ.

ಈ ಪದ್ಧತಿಯ ಈ ‘ರಸಘಟ್ಟಿ’ಯನ್ನು ಮೊದಲು ಓದಿ, ಅನಂತರ ಈ ಅನುವಾದಕ್ಕೆ ಮೂಲವಾದ ‘ಗದಾಯುದ್ಧ’ದ ಭಾಗಗಳನ್ನು ಓದಿದರೆ, ಹಳಗನ್ನಡದ ಪರಿಚಯವಿಲ್ಲದವರಿಗೆ ಕೂಡ ಹಳಗನ್ನಡ ಹತ್ತಿರವಾಗುತ್ತದೆ.

ಮೇಲೆ ಹೇಳಿದ ಮಾತಿನ ಸತ್ಯತೆ ನೋಡಬೇಕಾದರೆ ಪುಸ್ತಕದ ಕೊನೆಗೆ ಕೊಟ್ಟಿರುವ ಮೂಲದ ಕೆಲವು ಭಾಗಗಳನ್ನೂ ಅದಕ್ಕೆ ಹೊಂದಿದ ಹೊಸ ಗದ್ಯಾನುವಾದಗಳನ್ನೂ ಹೋಲಿಸಿ ನೋಡಬಹುದು.

ಕನ್ನಡದಲ್ಲಿ ಇದು ಒಂದು ಹೊಸ ಪ್ರಯೋಗ.

ಇದರಿಂದ ಎರಡು ಕಾರ್ಯ ಸಾಧನೆಯಾಗುತ್ತದೆ: ಒಂದು—ಪ್ರಾಚೀನರಾದ ಮಹಾಕವಿಗಳ ಕೃತಿಗಳ ಪರಿಚಯವಾಗುತ್ತದೆ; ಎರಡು—ಹಳಗನ್ನಡಕ್ಕೆ ಬಹು ಸುಲಭವಾಗಿ ಪ್ರವೇಶ ಸಿಕ್ಕುತ್ತದೆ.

ಇದೇ ಮಾದರಿಯ ಗದ್ಯಾನುವಾದಗಳು

ಪಂಪಭಾರತಸಾರ—ಪೂರ್ವಭಾಗ

ಪಂಪಭಾರತಸಾರ—ಉತ್ತರಭಾಗ

ಕನ್ನಡ ಕಾದಂಬರಿಯ ಕಥಾಸಾರ

[ಅಚ್ಚಿನಲ್ಲಿದೆ.

ಇದೇ ಗ್ರಂಥಕರ್ತರ ಇತರ ಪುಸ್ತಕಗಳು

೧. ಕೈಲಾಸಂ ಅವರ ಕೀಚಕ

ಕೈಲಾಸಂ ಅವರು ಕೀಚಕನನ್ನು ಕುರಿತು ಇಂಗ್ಲಿಷಿನಲ್ಲಿ ಬರೆಯಬೇಕೆಂದಿದ್ದರು. ಆದರೆ ಬರೆಯುವ ಮೊದಲೇ ಅವರು ತೀರಿಕೊಂಡರು. ಅವರ ಮುಖದಿಂದಲೇ ಅದನ್ನು ಆಮೂಲಾಗ್ರವಾಗಿ ಕೇಳಿ ತಿಳಿದಿದ್ದ ಶ್ರೀ ಬಿ. ಎಸ್. ರಾಮರಾಯರ ಜ್ಞಾಪಕದ ಆಧಾರದಿಂದ ಶ್ರೀ ರಾಜರತ್ನಂ ಅವರು ಕೈಲಾಸಂ ಅವರ "ಕೀಚಕ"ವನ್ನು ಕನ್ನಡದಲ್ಲಿ ಉಳಿಸಿಕೊಟ್ಟಿದ್ದಾರೆ.

ಪುಟ ೧೨೦ .... ರೂ. ೧ ೮ ೦

೨. ಸ್ವತಂತ್ರಭಾರತದ ಅಶೋಕಚಕ್ರಧ್ವಜ

ಸ್ವತಂತ್ರಭಾರತದ ರಾಷ್ಟ್ರಧ್ವಜದಲ್ಲಿರುವ ತ್ರಿವರ್ಣಗಳಿಗೆ ಏನು ಅರ್ಥ? ಅದರ ನಡುವಿನ ಚಕ್ರ ಎಲ್ಲಿಂದ ಬಂತು? ಆ ಚಕ್ರದ ಚರಿತ್ರೆಯೇನು? ಅದರ ಮಹತ್ತ್ವವೇನು? ಅದನ್ನು ನೀಲಿಯ ಬಣ್ಣದಲ್ಲಿ ಏಕೆ ಚಿತ್ರಿಸುತ್ತಾರೆ? ಈ ಚಕ್ರವನ್ನು 'ಅಶೋಕಚಕ್ರ'ವೆಂದೂ 'ಧರ್ಮಚಕ್ರ'ವೆಂದೂ ಕರೆಯಲು ಕಾರಣವೇನು? ಈ ಚಕ್ರಕ್ಕೆ ೨೪ ಅರಗಳು ಏಕೆ? ನಮ್ಮ ರಾಷ್ಟ್ರಧ್ವಜ ಹುಟ್ಟಿದ್ದು ಯಾವಾಗ? ಬೆಳೆದದ್ದು ಹೇಗೆ? ಈ ಧ್ವಜ ಸಾರುವ ಸಂದೇಶ ಎಂತಹುದು?—ಎಂಬ ಇವೇ ಮೊದಲಾದ ಅನೇಕ ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿ ಉತ್ತರವಿದೆ.

ಪುಟ ೧೦೦ ತುಂಬ ಚಿತ್ರಗಳು ರೂ. ೧ ೮ ೦

೩. ಪಂಪಭಾರತಸಾರ—ಪೂರ್ವಭಾಗ

'ರನ್ನನ ರಸಘಟ್ಟಿ'ಯ ಮಾದರಿಯ ಪುಸ್ತಕ. 'ಪಂಪಭಾರತ'ವನ್ನು ಸಂಗ್ರಹಿಸಿ, ಅದನ್ನು ಹೊಸಗನ್ನಡಕ್ಕೆ ಅನುವಾದಮಾಡಿದೆ. ಇದರ ಸಹಾಯದಿಂದ ಮೂಲವನ್ನು ಓದಬಹುದು. ಈ ಪೂರ್ವಭಾಗದಲ್ಲಿ ಮೊದಲಿನಿಂದ ಹಿಡಿದು ವಿರಾಟಪರ್ವ ಪೂರ್ತಿಯಾಗುವ ವರೆಗಿನ ಕಥೆಯಿದೆ.

ಪುಟ ಸುಮಾರು ೨೦೦ .... [ಸೆಪ್ಟೆಂಬರ್ ಪ್ರಕಟನೆ

ಹಿಂದ್ ಕಿತಾಬ್ಸ್ ಲಿಮಿಟೆಡ್ (ಬೊಂಬಾಯಿ)

೧೧, ಜವಾಹರಲಾಲ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು ೩